بِسۡمِ اللّٰہِ الرَّحۡمٰنِ الرَّحِیۡمِ نَحْمَدُہٗ وَنُصَلِّی عَلٰی رَسُوْلِہِ الْکَرِیْمِ وَعَلٰی عَبْدِہِ الْمَسِیْحِ الْمَوْعُوْدِ

وَلَقَدۡ نَصَرَکُمُ اللّٰہُ بِبَدۡرٍ وَّاَنۡتُمۡ اَذِلَّۃٌ

ಕನ್ನಡ ಬದರ್ ವಾರ ಪತ್ರಿಕೆ
WEEKLY BADAR QADIAN KANNADA

ವರ್ಷ: 02
ಸಂಚಿಕೆ: 43
ವಾರ್ಷಿಕ ಶುಲ್ಕ ರೂ.575/-
ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

28 ಅಕ್ಟೊಬರ್ 2021, 28 ಅಖಾ 1400 ತಬ್‌ಲೀಗ್ ಹಿಜರಿ ಶಮ್‌ಸಿ,
21 ರಬೀಉಲ್ ಅವ್ವಲ್ 1443 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰھُمَّ اَیِّدْ اِمَامَنَا بِرُوْحِ الْقُدُسِ
وَبَارِکْ لَنَا فِیْ عُمُرِہٖ وَاَمْرِہٖ

## ಅಲ್ಲಾಹನ ಉಪದೇಶ

اِنَّمَا یُرِیۡدُ الشَّیۡطٰنُ اَنۡ یُّوۡقِعَ بَیۡنَکُمُ
الۡعَدَاوَۃَ وَالۡبَغۡضَآءَ فِی الۡخَمۡرِ
وَالۡمَیۡسِرِ وَیَصُدَّکُمۡ عَنۡ ذِکۡرِ اللّٰہِ
وَعَنِ الصَّلٰوۃِ ۚ فَہَلۡ اَنۡتُمۡ مُّنۡتَہُوۡنَ

(ಅಲ್‌ಮಾಇದ: 92)

ಅಂದರೆ: ಮದ್ಯಪಾನ ಮತ್ತು ಜೂಜು ಮೂಲಕ ನಿಮ್ಮೊಳಗೆ ವೈರತ್ವವೂ ದ್ವೇಷ ಭಾವನೆಯೂ ಉಂಟಾಗಬೇಕೆಂದೂ ಅಲ್ಲಾಹನ ಸ್ಮರಣೆ ಮತ್ತು ನಮಾಝ್‌ನಿಂದ ನಿಮ್ಮನ್ನು ತಡೆಯಬೇಕೆಂದೂ ಶೈತಾನನು ಖಂಡಿತವಾಗಿಯೂ ಬಯಸುತ್ತಾನೆ. ಹಾಗಿರುವಾಗ ನೀವು ಪರಾಙ್ಮುಖರಾಗುವುದಿಲ್ಲವೇನು?

## ಪ್ರವಾದಿ ಮುಹಮ್ಮದ್[ಸ]ರವರ ಉಪದೇಶ

### ಯಾರಿಗೆ ಅಲ್ಲಾಹನು ಬೇಡದೆ ಮತ್ತು ಆಶಿಸದೆ ನೀಡುವನು

(1473) ಹಝ್ರತ್ ಉಮರ್(ರ) ವರದಿ ಮಾಡುತ್ತಾರೆ. ರಸೂಲುಲ್ಲಾಹ್(ಸ) ನನಗೆ ಏನಾದರೂ ಸಂಭಾವನೆ ನೀಡಿದಾಗ ನಾನು ಹೇಳುತ್ತಿದ್ದೆ. ನೀವು ನನಗಿಂತ ಅಗತ್ಯವಿದ್ದವರಿಗೆ ನೀಡಿರಿ ಎಂದು. ಅಗ ಅವರು ಹೇಳುತ್ತಿದ್ದರು. ಸಂಪತ್ತು ನಿಮಗೆ ಲಬಿಸಿದಾಗ ನೀವು ಸ್ವೀಕರಿಸುವ ಸ್ಥಿತಿ ಹೇಗಿರಬೇಕೆಂದರೆ, ನೀವು ಅದನ್ನು ಬಯಸಬಾರದು, ಬೇಡಲೂ ಬಾರದು ಮತ್ತು ಸಿಗದಿದ್ದರೆ ಆಸೆಯೂ ಪಡಬಾರದು.

### ಬೇಡುವವನಿಗೆ ಖಂಡನೆ ಮತ್ತು ಅವನಿಗಿರುವ ಶಿಕ್ಷೆ

(1474) ಹಝ್ರತ್ ಅಬ್ದುಲ್ಲ ಬಿನ್ ಉಮರ್(ರ) ವರದಿ ಮಾಡುತ್ತಾರೆ. ನಬಿ(ಸ) ನುಡಿದರು. ಯಾವ ಮನುಷ್ಯನು ಯಾವಾಗಲೂ ಜನರಲ್ಲಿ ಬೇಡುತ್ತಿರುತ್ತಾನೋ ಅವನಿಗೆ ಅಂತ್ಯ ತೀರ್ಮಾನ ದಿನದಂದು ಯಾವ ಸ್ಥಿತಿಯಲ್ಲಿ ಬರುವುದೆಂದರೆ ಅವನ ಮುಖದ ಮೇಲೆ ಮಾಂಸದ ತುಂಡು ಸಹ ಇರಲಾರದು. **(ಸಹೀಹ್ ಬುಖಾರಿ, ಸಂಪುಟ–3, ಕಿತಾಬುಝ್ಝಕಾತ್, ಮುದ್ರಣ ಖಾದಿಯಾನ್ 2008)**

**ಪ್ರೀತಿ ಎಲ್ಲರಲ್ಲು, ದ್ವೇಶವಿಲ್ಲ ಯಾರಲ್ಲು**
**Love for All, Hatred for None**
**ಇನ್ಸಾನಿಯತ್ ಝಿಂದಾಬಾದ್**
**ಮಾನವೀಯತೆ ಚಿರಕಾಲ ಬಾಳಲಿ**

**ಎಲ್ಲಿಯವರೆಗೆ ಮನುಷ್ಯ ಸುಳ್ಳನ್ನು ತ್ಯಜಿಸುವುದಿಲ್ಲ. ಅವನು ಪರಿಶುದ್ಧನಾಗಲು ಸಾಧ್ಯವಿಲ್ಲ. ಅಪವಿತ್ರ ಮತ್ತು ಲೌಕಿಕವಾದಿಯೇ ಆಗಿ ಇರುತ್ತಾನೆ. ಸುಳ್ಳಿನ ವಿನಹ ಅವನಿಗೆ ಬದುಕುಲು ಸಾಧ್ಯವಿರುವುದಿಲ್ಲ, ಇದೊಂದು ಅಸಹ್ಯ ವಿಷಯವಾಗಿದೆ.**

**ಯಾರು ತಮ್ಮ ಬಾಹುಬಲದಲ್ಲಿ ವಿಶ್ವಾಸವಿರಿಸಿಕೊಳ್ಳುತ್ತಾರೆ ಮತ್ತು ಅಲ್ಲಾಹನನ್ನು ಬಿಟ್ಟುಬಿಡುತ್ತಾರೆ, ಅವರ ಪರಿಣಾಮ ಒಳ್ಳೆಯದಾಗುವುದಿಲ್ಲ.**

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

### ಸುಳ್ಳು ತ್ಯಜಿಸದೆ ಮನುಷ್ಯನು ಪರಿಶುದ್ಧನಾಗಲು ಸಾಧ್ಯವಿಲ್ಲ

ವಾಸ್ತವವಾಗಿ ಎಲ್ಲಿಯವರೆಗೆ ಮನುಷ್ಯನು ಸುಳ್ಳನ್ನು ತ್ಯಜಿಸುವುದಿಲ್ಲ. ಅವನು ಪರಿಶುದ್ಧನಾಗಲು ಸಾಧ್ಯವಿಲ್ಲ. ಅಪವಿತ್ರ ಮತ್ತು ಲೌಕಿಕವಾದಿಯಾಗಿಯೇ ಇರುತ್ತಾನೆ. ಸುಳ್ಳು ವಿನಹ ಅವನಿಗೆ ಬದುಕಲು ಸಾಧ್ಯವಾಗುವುದಿಲ್ಲ. ಅಕಟಾ! ಅವರು ಅಲ್ಲಾಹನನ್ನು ಕಡೆಗಣಿಸುವವರಾಗಿದ್ದಾರೆ. ಅಲ್ಲಾಹನ ಅನುಗ್ರಹವಿಲ್ಲದೆ ಬದುಕಲು ಸಾಧ್ಯವಿಲ್ಲ ಎಂಬ ಸತ್ಯ ಅವರು ಅರಿತಿರುವುದಿಲ್ಲ. ಸುಳ್ಳು ಕಷ್ಟಗಳನ್ನು ನಿವಾರಿಸುತ್ತದೆ ಎಂಬ ಭಾವನೆ ಅವರದ್ದು. ಆದುದರಿಂದಲೇ ಅಲ್ಲಾಹನು ಸುಳ್ಳನ್ನು ವಿಗ್ರಹಾರಾಧನೆಗೆ ಹೋಲಿಸಿ ಪವಿತ್ರ ಖುರ್‌ಆನ್‌ನಲ್ಲಿ ವಿವರಣೆ ನೀಡಿರುವನು. ದಿಟವಾಗಿಯೂ ತಿಳಿದುಕೊಳ್ಳಿರಿ. ಅಲ್ಲಾಹನ ಅನುಗ್ರಹವಿಲ್ಲದೆ ಒಂದು ಶ್ವಾಸ ಸಹ ತೆಗೆದುಕೊಳ್ಳಲಾಗದು. ನಮ್ಮ ಶರೀರದಲ್ಲಿ ಏನೆಲ್ಲಾ ಶಕ್ತಿಗಳಿವೆ. ಆದರೆ ನಮ್ಮ ಸ್ವಶಕ್ತಿಯಿಂದ ನಮಗೆ ಏನು ಮಾಡಲು ಸಾಧ್ಯ? ಏನೂ ಇಲ್ಲ.

ಅಲ್ಲಾಹನ ಮೇಲೆ ಭರವಸೆ ಹೊಂದಬೇಕು ಎಂಬ ಅರ್ಥ. ಯಾವ ಜನರು ತಮ್ಮ ಬಲದ ಮೇಲೆಯೇ ಭರವಸೆಯನ್ನಿಡುತ್ತಾರೆ ಮತ್ತು ಅಲ್ಲಾಹನನ್ನು ಬಿಟ್ಟುಬಿಡುತ್ತಾರೆ, ಅವರ ಪರಿಣಾಮ ಒಳ್ಳೆಯದಾಗುವುದಿಲ್ಲ. ಅದರ ಅರ್ಥ ಕೈ ಕಟ್ಟಿ ಕೂರುವುದಲ್ಲ, ಐಹಿಕ ಸಾಮಗ್ರಿಗಳನ್ನು ಬಳಸಿಕೊಳ್ಳುವುದು ಮತ್ತು ಅಲ್ಲಾಹನು ನೀಡಿದ ಸಾಮರ್ಥ್ಯಗಳನ್ನು ಉಪಯೋಗಿಸುವುದು ಸಹ ಅಲ್ಲಾಹನ ಮೇಲಿನ ಭರವಸೆಯಾಗಿದೆ. ಯಾರು ಆ ಶಕ್ತಿಗಳನ್ನು ಉಪಯೋಗಿಸಿಕೊಳ್ಳುವುದಿಲ್ಲ. ಬರೀ ಬಾಯಿ ಮಾತಿನಿಂದ ನಾವು ಅಲ್ಲಾಹನ ಮೇಲೆ ಭರವಸೆ ಹೊಂದಿದವರಾಗಿರುವೆವು ಎನ್ನುತ್ತಾರೆ. ಅವರು ಸುಳ್ಳು ಹೇಳುವವರಾಗಿದ್ದಾರೆ. ಅವರು ಅಲ್ಲಾಹನನ್ನು ಕಡೆಗಣಿಸುತ್ತಾರೆ. ಅಲ್ಲಾಹನನ್ನು ಪರೀಕ್ಷಿಸುವವರಾಗಿದ್ದಾರೆ ಮತ್ತು ಅವನು ದಯಪಾಲಿಸಿದ ಅನುಗ್ರಹಗಳನ್ನು ಶಕ್ತಿಗಳನ್ನು ಉಪೇಕ್ಷಿಸುವವರಾಗಿದ್ದಾರೆ, ಆ ಮೂಲಕ ಅವರು ಅಲ್ಲಾಹನೊಡನೆ ತಿರಸ್ಕಾರ ಭಾವನೆ ಹೊಂದಿದವರಾಗಿದ್ದಾರೆ. ಇಯ್ಯಾಕ ನಅ್‌ಬುದುವಿನ ಉದ್ದೇಶ ತಿಳಿಯದವರಾಗಿದ್ದಾರೆ. ಅದರ ಪ್ರಕಾರ ನಡೆಯುವುದಿಲ್ಲ ಮತ್ತು "ಇಯ್ಯಾಕ ನಸ್ತಯೀನ್" ಸಹಕಾರ ಯಾಚಿಸ ಬಯಸುತ್ತಾರೆ. ಅದು ಸರಿ ಅಲ್ಲ. ಎಲ್ಲಿಯವರೆಗೆ ಸಾಧ್ಯವಿರುತ್ತದೆಯೋ ಅಲ್ಲಿಯವರೆಗೆ ತಂತ್ರಗಳನ್ನು ಉಪಯೋಗಿಸಬೇಕಾಗುತ್ತದೆ. ಆದರೆ ಅದನ್ನೇ ಸರ್ವಸ್ವ, ಆರಾಧಕ ಮತ್ತು ಕಷ್ಟ ನಿವಾರಕ ಎಂದು ಭಾವಿಸಬಾರದು, ಬದಲು ಅವುಗಳಿಂದ ಕಾರ್ಯಗಳನ್ನು ಕೈಗೊಂಡಾಗ ಪುನಃ ಅಲ್ಲಾಹನ ಸಹಾಯ ಯಾಚಿಸಬೇಕು ಮತ್ತು ಅವನು ದಯಪಾಲಿಸಿದ ಶಕ್ತಿ ಸಾಮರ್ಥ್ಯಗಳ ಪ್ರತಿ ಕೃತಜ್ಞತಪೂರ್ವಕವಾಗಿ ಸಾಷ್ಟಾಂಗ ಪ್ರಣಾಮ ಮಾಡಬೇಕಾಗಿದೆ.

**(ಮಲ್ಫೂಝಾತ್ ಸಂಪುಟ–1, ಪುಟ–333, ಮುದ್ರಣ 2018 ಖಾದಿಯಾನ್)**

**"ಹಶ್ರ್" ಅರ್ಥ ಒಟ್ಟು ಸೇರಿಸುವುದು ಎಂದಾಗಿದೆ, ಅದು ಮರಣ ನಂತರದ ಅವಸ್ಥೆಗಾಗಿ ಬಳಸಲಾಗುತ್ತದೆ. ಆ ದಿನ ಹಿಂದಿನ, ಮುಂದಿನ ಎಲ್ಲಾ ಜನರನ್ನು ಒಟ್ಟು ಸೇರಿಸಲಾಗುತ್ತದೆ.**
**ಹಶ್ರ್ ಪ್ರವಾದಿಗಳ ಮಾಧ್ಯಮದಿಂದ ಈ ಲೋಕದಲ್ಲಿ ಒಟ್ಟು ಸೇರಿಸುವ ಸಮೂಹವನ್ನು ಸಹ ಹೇಳಲಾಗುತ್ತಿದೆ. ಜನರನ್ನು ಒಟ್ಟುಗೂಡಿಸದ ಒಬ್ಬ ಪ್ರವಾದಿಯೂ ಇಲ್ಲ.**
**ಹಝುರತ್ ರಸೂಲುಲ್ಲಾಹ್(ಸ) ರವರ ಕಾಲಘಟ್ಟವನ್ನು ನೋಡಿ ವಿಭಿನ್ನ ವಿಶ್ವಾಸಧಾರಿಗಳನ್ನು ಒಂದು "ಕಲಿಮ" ದಲ್ಲಿ ಒಟ್ಟುಗೂಡಿಸಿದರು.**

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಸೂರಃ ಅಲ್–ಹಿಜ್ರ್ ವಚನ 26 **ವಇನ್ನ ರಬ್ಬಕ ಯಹ್‌ಶುರುಹುಮ್ ಇನ್ನಹೂ ಹಕೀಮುನ್ ಅಲೀಮ್** "ನಿಶ್ಚಯವಾಗಿಯೂ ನಿನ್ನ ಪ್ರಭುವೇ ಅವರನ್ನೆಲ್ಲ ಒಟ್ಟು ಸೇರಿಸುವನು. ದಿಟವಾಗಿಯೂ ಅವನು ವಿವೇಕಶಾಲಿಯೂ ಸರ್ವಜ್ಞನೂ ಆಗಿದ್ದಾನೆ."

*(ಪುಟ ಸಂಖ್ಯೆ–08 ರಲ್ಲಿ ಮುಂದುವರಿಸಲಾಗಿದೆ)*

لَا اِلٰهَ اِلَّا اللّٰهُ مُحَمَّدٌ رَّسُوْلُ اللّٰهِ

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِي الْعَالَمِ ۞ شَرُّ السُّمُوْمِ عَدَاوَةُ الصُّلَحَاءِ

**ಅರಬಿ ಉಮ್ಮುಲ್ ಅಲ್‌ಸಿನಾ (ಎಲ್ಲಾ ಭಾಷೆಗಳ ಮೂಲವಾಗಿದೆ) ಮತ್ತು ದೈವಿಕ ಭಾಷೆಯಾಗಿದೆ. ಅದನ್ನು ಅಲ್ಲಾಹನು ತನ್ನ ದೈವವಾಣಿಯಿಂದ ಮನುಷ್ಯನಿಗೆ ಕಲಿಸಿರುವನು. ಯಾರಾದರೂ ತಮ್ಮ ಭಾಷೆಗೂ ಸಹ ಆ ಶ್ರೇಷ್ಠತೆ ಲಭ್ಯವಿದೆ ಎಂದು ಸಾಬೀತುಪಡಿಸಿದರೆ ಅವರಿಗಾಗಿ ಐದು ಸಾವಿರ ರೂಪಾಯಿಗಳ ಬಹುಮಾನ**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಈ ಬಹುಮಾನದ ಪಂಥಾಹ್ವಾನವು ಅವರ ಗ್ರಂಥ "ಮಿನನುರ್ ರಹ್ಮಾನ್" ರೂಹಾನಿ ಖಝಾಯಿನ್ ಸಂಪುಟ 9 ರಿಂದ ಪ್ರಸ್ತುತಪಡಿಸುತ್ತಿದ್ದೇವೆ. ಮಿನನುರ್-ರಹ್ಮಾನ್ ಅವರ ಒಂದು ಮಹೋನ್ನತವಾದ ಶೈಕ್ಷಣಿಕ ಸಾಧನೆಯಾಗಿದೆ. ಅವರು ಹೇಳುತ್ತಾರೆ ಅಲ್ಲಾಹನ ಅನುಗ್ರಹ ಮತ್ತು ಅವನ ಔದಾರ್ಯದಿಂದ ನಾನು ಈ ಗ್ರಂಥವನ್ನು ಪರಿಪೂರ್ಣಗೊಳಿಸುತ್ತೇನೆ. ಅದೇ ನೆಲೆಯಲ್ಲಿ ನಾನು ಅದರ ಹೆಸರು "ಮಿನನುರ್-ರಹ್ಮಾನ್" ಎಂದು ಹೆಸರಿಸಿದ್ದೇನೆ. ಅದರಲ್ಲಿ ಅವರು ಸಾಬೀತುಗೊಳಿಸಿದರು. ಪ್ರಾರಂಭದಲ್ಲಿ ಭಾಷೆ ಒಂದೇ ಆಗಿತ್ತು. ಅದು ಅರಬಿ ಭಾಷೆಯಾಗಿತ್ತು. ಅದು ದೈವಿಕ ಮತ್ತು ದಿವ್ಯವಾಣಿಯಿಂದ ಬಂದ ಭಾಷೆಯಾಗಿದೆ. ಹಝ್ರತ್ ಆದಂ(ಅ) ರವರ ಕುರಿತು ಪವಿತ್ರ ಖುರ್‌ಆನ್ ಹೀಗೆ ಪ್ರಸ್ತಾಪಿಸಿದೆ. ಅಲ್ಲಾಹನು ಅವನಿಗೆ ಅಸ್ಮಾಅ ಬೋಧಿಸಿದನು. ಅದರ ತಾತ್ಪರ್ಯ ಅರಬಿ ಭಾಷೆ ಆಗಿದೆ. ನಂತರ ಬರುತ್ತಾ ಭಾಷೆಗಳು ವಿವಿಧ ರೂಪ ತಾಳಿದವು. ಆದರೆ ಅದರ ಮೂಲ ಮತ್ತು ಉಗಮ ಹಾಗೂ ಬುನಾದಿ ಅದೇ ಅರಬಿ ಭಾಷೆಯಾಗಿದೆ. ಈ ನೆಲೆಯಲ್ಲಿ ಅವರು ಸಾಬೀತುಪಡಿಸಿದರು. ಎಲ್ಲಾ ಭಾಷೆಗಳು ಪರಸ್ಪರ ಹೊಂದಾಣಿಕೆ ಹೊಂದಿವೆ. ಈ ಹೊಂದಾಣಿಕೆ ಯಾವ ರೀತಿಯದ್ದಾಗಿದೆ ಎಂದರೆ ಎಲ್ಲಾ ಭಾಷೆಗಳು ಅರಬಿಯಿಂದಲೇ ಉತ್ಪತ್ತಿಯಾಗಿವೆ. ಆದುದರಿಂದ ಅರಬಿ ಭಾಷೆಗೆ ಉಮ್ಮುಲ್ ಅಲ್‌ಸಿನಾ" (ಎಲ್ಲಾ ಭಾಷೆಗಳ ಮೂಲ) ಎಂಬ ಗೌರವ ಲಭ್ಯವಾಗಿದೆ. ಅವರು ಸಾಬೀತುಪಡಿಸಿದರು. ಭಾಷೆ ಮನುಷ್ಯನ ಸೃಷ್ಟಿಯಲ್ಲ. ಬದಲಿಗೆ ಅಲ್ಲಾಹನು ಅದನ್ನು ಅನುಗ್ರಹಿಸುವನು. ಅಲ್ಲಾಹನು ಸೃಷ್ಟಿಯಲ್ಲಿ ಸರ್ವಶ್ರೇಷ್ಠ ಮನುಷ್ಯನನ್ನು ಸೃಷ್ಟಿಸಿ ಹಾಗೆ ಸುಮ್ಮನೆ ಬಿಡಲಿಲ್ಲ. ಬದಲು ಅವನಿಗೆ ಮಾತುಗಳನ್ನು ಕಲಿಸಿದನು. ಅವನು ಹೇಳಿದಂತೆ. "ಖಲಖಲ್ ಇನ್ಸಾನ ಅಲ್ಲಮುಹುಲ್ ಬಯಾನ್" ಅಂದರೆ ಅವನು ಮನುಷ್ಯನನ್ನೂ ಸೃಷ್ಟಿಸಿದನು ಮತ್ತು ಅವನಿಗೆ ಮಾತನಾಡುವುದನ್ನು ಕಲಿಸಿದನು. ಮಾತುಗಳ ತಾತ್ಪರ್ಯ ಇಲ್ಲಿ ಅರಬಿ ಭಾಷೆಯೇ ಆಗಿದೆ. ಸಂಕ್ಷಿಪ್ತವಾಗಿ ಹೇಳಬೇಕಾದರೆ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಸಾಬೀತುಪಡಿಸಿದರು. ಎಲ್ಲಾ ಭಾಷೆಗಳು ಅದರಿಂದ ಬಂದವುಗಳಾಗಿವೆ. ಆದುದರಿಂದ ಅರಬಿ ಭಾಷೆ ಎಲ್ಲಾ ಭಾಷೆಗಳಿಗೆ ಮೂಲವಾಗಿದೆ. ಈ ನೆಲೆಯಲ್ಲಿ ಎಲ್ಲಾ ಭಾಷೆಗಳು ಪರಸ್ಪರ ಹೊಂದಾಣಿಕೆ ಹೊಂದಿವೆ. ದಿವ್ಯವಾಣಿಯ ಭಾಷೆ ಆಗಿದ್ದರಿಂದ ಅರಬಿ ಭಾಷೆಗೆ ಈ ವಿಶೇಷತೆ ಲಭಿಸಿದೆ. ಭಾಷಣವಾಗಲಿ, ಬರಹ, ಯೋಚನೆಗಳಿಗೆ ಮತ್ತು ಭಾವನೆಗಳಿಗೆ ಅಲಂಕಾರಿಕ ಭಾಷಾ ಪ್ರಯೋಗಿಸಲು ಅರಬಿ ಭಾಷೆಯಲಿ ಮುಫ್ರದಾತ್(ಧಾತು) ಗಳ ಒಂದು ದೊಡ್ಡ ಸೈನ್ಯವೇ ಇದೆ. ಆದರೆ ಬೇರೆ ಭಾಷೆಗಳು ಇದರ ಕೊರತೆ ಇದೆ. ಉದಾಹರಣೆಗೆ ಸಂಸ್ಕೃತ ಭಾಷೆ, ಸಂಸ್ಕೃತ ಭಾಷೆಯ ಪಂಡಿತರುಗಳೇ ಹೇಳುತ್ತಾರೆ. ಅವರಲ್ಲಿ ಆ ಮಾತು ಧಾತುಗಿಂತ ಹೆಚ್ಚಿಲ್ಲ. ಆದರೆ ಅರಬಿ ಸಂಶೋಧಕರು ಸಂಶೋಧಿಸಿ ಹೇಳಿದ್ದಾರೆ. ಅರಬಿ ಭಾಷೆ 27 ಲಕ್ಷಕ್ಕಿಂತ ಹೆಚ್ಚು ಮುಫ್ರದಾತ್ ಹೊಂದಿವೆ ಎಂದು ಮತ್ತು ಪ್ರಯೋಗಕ್ಕಾಗಿ ಅರಬಿ ಭಾಷೆಯಲ್ಲಿ ಮುಫ್ರದಾತ್ ಎಲ್ಲಾ ಸಮಯಕ್ಕೂ ಸಿದ್ಧಗೊಳಿಸುವುದು ಸೂಚಿಸುವುದೇನೆಂದರೆ ಅರಬಿ ಭಾಷೆಯ "ಉಮ್ಮುಲ್ ಅಲ್‌ಸಿನಾ " (ಎಲ್ಲಾ ಭಾಷೆಗಳಿಗೆ ಮೂಲ) ಮತ್ತು ದಿವ್ಯವಾಣಿಯಿಂದ ಬಂದ ಭಾಷೆಯಾಗಿದೆ.

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಭಾಷೆಗಳ ಮೇಲೆ ದೃಷ್ಟಿ ಹಾಯಿಸಿದರೆ ತಿಳಿದುಬರುವುದೇನೆಂದರೆ ಲೋಕದ ಎಲ್ಲಾ ಭಾಷೆಗಳಿಗೂ ಪರಸ್ಪರ ಒಂದು ಸಂಬಂಧವಿದೆ. ಗಾಢವಾಗಿ ಹಾಗೂ ಆಳವಾಗಿ ಯೋಚಿಸಿದರೆ ಈ ಮಾತು ದೃಢವಾಗುತ್ತದೆ. ಈ ಸಮ್ಮಿಲಿತ ಭಾಷೆಗಳ ಮೂಲ ಅರಬಿ ಭಾಷೆಯಾಗಿದೆ. ಅದರಿಂದ ಈ ಎಲ್ಲಾ ಭಾಷೆಗಳು ಉತ್ಪತ್ತಿಯಾಗಿವೆ. ಮತ್ತೆ ಒಂದು ಪರಿಪೂರ್ಣ ಹಾಗೂ ಅತ್ಯಂತ ಪ್ರಭಾವಿ ಸಂಶೋಧನೆಗಳಿಂದ ಅಂದರೆ ಅರಬಿಯ ಮಹಾನತೆ ತಿಳಿದವರು ಈ ಮಾತನ್ನು ಒಪ್ಪಬೇಕಾಗುತ್ತದೆ. ಈ ಭಾಷೆ ಕೇವಲ ಉಮ್ಮುಲ್ ಅಲ್‌ಸಿನಾ (ಎಲ್ಲಾ ಭಾಷೆಗಳ ಮೂಲ) ಮಾತ್ರವಲ್ಲ, ಬದಲು ದೈವಿಕ ಭಾಷೆಯಾಗಿದೆ. ಅದನ್ನು ಅಲ್ಲಾಹನು ಒಂದು ನಿಶ್ಚಿತವಾದ ನಿಲುವಿನೊಂದಿಗೆ ತನ್ನ ದಿವ್ಯವಾಣಿಯ ಮೂಲಕ ಮನುಷ್ಯನಿಗೆ ಕಲಿಸಿದ್ದಾನೆ ಮತ್ತು ಈ ಮಾತಿನ ಫಲ ನಿಮಿತ್ತ ಎಲ್ಲಾ ಭಾಷೆಗಳಲ್ಲಿ ದಿವ್ಯವಾಣಿಯ ಭಾಷೆ ಎಂದರೆ ಕೇವಲ ಅರಬಿ ಭಾಷೆಯಾಗಿದೆ. ಹೀಗೆ ಒಪ್ಪಬೇಕಾಗುತ್ತದೆ. ಅಲ್ಲಾಹನ ಪರಿಪೂರ್ಣ ಮತ್ತು ಅತ್ಯುತ್ತಮ ದೇವವಾಣಿ ಅವತರಿಸಲು ಕೇವಲ ಅರಬಿ ಭಾಷೆ ಅರ್ಹತೆ ಹೊಂದಿರುತ್ತದೆ. ಏಕೆಂದರೆ ಯಾವುದೇ ದೈವಿಕ ಗ್ರಂಥಕ್ಕೆ ಅತ್ಯಂತ ಅವಶ್ಯವಾಗಿರುವುದೇನೆಂದರೆ ಅದು ಎಲ್ಲಾ ಸಮುದಾಯಗಳಿಗೆ ಮಾರ್ಗದರ್ಶನವಾಗಿರಬೇಕು. ಎಂದರೆ ಅದು ದಿವ್ಯವಾಣಿ ಹೊಂದಬೇಕಾಗುತ್ತದೆ. ಆ ಭಾಷೆ ಉಮ್ಮುಲ್ ಅಲ್‌ಸಿನಾ ಆಗಿರಬೇಕು. ಅದು ಎಲ್ಲಾ ಭಾಷೆ, ಹಾಗೂ ಭಾಷೆಯವರೊಂದಿಗೆ ಸಹಜವಾಗಿ ಹೊಂದಾಣಿಕೆ ಇರಬೆಕು. ಅದು ದಿವ್ಯವಾಣಿ ಆಗಿರುವ ಕಾರಣ ಅನುಗ್ರಹ ಒಳಗೊಂಡಿರುತ್ತದೆ. ಅದು ಅಲ್ಲಾಹನ ಶುಭ ಹಸ್ತದಿಂದ ಹೊರಟಿರುತ್ತದೆ.

ಅವರು ಹೇಳಿದರು: ಈ ಬಗ್ಗೆ ಸಂಶೋಧಿಸಲು ನಮ್ಮ ಹೊಣೆಗಾರಿಕೆ ಇರಬೇಕು.

ಮೊದಲ ಹಂತ: ಭಾಷೆಗಳ ಹೊಂದಾಣಿಕೆ ಸಾಬೀತಾಗಬೇಕು.

ದ್ವಿತೀಯ ಹಂತ: ಅರಬಿ ಉಮ್ಮುಲ್ ಅಲ್‌ಸಿನಾ (ಅರಬಿ ಎಲ್ಲಾ ಭಾಷೆಗಳಿಗೆ ಮೂಲ) ಎನ್ನುವುದನ್ನು

ಮೂರನೇ ಹಂತ: ಅರಬಿ ಶ್ರೇಷ್ಠ ಸ್ಥಾನ ಹೊಂದಿದ ಕಾರಣ ಅದು ದಿವ್ಯವಾಣಿ ಎಂದು ಸಾಬೀತುಪಡಿಸಬೇಕು.

ಇದೀಗ ಕೆಳಗೆ ನಾವು ಅರಬಿ ಭಾಷೆಯು ಉಮ್ಮುಲ್ ಅಲ್‌ಸಿನಾ ಆಗಿದೆ ಎಂಬುದಕ್ಕೆ ಮತ್ತು ಅದು ದಿವ್ಯವಾಣಿಯಾಗಿರುವುದರ ಕುರಿತು ಮಸೀಹ್(ಅ) ರವರ ವೈಭವಯುತ ಬಹುಮಾನದ ಪಂಥಾಹ್ವಾನ ಪ್ರಸ್ತುತಪಡಿಸುತ್ತೇವೆ.

### ಅರಬಿ ಭಾಷೆಯು ಉಮ್ಮುಲ್ ಅಲ್‌ಸಿನಾ ಮತ್ತು ದಿವ್ಯವಾಣಿಯ ಭಾಷೆ ಎಂಬುದಕ್ಕೆ ಐದು ಪುರಾವೆಗಳು

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಅರಬಿ ಭಾಷೆ ಎಲ್ಲಾ ಭಾಷೆಗಳಿಗೆ ಮೂಲ ಎಂಬುದಕ್ಕೆ ಈ ಕೆಳಗೆ ನಮೂದಿಸಿದ ಐದು ಪುರಾವೆಗಳು ಪ್ರಸ್ತುತಪಡಿಸಿ ಹೇಳಿದರು. ಅರಬಿ ಭಾಷೆಯ ಶ್ರೇಷ್ಠತೆ ಕಾರಣ ಆ ಭಾಷೆ ಹೊಂದಿರುವ ವೈಶಿಷ್ಟ್ಯಗಳು, ಅದನ್ನು ನಾವು ಇನ್‌ಶಾಅಲ್ಲಾಹ್ ಉಪಯುಕ್ತ ಸಂದರ್ಭಗಳಿಗನುಸಾರ ವ್ಯಾಖ್ಯಾನಿಸುವೆವು. ಅದು ಉಮ್ಮುಲ್ ಅಲ್‌ಸಿನಾ ಪರಿಪೂರ್ಣ ಹಾಗೂ ದಿವ್ಯವಾಣಿ ಹೊಂದಿದ ಭಾಷೆ ಆಗಿರುವುದಕ್ಕೆ ದಿಟವಾದ ಪುರಾವೆಗಳಿವೆ ಹಾಗೂ ಐದು ಗುಣಗಳಿವೆ. ಅದನ್ನು ಸವಿವರವಾಗಿ ಕೆಳಗೆ ಬರೆಯಲಿದ್ದೇವೆ.

**ಮೊದಲ ಗುಣ:** ಅರಬಿಯ ಮಫ್ರದಾತಿನ (ಧಾತುಗಳು) ವ್ಯವಸ್ಥೆ ಪರಿಪೂರ್ಣತೆ ಹೊಂದಿದೆ. ಅಂದರೆ ಮನುಷ್ಯನ ಅಗತ್ಯತೆಗೆ ಆ ಮಫ್ರದಾತ್ (ಧಾತುಗಳು) ಪೂರ್ಣ ನೆರವು ನೀಡುತ್ತದೆ. ಬೇರೆ ನಿಘಂಟುಗಳು ಅದರಿಂದ ಮೌನವಾಗಿವೆ.

**ಎರಡನೇ ಗುಣ:** ಅರಬಿ ಭಾಷೆಯಲ್ಲಿ ಅಲ್ಲಾಹನ ಹೆಸರುಗಳು (ಅಸ್ಮಾಅ) ಪ್ರಪಂಚದ ಸೃಷ್ಟಿಗಳಾದ ಸಸ್ಯ, ಪ್ರಾಣಿ, ಜಡವಸ್ತು, ಹಾಗೂ ಮಾನವ ಶರೀರದ ಅಂಗಗಳ ಹೆಸರುಗಳು ಜ್ಞಾನ ಸುಜ್ಞಾನಗಳ ವಿವೇಕಾಧಾರಿತವಾಗಿರುವದೇ ಅದಕ್ಕೆ ಕಾರಣ. ಇತರ ಭಾಷೆಗಳು ಖಂಡಿತವಾಗಿಯೂ ಅದಕ್ಕೆ ಸ್ಪರ್ಧೆ ಒಡ್ಡಲಾರವು.

**ಮೂರನೇ ಗುಣ:** ಅರಬಿಯ ಸ್ಥಿರವಾದ ಶಬ್ಧಕೋಶವು ಸಹ ಪರಿಪೂರ್ಣ ವ್ಯವಸ್ಥೆ ಹೊಂದಿರುತ್ತದೆ ಅದರ ಪರಿಣಾಮ ಎಲ್ಲಾ ಕ್ರಿಯೆಗಳ ಮೇಲೆ ಮತ್ತು ಅಸ್ಮಾಅ (ಹೆಸರುಗಳು) ಅದು ಒಂದೇ ದಾತುವಿನಿಂದಾಗಿರುತ್ತದೆ. ಒಂದು ಪರಿಜ್ಞಾನ ಸ್ಥಿತಿಯಲ್ಲಿ ದಾಖಲಿಸಿ ಅದರ ನಡುವೆ ಪರಸ್ಪರ ಸಂಬಂಧ ತೋರಿಸುತ್ತದೆ. ಇತರ ಭಾಷೆಗಳಿಗೆ ಈ ಉನ್ನತಮಟ್ಟ ಸಾಧಿಸಲಾಗುವುದಿಲ್ಲ.

**ನಾಲ್ಕನೇ ಗುಣ:** ಅರಬಿ ಶ್ರೇಣಿಗಳಲ್ಲಿ ಪದಗಳು ಕಡಿಮೆ. ಅರ್ಥಗಳು ಹೆಚ್ಚು ಅಡಗಿರುತ್ತವೆ. ಅಂದರೆ ಅರಬಿ ಭಾಷೆಯಲ್ಲಿ ಅಲಿಫ್, ಲಾಮ್, ಮೀಮ್ ಮತ್ತು ತನ್‌ವೀನ್ ಹಾಗೂ ತಬೀಮ್ ತಾಖೀರ್ (ಭೂತ ವರ್ತಮಾನ) ದಿಂದ ಕೈಗೊಳ್ಳುವಂತಹ ಕಾರ್ಯಗಳು ಅದರಲ್ಲಿ ಇತರ ಭಾಷೆಗಳು ಹಲವು ಪದಗಳ ಜೋಡಣೆಯಿಂದ ಕೈಗೊಳ್ಳಬೇಕಾಗುತ್ತದೆ.

**ಐದನೇ ಗುಣ:** ಅರಬಿ ಭಾಷೆ ಎಂತಹ ಮಫರಾದಾತ್ (ಧಾತುಗಳು) ಶ್ರೇಣಿಗಳನ್ನು ಒಳಗೊಂಡಿವೆ ಎಂದರೆ ಅವು ಮನುಷ್ಯನ ಎಲ್ಲಾ ಸೂಕ್ಷ್ಮಾತಿಸೂಕ್ಷ್ಮ ಪದನಾಮಗಳೆಡೆ ಮತ್ತು ಭಾವನೆಗಳ ಚಿತ್ರಣದ ಎಳೆಯನ್ನು ಪರಿಪೂರ್ಣ ಬಿಚ್ಚಿಡುತ್ತದೆ. (ಮಿನನುರ್-ರಹ್ಮಾನ್, ರೂಹಾನಿ ಖಝಾಇನ್, ಸಂಪುಟ-9,

*(ಪುಟ 09 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಎಲೈ ಮುಸ್ಲಿಮರೇ, ಖಂಡಿತವಾಗಿಯೂ ಅಲ್ಲಾಹನು ನಿಮ್ಮೊಡನೆ ಮಾಡಿದ ವಾಗ್ದಾನವನ್ನು ಸತ್ಯಪಡಿಸಿ ತೋರಿಸಿದ್ದಾನೆ. ಅವನು ನಿಮಗೆ ಶತ್ರುಗಳ ವಿರುದ್ಧ ಸಹಾಯ ನೀಡಿದನು. ನಿಮ್ಮನ್ನು ಈ ದೇಶಗಳ ವಾರಸುದಾರರನ್ನಾಗಿ ಮಾಡಿದನು, ನಿಮಗೆ ಭೂಮಿಯಲ್ಲಿ ಸಮಾಧಾನವನ್ನು ಪ್ರದಾನ ಮಾಡಿದನು. ಆದ್ದರಿಂದ ನೀವು ನಿಮ್ಮ ಪ್ರಭುವಿನ ಅನುಗ್ರಹಗಳಿಗೆ ಕೃತಜ್ಞತೆ ಅರ್ಪಿಸಬೇಕು. ನೀವು ಅವಿಧೇಯತ್ವದ ಕೆಲಸಗಳಿಂದ ದೂರವಿರಿ, ಏಕೆಂದರೆ, ಅನುಸರಣೆಯಿಲ್ಲದವರ ಕೆಲಸ ಅನುಗ್ರಹಗಳಿಗೆ ಕೃತಘ್ನತೆ ತೋರಿಸುವವರಂತಾಗಿದೆ. ಅಲ್ಲಾಹನು ಯಾವುದಾದರೂ ಸಮುದಾಯಕ್ಕೆ ಅನುಗ್ರಹವನ್ನು ವರ್ಷಿಸಿದ ನಂತರ ಅವರು ಅದಕ್ಕೆ ಕೃತಜ್ಞತೆ ತೋರಿಸದೇ ಇದ್ದೂ, ಪಶ್ಚಾತ್ತಾಪ ಮಾಡದೇ ಇದ್ದು ಕೂಡ ಅವರ ಗೌರವವನ್ನು ಅಲ್ಲಾಹನು ಹಿಂತೆಗೆಯದೇ ಇರುವ ಸ್ಥಿತಿ ಉಂಟಾಗುವುದು ಬಹಳ ಕಡಿಮೆ. (ಹಝ್ರತ್ ಉಮರ್(ರ))**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ, ಫಾರೂಖೇ ಆಝಮ್ ಹಝ್ರತ್ ಉಮರ್ ಬಿನ್ ಖತ್ತಾಬ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ಹಝ್ರತ್ ಉಮರ್(ರ) ರವರ ಈಲಿಯಾದ ಪ್ರವಾಸ, ಬೈತುಲ್ ಮುಖದ್ದಸ್‌ನ ವಿಜಯ ಮತ್ತು ಹಿರ್ಕಲ್‌ನ ಕಡೆಯಿಂದ ಹಿಮ್ಸ್ ವಶಪಡೆಯುವಿಕೆಉ ಬಗ್ಗೆ ವಿವರಾತ್ಮಕ ಪ್ರಸ್ತಾವನೆ**

**ಮೂರು ದಿವಂಗತರಾದ ನಿವೃತ್ತ ಸ್ಟೇಶನ್ ಮಾಸ್ಟರ್ ಸನ್ಮಾನ್ಯ ಚೌಧರಿ ಸಈದ್ ಅಹ್ಮದ್ ಲಕ್ಕನ್ ಸಾಹಿಬ್, ಬಾಂಗ್ಲದೇಶದ ನೇಶನಲ್ ನಾಇಬ್ ಅಮೀರ್ ಆದ ಸನ್ಮಾನ್ಯ ಮುಹಮ್ಮದ್ ಶಹಾಬುದ್ದೀನ್ ಸಾಹಿಬ್, ಮತ್ತು ಅರ್ಜಂಟೈನಿನ ಸನ್ಮಾನ್ಯ ರಾಉಲ್ ಅಬ್ದುಲ್ಲಾಹ್ ಸಾಹಿಬ್‌ರವರ ಸದ್ಗುಣಗಳ ಪ್ರಸ್ತಾವನೆ ಹಗೂ ನಮಾಝೆ ಜನಾಝ ನಿರ್ವಹಣೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **24-09-2021** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ.

إِيَّاكَ نَعْبُدُ وَإِيَّاكَ نَسْتَعِيْنُ. اِهْدِنَا الصِّرَاطَ الْمُسْتَقِيْمَ.

صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರ ಕಾಲದ ಪ್ರಸ್ತಾಪ ನಡೆಯುತ್ತಿತ್ತು. ಇಂದು ಅದನ್ನು ಮುಂದುವರಿಸುತ್ತಾ ಹಿಜರೀ 15ರಲ್ಲಿ ನಡೆದ ಬೈತುಲ್‌ಮಖ್‌ದಸಿನ ವಿಜಯದ ಬಗ್ಗೆ ಪ್ರಸ್ತಾಪಿಸಲಾಗುವುದು. ಹಝ್ರತ್ ಅಮ್ರ್ ಬಿನ್ ಆಸ್‌ರ ನೇತೃತ್ವದಲ್ಲಿ ಇಸ್ಲಾಮಿನ ಸೈನ್ಯವು ಬೈತುಲ್‌ಮಖದಸನ್ನು ಸುತ್ತುವರೆದರು. ಆಗ ಹಝ್ರತ್ ಅಬೂಉಬೈದರ(ರ) ಸೈನ್ಯವೂ ಅವರೊಂದಿಗೆ ಬಂದುಸೇರಿತು. ಕ್ರೈಸ್ತರು ಮುತ್ತಿಗೆಯಿಂದ ಅವರು ಬೇಸತ್ತು ಸಂಧಾನಕ್ಕೆ ತಯಾರಾದರು. ಆದರೆ ಸ್ವತಃ ಹಝ್ರತ್ ಉಮರ್(ರ) ಸಂಧಾನದ ಒಪ್ಪಂದ ಮಾಡಬೇಕೆಂದು ನಿಬಂಧನೆ ಹಾಕಿದರು. ಹಝ್ರತ್ ಉಮರ್‌ರಿಗೆ(ರ) ಹಝ್ರತ್ ಅಬೂಉಬೈದ(ರ) ಇದರ ಬಗ್ಗೆ ತಿಳಿಸಿದರು. ಹಝ್ರತ್ ಉಮರ್(ರ) ಸಹಾಬರೊಡನೆ ಸಮಾಲೋಚನೆ ನಡೆಸಿದರು. ಹೊರಡಲು ಹಝ್ರತ್ ಅಲಿ(ರ) ಸಲಹೆ ನೀಡಿದರು. ಅವರ ಅಭಿಪ್ರಾಯವನ್ನು ಹಝ್ರತ್ ಉಮರ್(ರ) ಇಷ್ಟಪಟ್ಟರು. ಅನಂತರ ಹಝ್ರತ್ ಉಮರ್(ರ) ಹಝ್ರತ್ ಅಲಿಯನ್ನು(ರ) ಮದೀನದ ಅಮೀರನ್ನಾಗಿ ನಿಶ್ಚಯಿಸಿದರು. ಹಝ್ರತ್ ಉಸ್ಮಾನ್‌ರನ್ನು ಅಮೀರನ್ನಾಗಿ ನಿಶ್ಚಯಿಸಲಾಗಿತ್ತು ಎಂದು ಬೇರೊಂದು ವರದಿಯಲ್ಲಿ ಇದೆ. ಅನಂತರ ಹಝ್ರತ್ ಉಮರ್(ರ) ಬೈತುಲ್‌ಮಖ್‌ದಸ್ ಕಡೆಗೆ ರವಾನೆಯಾದರು. ಹಝ್ರತ್ ಉಮರರ(ರ) ಈ ಯಾತ್ರೆ ಸಾಮಾನ್ಯ ಯಾತ್ರೆಯಾಗಿರಲಿಲ್ಲ. ಅದರ ಉದ್ದೇಶವು ಇಸ್ಲಾಮಿನ ವೈಭವ ಮತ್ತು ಗಾಂಭೀರ್ಯವನ್ನು ಶತ್ರುಗಳ ಹೃದಯಗಳಲ್ಲಿ ಉಂಟುಮಾಡುವುದಾಗಿತ್ತು. ಆದರೆ ಅವರು ರವಾನಯಾದಾಗ ಅವರೊಂದಿಗೆ ಲೌಕಿಕ ಅರಸರಿಗೆ ಇರುವಂತೆ ಯಾವುದೇ ಡಂಗುರ ಸಾರುವಿಕೆ ಅಥವಾ ಸೈನ್ಯವಿರಲಿಲ್ಲ. ಒಂದು ಸಾಧಾರಣ ಡೇರೆ ಕೂಡ ಅವರೊಂದಿಗೆ ಇರಲಿಲ್ಲವೆಂದು ವರದಿಗಳಲ್ಲಿ ಬಂದಿದೆ. ಹಝ್ರತ್ ಉಮರ್(ರ) ಒಂದು ಕುದುರೆಯ ಮೇಲೆ ಸವಾರರಾಗಿದ್ದರು. ಅವರೊಂದಿಗೆ ಮುಹಾಜಿರ್ ಮತ್ತು ಅನ್ಸಾರ್‌ರಾದ ಕೆಲವು ಸಂಗಡಿಗರು ಇದ್ದರು. ಒಂದು ವರದಿ ಪ್ರಕಾರ, ಹಝ್ರತ್ ಉಮರರೊಂದಿಗೆ(ರ) ಒಬ್ಬ ಗುಲಾಮನು, ಆಹಾರಕ್ಕಾಗಿ ಸ್ವಲ್ಪ ಹುರಿದ ಧಾನ್ಯದ ಹಿಟ್ಟು ಮತ್ತು ಒಂದು ಮರದ ಬಟ್ಟಲು ಇತ್ತು ಎಂದಿದೆ. ಅವರು ಒಂಟೆಯ ಮೇಲೆ ಸವಾರರಾಗಿದ್ದರು. ಹೀಗಿದ್ದರೂ ಹಝ್ರತ್ ಉಮರ್(ರ) ಮದೀನದಿಂದ ಬೈತುಲ್ ಮಖ್‌ದಸಿಗೆ ಹೊರಟಿರುವರು ಎಂಬ ವಾರ್ತೆ ತಲುಪುವ ಸ್ಥಳಗಳಲ್ಲೆಲ್ಲ ಭೂಮಿ ನಡುಗುತ್ತಿತ್ತು. ಎಂದರೆ ಜನರು ಹೆದರುತ್ತಿದ್ದರು. (ತಾರೀಖ್ ಇಬ್ನೆ ಖಿಲ್‌ದೂನ್, ಅನುವಾದ ಸಂಪುಟ-3, ಭಾಗ-1, ಪುಟ-207, ದಾರುಲ್ ಇಶಾಅತ್ ಕರಾಚಿ 2009)

ಸಂಕ್ಷಿಪ್ತವಾಗಿ ಈ ಯಾತ್ರೆಯ ಬಗ್ಗೆ ಹೇಳಲಾಗಿದೆ. ಆದರೆ ಅದರ ವಿಶದ ವಿವರಣೆ ಇದರಲ್ಲಿ ಇಲ್ಲ. ಹೇಗಿದ್ದರೂ ಏಲಿಯ ಒಂದು ಪಟ್ಟಣವಾಗಿತ್ತು. ಅದರಲ್ಲಿ ಬೈತುಲ್ ಮಖ್‌ದಸ್ ಇದೆ. ಅದರ ಮೇಲೆ ಯಾರು ಮುತ್ತಿಗೆ ಹಾಕಿದ್ದರು ಮತ್ತು ಯಾರು ಹಝ್ರತ್ ಉಮರ್‌ರೊಡನೆ(ರ) ಬೈತುಲ್‌ಮಖ್‌ದಸಿಗೆ ಬರಲು ವಿನಂತಿಸಿದ್ದರು ಎಂಬುದರ ಬಗ್ಗೆ ತಬರಿ ಬರೆಯುತ್ತಾರೆ: ಹಝ್ರತ್ ಉಮರ್‌ರಿಗೆ(ರ) ಹಝ್ರತ್ ಉಮರ್ ಬಿನ್ ಆಸ್(ರ) ಪತ್ರ ಬರೆದರು. ಅದರಲ್ಲಿ ಅವರು ಸಹಾಯವನ್ನು ಕಳುಹಿಸಲು ವಿನಂತಿಸಿದರು. ಅವರಿಗೆ ಘೋರವಾದ ಯುದ್ಧಗಳನ್ನು ಎದುರಿಸಬೇಕಾಗುತ್ತಿದೆ. ಯುದ್ಧ ಮಾಡಲು ಬಾಕಿಯಿರುವ ಅನೇಕ ಪಟ್ಟಣಗಳು ಇವೆ ಎಂದು ಪತ್ರದಲ್ಲಿ ಬರೆದರು. ಹಝ್ರತ್ ಉಮರರ(ರ) ನಿರ್ದೇಶನವನ್ನು ಕಾಯುತ್ತಿದ್ದೇನೆ ಎಂದು ಬರೆದರು. ಹಝ್ರತ್ ಅಮ್ರ್ ಬಿನ್ ಆಸ್‌ರ(ರ) ಈ ಪತ್ರ ಹಝ್ರತ್ ಉಮರ್‌ರಿಗೆ(ರ) ಲಭಿಸಿದಾಗ, ಹಝ್ರತ್ ಅಮ್ರ್(ರ) ಎಲ್ಲ ಮಾಹಿತಿಗಳನ್ನು ಪಡೆದ ನಂತರ ಈ ಪತ್ರವನ್ನು ಬರೆದಿರುವರು ಎಂದು ಹಝ್ರತ್ ಉಮರ್‌ರಿಗೆ(ರ) ಗೊತ್ತಾಯಿತು. ಅನಂತರ ಹಝ್ರತ್ ಉಮರ್(ರ) ಜನರೊಡನೆ ಅವರ ಯಾತ್ರೆಯ ಬಗ್ಗೆ ಘೋಷಿಸಿ ಯಾತ್ರೆಗಾಗಿ ಹೊರಟರು. (ತಾರೀಖ್ ಅತ್ತಿಬರಿ ಸಂಪುಟ-2, ಭಾಗ-2, ಪುಟ-804, ದಾರುಲ್ ಇಶಾಅತ್ ಕರಾಚಿ 2004)

ತಬರಿಯಲ್ಲಿ ಹಝ್ರತ್ ಉಮರ್(ರ) ರವರು ಸೀರಿಯಾದಿಂದ ಹಿಂದಿರುಗಿದ ಬಗ್ಗೆ ಕಾರಣ ಹೀಗೂ ಬರೆಯಲಾಗಿದೆ ಅಂದರೆ ಹಝ್ರತ್ ಅಬೂಉಬೈದ(ರ) ಬೈತುಲ್‌ಮಖ್‌ದಸ್ ತಲುಪಿದಾಗ ಅಲ್ಲಿಯ ಜನರು ಅವರೊಡನೆ ಸಿರಿಯದ ಇತರ ಪಟ್ಟಣಗಳ ಒಪ್ಪಂದಗಳ ಸಂಧಾನಗಳ ಪ್ರಕಾರವೇ ಸಂಧಾನ ಮಾಡಲು ಬಯಸಿದರು. ಈ ಸಂಧಾನದಲ್ಲಿ ಮುಸ್ಲಿಮರ ಕಡೆಯಿಂದ ನೇತಾರರಾಗಿ ಹಝ್ರತ್ ಉಮರ್(ರ) ಬರಬೇಕು ಎಂಬುದೂ ಅವರ ಬಯಕೆಯಾಗಿತ್ತು. ಹಝ್ರತ್ ಅಬೂಉಬೈದ(ರ) ಹಝ್ರತ್ ಉಮರರಿಗೆ(ರ) ಹೀಗೆ ಪತ್ರವನ್ನು ಬರೆದಾಗ ಹಝ್ರತ್ ಉಮರ್(ರ) ಮದೀನಕ್ಕೆ ರವಾನೆಯಾದರು. (ತಾರೀಖ್ ಅತ್ತಿಬರಿ, ಸಂಪುಟ-2, ಪುಟ-449, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012) (ಮುಜಮುಲ್ ಬಲದಾನ್ ಸಂಪುಟ-1, ಪುಟ-348, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಹಝ್ರತ್ ಅಬೂಉಬೈದರ(ರ) ಬಗ್ಗೆಯಿರುವ ಈ ವರದಿಯ ಬಗ್ಗೆ ಕೆಲವು ಚರಿತ್ರೆಗಾರರು ತೃಪ್ತರಲ್ಲ. ಮುಹಮ್ಮದ್ ಹುಸೈನ್ ಹೈಕಲ್‌ರ ಪ್ರಕಾರ ಹಝ್ರತ್ ಉಮರ್(ರ) ಕೇವಲ ಒಪ್ಪಂದಕ್ಕಾಗಿ ಹೋಗಿರಲಿಲ್ಲ. ಬದಲಾಗಿ ಹಝ್ರತ್ ಅಮ್ರ್ ಬಿನ್ ಆಸ್(ರ) ಹೆಚ್ಚಿನ ಸಹಾಯವನ್ನು ಬೇಡಿದಾಗ ಹಝ್ರತ್ ಉಮರ್(ರ) ಸ್ವತಃ ಸಹ ಸಿರಿಯ ಮತ್ತು ಜೋರ್ದಾನನ ನಡುವೆ ಇರುವ ಪ್ರದೇಶವಾದ ಜಾಬಿಯಗೆ ರವಾನೆಯಾದರು. ಈ ವೇಳೆ ಹಝ್ರತ್ ಅಬೂಉಬೈದ(ರ) ಮತ್ತು ಹಝ್ರತ್ ಖಾಲಿದ್(ರ) ಸಹ ಸಿರಿಯದ ಮೇಲೆ ವಿಜಯಗಳನ್ನು ಸಾಧಿಸಿಯಾಗಿತ್ತು. ಬೈತುಲ್‌ಮುಖ್‌ದಸಿನ ಮೇಲೆ ವಿಜಯ ಸಾಧಿಸಲು ಉಪಯುಕ್ತ ಮಾರ್ಗವನ್ನು ಕಂಡುಹಿಡಿಯಲಿಕ್ಕಾಗಿ ಅವರಿಬ್ಬರೊಡನೆ ಜಾಬಿಯಗೆ ಬರಲು ಹಝ್ರತ್ ಉಮರ್(ರ) ಆವಶ್ಯಪಟ್ಟರು. ಹಝ್ರತ್ ಅಬೂಉಬೈದ(ರ) ಮತ್ತು ಹಝ್ರತ್ ಖಾಲಿದ್(ರ) ಜಾಬಿಯಗೆ ತಲುಪಿದ ವಿವರ ಶತ್ರುಗಳ ಸರದಾರರಿಗೆ ಗೊತ್ತಾದಾಗ, ಬೈತುಲ್‌ಮುಖ್‌ದಸಿನ ಸ್ಥಳಗಳು ಇನ್ನು ಹೆಚ್ಚು ಕಾಲ ಬಾಕಿಯಾಗುವುದಿಲ್ಲ ಎಂದು ಅರಿತರು. ಹೀಗೆ ಒಬ್ಬ ಸರದಾರ ಸ್ವಲ್ಪ ಸೈನಿಕರೊಂದಿಗೆ ಈಜಿಪ್ಟಿಗೆ ಪರಾರಿಯಾದನು. ಸಫರೀನೂಸ್‌ನು ಸಂಧಾನದ ಮಾತುಕತೆಗಾಗಿ ಹಝ್ರತ್ ಉಮರ್(ರ) ಬರಬೇಕೆಂದು ಶರತ್ತು ಹಾಕಿದನು.

ಹೇಗಿದ್ದರೂ ಈ ಪತ್ರಗಳೆಲ್ಲ ಲಭಿಸಿದ ನಂತರ ಹಝ್ರತ್ ಉಮರ್(ರ) ಏನು ಸಮಾಲೋಚನೆ ನಡೆಸಿದರು ಎಂಬುದರ ಬಗ್ಗೆ ಹೀಗೆ ಬರೆಯಲಾಗಿದೆ: ಪತ್ರಗಳು ಲಭಿಸಿದ ನಂತರ ಹಝ್ರತ್ ಉಮರ್(ರ) ಎಲ್ಲ ಸಹಾಬರನ್ನು ಒಟ್ಟುಗೂಡಿಸಿ ಸಮಾಲೋಚನೆ ನಡೆಸಿದರು. ಹಝ್ರತ್ ಉಸ್ಮಾನ್(ರ) ಹೀಗೆ ಸಲಹೆ ನೀಡಿದರು: "ಕ್ರೈಸ್ತರು ಹೆದರಿರುವರು ಮತ್ತು ಆತ್ಮವಿಶ್ವಾಸವನ್ನು ಕಳೆದಿರುವರು. ನೀವು ಅವರ ವಿನಂತಿಯನ್ನು ರದ್ದುಮಾಡಿದರೆ ಅವರು ಇನ್ನೂ ನಿಂದ್ಯರಾಗುವರು. ಮುಸ್ಲಿಮರು ಅವರನ್ನು ಈಗ ಸಂಪೂರ್ಣವಾಗಿ ನೀಚರು ಎಂದು ಭಾವಿಸುತ್ತಿದ್ದಾರೆ ಎಂದು ಭಾವಿಸಿ ಯಾವುದೇ ಶರತ್ತುಗಳಿಲ್ಲದೆ ಆಯುಧಗಳನ್ನು ಕೆಳಗೆ ಹಾಕುವರು." ಆದರೆ ಹಝ್ರತ್ ಅಲಿ(ರ) ಇದಕ್ಕೆ ವಿಪರೀತವಾದ ಅಭಿಪ್ರಾಯವನ್ನು ನೀಡುತ್ತಾ ಹಝ್ರತ್ ಉಮರ್‌ರೊಡನೆ ಏಲಿಯಗೆ ಹೋಗಲು ಸಲಹೆ ನೀಡಿದರು ಮತ್ತು ಹೀಗೆ ಹೇಳಿದರು: "ಮುಸ್ಲಿಮರು ಚಳಿ, ಯುದ್ಧ ಮತ್ತು ದೀರ್ಘವಾದ ತಂಗುವಿಕೆಯ ಅಸಾಧಾರಣವಾದ ಕಷ್ಟತೆಗಳನ್ನು ಸಹಿಸಿದ್ದಾರೆ. ನೀವು ಹೊರಡುವುದಾದರೆ, ಅದು ಮುಸ್ಲಿಮರ ಸಮಾಧಾನ, ಕ್ಷೇಮ ಮತ್ತು ಒಳಿತಿಗೆ ಕಾರಣವಾಗುವುದು. ಆದರೆ ನೀವು ಹೋಗದಿದ್ದರೆ ಮತ್ತು ಸಂಧಾನವನ್ನು ಮಾಡದಿದ್ದರೆ ಅದರಿಂದ ಒಳ್ಳೆಯದು ಆಗುವುದಿಲ್ಲ. ಬದಲಾಗಿ ಶತ್ರುಗಳು ಕೋಟೆಯ ಒಳಗೆ ಕುಳಿತುಕೊಳ್ಳುವರು. ಅಷ್ಟರಲ್ಲಿ ರೋಮಿನ ಅರಸನ ಕಡೆಯಿಂದ ಸಹಾಯಕ ಸೈನ್ಯ ಸಹ ಬರುವುದು. ವಿಶೇಷವಾಗಿ ಬೈತುಲ್‌ಮುಖ್‌ದಸನ್ನು ಅವರು ಬಹಳ ಗೌರವಭಾವದಿಂದ ಕಾಣುತ್ತಾರೆ. ಅದು ಅವರ ತೀರ್ಥ ಯಾತ್ರಾಕೇಂದ್ರವಾಗಿದೆ." ಹಝ್ರತ್ ಉಮರ್(ರ) ಹಝ್ರತ್ ಅಲಿಯ ಅಭಿಪ್ರಾಯವನ್ನು ಇಷ್ಟಪಟ್ಟರು.
(ಅಲ್‌ಫಾರೂಖ್, ಶಿಬ್ಲಿ ನುಮಾನಿ ಪುಟ-124, ಇದಾರ ಇಸ್ಲಾಮಿಯಾತ್ 2004) (ಹಝ್ರತ್ ಉಮರ್ ಫಾರೂಖ್(ರ), ಮುಹಮ್ಮದ್ ಹುಸೈನ್ ಹೇಕಲ್, ಅನುವಾದಕ, ಪುಟ-369, ಇಸ್ಲಾಮಿ ಕುತುಬ್ ಖಾನ ಲಾಹೋರ್)

ಈ ಯಾತ್ರೆಯಲ್ಲಿ ಹಝ್ರತ್ ಉಮರ್‌ರ(ರ) ಜೊತೆಗೆ ಇತರ ಮುಹಾಜಿರ್ ಮತ್ತು ಅನ್ಸಾರರಲ್ಲದೆ ಹಝ್ರತ್ ಅಬ್ಬಾಸ್ ಬಿನ್ ಅಬ್ದುಲ್‌ಮುತಲ್ಲಿಬ್ ಸಹ ಇದ್ದರು. ಈ ಯಾತ್ರೆಯ ಬಗ್ಗೆ ಅಬೂಸಈದ್ ಮುಖ್‌ಬೂರಿಯ ಒಂದು ವರದಿ ಹೀಗೆ ಲಭಿಸುತ್ತದೆ: ಹಝ್ರತ್ ಉಮರ್(ರ) ತನ್ನ ಯಾತ್ರೆಯ ನಡುವೆ ಬೆಳಗ್ಗಿನ ನಮಾಝ್ ನಿರ್ವಹಿಸಿದ ನಂತರ ತನ್ನ ಸಂಗಡಿಗರನ್ನು ಸಂಬೋಧಿಸಿ ಹೀಗೆ ಹೇಳಿದರು: ಸಕಲ ರೀತಿಯ ಸ್ತುತಿ ಅಲ್ಲಾಹನಿಗೆ, ಅವನು ನಮಗೆ ಇಸ್ಲಾಂ ಮತ್ತು ಸತ್ಯವಿಶ್ವಾಸದ ಮೂಲಕ ಗೌರವ ನೀಡಿದನು. ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೂಲಕ ಘನತೆಯನ್ನು ನೀಡಿದನು. ಅವರ ಮೂಲಕ ನಮ್ಮನ್ನು ದುಮಾರ್ಗದಿಂದ ಸನ್ಮಾರ್ಗದ ಕಡೆಗೆ ತಂದನು. ಹಲವು ವಿಭಾಗಗಳ ಬದಲಾಗಿ ನಮ್ಮನ್ನು ಒಟ್ಟುಗೂಡಿಸಿದನು. ನಮ್ಮ ಹೃದಯಗಳಲ್ಲಿ ಪರಸ್ಪರ ಸ್ನೇಹವನ್ನು ಉಂಟುಮಾಡಿದನು. ಶತ್ರುಗಳ ಎದುರಾಗಿ ಹಝ್ರತ್ ಪೈಗಂಬರರ(ರ) ಮೂಲಕ ನಮಗೆ ಸಹಾಯವನ್ನು ನೀಡಿದನು, ನಮ್ಮನ್ನು ವಿವಿಧ ಪಟ್ಟಣಗಳಲ್ಲಿ ನೆಲೆಸಿದನು, ಹಝ್ರತ್ ಪೈಗಂಬರರ(ಸ) ಮೂಲಕ ನಮ್ಮನ್ನು ಪರಸ್ಪರ ಪ್ರೀತಿಸುವ ಸಹೋದರರನ್ನಾಗಿ ಮಾಡಿದನು. ಆದ್ದರಿಂದ ನೀವು ಈ ಅನುಗ್ರಹಗಳಿಗಾಗಿ ಅಲ್ಲಾಹನ ಸ್ತುತಿಗಾನ ಮಾಡಿರಿ. ಅವನೊಡನೆ ಇನ್ನೂ ಹೆಚ್ಚಿನ ಸಹಾಯವನ್ನು ಬೇಡಿರಿ. ಈ ಅನುಗ್ರಹಗಳಿಗೆ ಕೃತಜ್ಞತೆ ಅರ್ಪಿಸಲು ಸಾಧ್ಯವಾಗಲು ಅಲ್ಲಾಹನೊಡನೆ ಶಕ್ತಿಯನ್ನು ಬೇಡಿರಿ. ನೀವು ಯಾವ ಅನುಗ್ರಹಗಳೊಂದಿಗೆ ನಡೆಯುತ್ತಿದ್ದೀರೋ ಅದನ್ನು ನಿಮ್ಮ ಮೇಲೆ ಪೂರ್ತಿಮಾಡಲು ಅಲ್ಲಾಹನೊಡನೆ ಪ್ರಾರ್ಥಿಸಿರಿ. ಏಕೆಂದರೆ ಅಲ್ಲಾಹನ ಕಡೆಗೆ ಬಾಗಲು ಅಲ್ಲಾಹನು ಬಯಸುತ್ತಾನೆ. ಕೃತಜ್ಞತೆಮಾಡುವವರ ಮೇಲೆ ತನ್ನ ಅನುಗ್ರಹಗಳನ್ನು ಪೂರ್ತಿಮಾಡುತ್ತಾನೆ. ಹಝ್ರತ್ ಉಮರ್(ರ) ತನ್ನ ಯಾತ್ರೆಯ ಆರಂಭದಿಂದ ಯಾತ್ರೆ ಮುಗಿಸಿ ಮರಳಿ ಬರುವ ತನಕ ಈ ಮಾತುಗಳನ್ನು ಪ್ರತಿ ಬೆಳಿಗ್ಗೆ ಹೇಳುತ್ತಿದ್ದರು. ಇದೇ ಸಂದೇಶವನ್ನು ದಿನಾಲೂ ಹೇಳುತ್ತಿದ್ದರು. (ಅಲ್‌ಇಕ್‌ತಿಫಾ ಬಿಮಾ ತಝ್‌ಮನ ಮಗಾಝಿ...., ಸಂಪುಟ-2, ಭಾಗ-1, ಪುಟ-292-293, ಆಲಿಮುಲ್ ಕುತುಬ್ ಬೈರೂತ್ 1997)

ಜಾಬಿಯಗೆ ಬಂದು ಹಝ್ರತ್ ಉಮರ್‌ರನ್ನು ಭೇಟಿಯಾಗಲು ಮುಸ್ಲಿಮ್ ಸರದಾರರೊಡನೆ ಹೇಳಲಾಗಿತ್ತು. ಲಭಿಸಿದ ಮಾಹಿತಿ ಪ್ರಕಾರ ಯಝೀದ್ ಬಿನ್ ಅಬುಸುಫ್‌ಯಾನ್, ಖಾಲಿದ್ ಬಿನ್ ವಲೀದ್ ಮುಂತಾದವರು ಅಲ್ಲೇ ಅವರನ್ನು ಸ್ವಾಗತಿಸಿದರು. ಸಿರಿಯದಲ್ಲಿ ನೆಲೆಸಿರುವ ಕಾರಣದಿಂದ ಆ ಅಧಿಕಾರಿಗಳಲ್ಲಿ ಅರೇಬಿಯದ ಸರಳತೆ ಉಳಿದಿರಲಿಲ್ಲ. ಹೀಗೆ ಅವರು ಹಝ್ರತ್ ಉಮರರ ಮುಂದೆ ದೇಹದಲ್ಲಿ ಹರೀರ್ ಮತ್ತು ದೀಬಾಜಿನ ಹೊಳಪು ಮತ್ತು ಬೆಲೆಬಾಳುವ ನಿಲುವಂಗಿಯನ್ನು ಧರಿಸಿಕೊಂಡು ಬಂದರು. ಹೊಳೆಯುವ ವಸ್ತ್ರಗಳು ಮತ್ತು ಬಾಹ್ಯವಾದ ವೈಭವಗಳಿಂದ ಅರಬಿಯೇತರರಂತೆ ತೋರುತ್ತಿದ್ದರು. ಹಝ್ರತ್ ಉಮರ್‌ರಿಗೆ ಬಹಳ ಕೋಪಬಂತು. ಕುದುರೆಯಿಂದ ಇಳಿದು ಕಲ್ಲುಗಳನ್ನು ಎತ್ತಿ ಅವರ ಕಡೆಗೆ ಎಸೆದರು. ಇಷ್ಟು ಬೇಗನೇ ನೀವು ಅರಬಿಯೇತರ ಅಭ್ಯಾಸಗಳನ್ನು ತಮ್ಮೊಳಗೆ ಅಳವಡಿಸಿಕೊಂಡಿದ್ದೀರಾ ಎಂದು ಕೇಳಿದರು. ಅವರು ಹೇಳಿದರು: ನಿಲುವಂಗಿಯ ಅಡಿಯಲ್ಲಿ ಆಯುಧಗಳು ಇವೆ. ಎಂದರೆ ಸೈನಿಕರ ಕೌಶಲವನ್ನು ಕೈಬಿಟ್ಟಿಲ್ಲವೆಂದು ಹೇಳಿದರು. ಆಗ ಹಝ್ರತ್ ಉಮರ್(ರ) ಹೇಳಿದರು: ಹಾಗಾದರೆ ಸರಿ.
(ಅಲ್‌ಫಾರೂಖ್, ಶಿಬ್ಲಿ ನುಮಾನ, ಪುಟ-124, ಇದಾರ ಇಸ್ಲಾಮಿಯಾತ್2004)

ಈ ಬಾಹ್ಯವಾದ ರೂಪವನ್ನು ಈ ಶತ್ರುಗಳನ್ನು ತೋರಿಸಲಿಕ್ಕಾಗಿ ಮಾಡಿರುವರಾದರೆ, ಒಳಗಿನಿಂದ ನಿಮ್ಮ ಉಡಿಗೆ ಅರೇಬಿಯರಂತೆ ಆಗಿದ್ದರೆ ಪರವಾಗಿಲ್ಲ. ಒಂದು ವರದಿಯಲ್ಲಿ ಹೀಗೆ ಬಂದಿದೆ: ಯಝೀದ್ ಬಿನ್ ಅಬುಸುಫ್‌ಯಾನ್ ಹೇಳಿದರು: ಹೇ ಅಮೀರಲ್‌ಮೂಅ್‌ಮಿನೀನ್, ನಮ್ಮ ಬಳಿ ತುಂಬ ಬಟ್ಟೆಗಳು ಮತ್ತು ಸವಾರಿ ಮೃಗಗಳು ಇವೆ. ಇಲ್ಲಿ ನಮ್ಮ ಜೀವಿತ ಬಹಳ ಉತ್ತಮವಾಗಿದೆ. ವಸ್ತುಗಳು ಇಲ್ಲಿ ಬಹಳ ಅಗ್ಗವಾಗಿವೆ. ನೀವು ಇಷ್ಟಪಡುವ ಸ್ಥಿತಿಯಲ್ಲಿ ಇಲ್ಲಿ ಮುಸ್ಲಿಮರು ಇರುವರು. ನೀವು ಈ ಬಿಳಿವಸ್ತ್ರಗಳನ್ನು ಧರಿಸುವಿರಾದರೆ, ಉತ್ತಮ ಸವಾರಿಮೃಗಗಳಲ್ಲಿ ಸವಾರರಾಗುವಿರಿ ಎಂದಾದರೆ ಮತ್ತು ಬಹಳಷ್ಟು ಧಾನ್ಯಗಳನ್ನು ಮುಸ್ಲಿಮರಿಗೆ ಕೊಡುವುದಾದರೆ, ಅದು ಪ್ರಸಿದ್ಧಿಗೆ ಕಾರಣವಾಗುವುದು. ಅಧಿಕಾರದ ನಿರ್ವಹಣೆಯಲ್ಲಿ ಅದು ನಿಮಗೆ ಹೆಚ್ಚಿನ ಸೌಂದರ್ಯವನ್ನು ಪ್ರದಾನಮಾಡುವುದು. ಅರೇಬಿಯೇತರರ ಮುಂದೆ ನಿಮಗೆ ಹೆಚ್ಚಿನ ಗೌರವ ಸಿಗಲು ಕಾರಣವಾಗುವುದು. ಇದನ್ನು ಕೇಳಿ ಹಝ್ರತ್ ಉಮರ್(ರ) ಹೇಳಿದರು: ಎಲೈ ಯಝೀದ್, ಇಲ್ಲ, ಅಲ್ಲಾಹನಾಣೆ, ನನ್ನ ಇಬ್ಬರು ಸಂಗಡಿಗರಿಂದ ನಾನು ಯಾವ ಸ್ಥಿತಿಯಲ್ಲಿ ಅಗಲಿದನೋ ಆ ರೂಪ ಮತ್ತು ಸ್ಥಿತಿಯನ್ನು ನಾನು ಉಪೇಕ್ಷಿಸುವುದಿಲ್ಲ. ಎಂದರೆ ಹಝ್ರತ್ ಪೈಗಂಬರ್(ಸ) ಮತ್ತು ಹಝ್ರತ್ ಅಬೂಬಕರ್‌ರೊಂದಿಗೆ ನಾನು ಯಾವ ಸ್ಥಿತಿಯಲ್ಲಿ ಇದ್ದನೋ ಅದೇ ಸ್ಥಿತಿಯಲ್ಲಿ ನಾನು ಇರುವೆನು. ನಾನು ಜನರಿಗಾಗಿ ಸೌಂದರ್ಯ ಮತ್ತು ಚೆಲುವನ್ನು ಸ್ವೀಕರಿಸುವುದಿಲ್ಲ. ಏಕೆಂದರೆ, ಹೀಗೆ ಮಾಡುವುದರಿಂದ ನಾನು ಅಲ್ಲಾಹನ ದೃಷ್ಟಿಯಲ್ಲಿ ತಪ್ಪುಗಾರನಾಗುವನೋ ಎಂದು ನಾನು ಭಯಪಡುತ್ತೇನೆ. ಜನರ ಮುಂದೆ ನಾನು ಆದರಣೀಯನೂ ಅಲ್ಲಾಹನ ದೃಷ್ಟಿಯಲ್ಲಿ ನೀಚನೂ ಆಗಲು ನಾನು ಬಯಸುವುದಿಲ್ಲ. ಒಟ್ಟಿನಲ್ಲಿ ಹಝ್ರತ್ ಪೈಗಂಬರ್(ಸ) ಮತ್ತು ಹಝ್ರತ್ ಅಬೂಬಕರ್‌ರ(ರ) ಜೀವಿತ ಕಾಲದಲ್ಲಿ ಇದ್ದ ಸ್ಥಿತಿಯಲ್ಲಿ ಹಝ್ರತ್ ಉಮರ್(ರ) ಕೊನೆಯುಸಿರು ತನಕ ನೆಲೆನಿಂತರು.
(ಅಲ್‌ಇಕ್ತಿಫಾ ಬಿಮಾ ತಝ್‌ಮನಾ....., ಸಂಪುಟ-2, ಪುಟ-295, ಆಲಿಮುಲ್ ಕುತುಬ್ ಬೈರೂತ್ 1997)

ಮುಸ್ಲಿಮರ ಮತ್ತು ಕ್ರೈಸ್ತರ ನಡುವ ಸಂಧಾನದ ಒಪ್ಪಂದ ಹೇಗೆ ಆಯಿತು ಮತ್ತು ಏಲಿಯ ನಿವಾಸಿಗಳ ಪ್ರಕಾರ ಒಪ್ಪಂದ ಎಲ್ಲಿಯಾಗಿತ್ತು ಎಂಬುದರ ಕುರಿತು ಹೆಚ್ಚಿನ ಚರಿತ್ರೆಗಾರರು ಹೀಗೆ ಬರೆದಿರುವರು: ಜಾಬಿಯ ಎಂಬ ಸ್ಥಳದಲ್ಲಿ ಕ್ರೈಸ್ತರ ಮತ್ತು ಮುಸ್ಲಿಮರ ನಡುವೆ ಸಂಧಾನದ ಒಪ್ಪಂದವಾಗಿತ್ತು. ಜಾಬಿಯದಲ್ಲಿ ತಂಗಿದಾಗ ಹಝ್ರತ್ ಉಮರ್(ರ) ಸೈನ್ಯದ ನಡುವೆ ಕುಳಿತುಕೊಂಡಿದ್ದರು. ಅಚಾನಕ್ಕಾಗಿ ಕೆಲವು ಸವಾರರು

ಕಂಡುಬಂದರು. ಅವರು ಕುದುರೆಯನ್ನು ಓಡಿಸುತ್ತಾ ಬರುತ್ತಿದ್ದರು. ಅವರ ಖಡ್ಗಗಳು ಹೊಳೆಯುತ್ತಿತ್ತು. ಮುಸ್ಲಿಮರು ಬೇಗನೇ ಆಯುಧಗಳನ್ನು ಕೈಯಲ್ಲಿ ಎತ್ತಿದರು. ಏನಾಯಿತು ಎಂದು ಹಝ್ರತ್ ಉಮರ್(ರ) ಕೇಳಿದರು. ಸವಾರರ ಕಡೆಗೆ ಜನರು ಬೊಟ್ಟುಮಾಡಿದರು. ಹಝ್ರತ್ ಉಮರ್(ರ) ಹೇಳಿದರು: ಭಯಪಡಬೇಡ, ಇವರು ಅಭಯವನ್ನು ಬೇಡಲು ಬರುತ್ತಿದ್ದಾರೆ. ಅವರು ಏಲಿಯ ನಿವಾಸಿಗಳಾಗಿದ್ದರು. ಹಝ್ರತ್ ಉಮರ್(ರ) ಸಂಧಾನ ಪತ್ರವನ್ನು ಬರೆದುಕೊಟ್ಟರು. (ತಾರೀಖ್ ತಿಬರಿ ಅನುವಾದಕ, ಸಂಪುಟ–2, ಭಾಗ–2, ಪುಟ–369–370, ನಫೀಸ್ ಅಕಾಡಮಿ ಕರಾಚಿ 2004) (ಅಲ್‌ಫಾರೂಖ್, ಶಿಬ್ಲಿ ನುಮಾನಿ, ಪುಟ–125, ಇದಾರ ಇಸ್ಲಾಮಿಯಾತ್ 2004)

ಮತ್ತೊಂದು ವರದಿ ಅಲ್ಲಾಮ ಬಲಾಧ್ಹರಿ ಮತ್ತು ಮುಹಮ್ಮದ್ ಹುಸೈನ್ ಹೈಕಲ್ ಬರೆದಿರುವರು. ಅವರ ಪ್ರಕಾರ ಸಂಧಾನದ ಒಪ್ಪಂದ ಜಾಬಿಯದ ಬದಲಾಗಿ ಏಲಿಯದಲ್ಲಿ ನಡೆದಿತ್ತು. ಆದಾಗ್ಯೂ ಒಪ್ಪಂದ ಜಾಬಿಯದಲ್ಲಿ ನಡೆದಿತ್ತು ಎಂದೂ ಮುಹಮ್ಮದ್ ಹುಸೈನ್ ಹೈಕಲ್ ತನ್ನ ಗ್ರಂಥದಲ್ಲಿ ಬೇರೊಂದೆಡೆ ಬರೆದಿರುವರು. (ಹಝ್ರತ್ ಉಮರ್ ಫಾರೂಖ್ ಆಝುಮ್(ರ) ಮುಹಮ್ಮದ್ ಹುಸೈಸ್ ಹೈಕಲ್ ಅನುವಾದಕ, ಪುಟ–368,371, ಇಸ್ಲಾಮಿ ಕುತುಬ್ ಖಾನ ಲಾಹೋರ್) (ಫತೂಹುಲ್ ಬಲದಾನ್ ಪುಟ–88, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಮುಸ್ಲಿಮರ ಮತ್ತು ಏಲಿಯ ನಿವಾಸಿಗಳ ನಡುವೆ ಬರೆಯಲಾದ ಸಂಧಾನ ಪತ್ರದಲ್ಲಿ ಇರುವ ಲಿಖಿತ ಹೀಗೆ ನಮೂದಿಸಲಾಗಿದೆ:

ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಂ. ಇದು ಅಲ್ಲಾಹನ ದಾಸನಾದ ಅಮೀರುಲ್ ಮೂಮಿನೀನ್ ಏಲಿಯದ ಜನರಿಗೆ ಕೊಡುವ ಅಭಯವಾಗಿದೆ. ಅವರ ಜೀವ, ಸಂಪತ್ತು, ಚರ್ಚ್‌ಗಳು, ಶಿಲುಬೆಗಳು, ರೋಗಿಗಳು, ಆರೋಗ್ಯವಂತರು ಮತ್ತು ಸಂಪೂರ್ಣ ಸಮುದಾಯಕ್ಕೆ ಅಭಯವನ್ನು ನೀಡಲಾಗುತ್ತಿದೆ. ಯಾರೂ ಅವರ ಚರ್ಚ್‌ಗಳಲ್ಲಿ ತಂಗಬಾರದು. ಅದನ್ನು ಬೀಳಿಸಲಾಗುವುದಿಲ್ಲ, ಮಾತ್ರವಲ್ಲ ಅವರ ಚರ್ಚ್‌ಗಳ ಸುತ್ತುವಲಯವನ್ನು ಕಡಿಮೆಗೊಳಿಸಲಾಗದು, ಅವರ ಶಿಲುಬೆಗಳಿಗೆ ಕೇಡುಂಟು ಮಾಡಲಾಗದು, ಅವರ ಸಂಪತ್ತಿಗೆ ನಷ್ಟ ಉಂಟುಮಾಡಲಾಗದು, ಧರ್ಮದ ವಿಷಯದಲ್ಲಿ ಅವರೊಂದಿಗೆ ಒತ್ತಾಯಮಾಡಲಾರದು, ಅವರಲ್ಲಿ ಯಾರಿಗೂ ತೊಂದರೆ ಕೊಡಲಾರದು, ಏಲಿಯದಲ್ಲಿ ಅವರೊಂದಿಗೆ ಯಾವನೇ ಯಹೂದಿ ಇರಬಾರದು, ಇತರ ಪಟ್ಟಣನಿವಾಸಿಗಳ ಹಾಗೆ ಏಲಿಯ ನಿವಾಸಿಗಳು ಕಡ್ಡಾಯವಾಗಿಯೂ ಜಿಝ್ಯಿಯ ಕೊಡಬೇಕು. ರೋಮನರನ್ನು ಮತ್ತು ಗಲಭೆಗಾರರನ್ನು ಏಲಿಯದಿಂದ ಅವರು ಹೊರಹಾಕಬೇಕು. ಯಾವನು ಇಲ್ಲಿಂದ ಹೊರಡುವನೋ ಅವನ ಜೀವ ಮತ್ತು ಸಂಪತ್ತಿಗೂ ಅವನು ಸುರಕ್ಷಿತ ಸ್ಥಳಕ್ಕೆ ತಲುಪುವ ತನಕ ಅಭಯ ನೀಡಲಾಗುವುದು. ಯಾರು ಏಲಿಯದಲ್ಲಿ ಇರಲು ಬಯಸುತ್ತಾನೋ ಅವನು ಅಭಯದಲ್ಲಿರುವನು. ಅವನೂ ಏಲಿಯ ನಿವಾಸಿಗಳ ಹಾಗೆ ಜಿಝ್ಯಿಯ ನೀಡಬೇಕು. ಯಾವನು ತನ್ನ ಜೀವ ಮತ್ತು ಸಂಪತ್ತನ್ನು ತೆಗೆದುಕೊಂಡು ರೋಮನರ ಕಡೆಗೆ ಹೋಗಲು ಬಯಸುತ್ತಾನೋ, ಅವನು ತನ್ನ ಆರಾಧನಾ ಸ್ಥಳಗಳನ್ನು ಮತ್ತು ಶಿಲುಬೆಗಳನ್ನು ಬಿಟ್ಟುಹೋದರೆ, ಅವನ ಜೀವ, ಅವನ ಆರಾಧನಾಲಯ, ಮತ್ತು ಶಿಲುಬೆ ಅಭಯದಲ್ಲಿರುವುದು. ಅಲ್ಲಿಂದ ಹೊರಟು ಹೋದರೂ ಏನೂ ಮಾಡಲಾಗುವುದಿಲ್ಲ. ಅವನು ಸುರಕ್ಷಿತ ಸ್ಥಳಕ್ಕೆ ತಲುಪುವ ತನಕ ಅವನಿಗೆ ಅಭಯ ಸಹ ನೀಡಲಾಗುವುದು. ಏಲಿಯದಲ್ಲಿ ಯುದ್ಧಕ್ಕೆ ಮುಂಚೆ ಇದ್ದ ರೈತರಲ್ಲಿ ಯಾರಾದರೂ ತಮ್ಮ ಕೃಷಿಭೂಮಿಯನ್ನು ಬಳಸಲು ಉದ್ದೇಶಿಸುವುದಾದರೆ, ಅವರು ಸಹ ಏಲಿಯದ ಜನರ ಹಾಗೆ ಜಿಝ್ಯಿಯ ಕೊಡಬೇಕು. ಯಾರು ರೋಮನರ ಜೊತೆಗೆ ಹೋಗಲು ಬಯಸುತ್ತಾರೋ ಅವರು ಹೋಗಬಹುದು. ಯಾರು ತಮ್ಮ ಊರುಗಳಿಗೆ ಹೊರಟುಹೋಗಲು ಬಯಸುತ್ತಾರೋ ಅವರು ಮರಳಬಹುದು. ಅವರಿಂದ ಯಾವುದೇ ಜಿಝ್ಯಿಯ ಪಡೆಯಲಾಗುವುದಿಲ್ಲ. ಅವರ ಕೃಷಿಯಿಂದ ಆಮದು ಸಿಕ್ಕಿದ ನಂತರ ಅವರಿಂದ ಜಿಝ್ಯಿಯ ಪಡೆಯಲಾಗುವುದು. ಈ ಒಪ್ಪಂದದಲ್ಲಿ ಇರುವ ಸಂಗತಿಗಳಿಗೆ ಅಲ್ಲಾಹನ ಒಡಂಬಡಿಕೆಯಿದೆ. ಅದಕ್ಕೆ ಅವನ ಪೈಗಂಬರ್(ಸ), ಖಲೀಫರು ಮತ್ತು ಸತ್ಯವಿಶ್ವಾಸಿಗಳೂ ಜವಾಬ್ದಾರರು. ಅಲ್ಲಿಯ ನಿವಾಸಿಗಳು ಜಿಝ್ಯಿಯ ಕೊಡುವ ತನಕ ಅವರ ಜವಾಬ್ದಾರಿ ವಹಿಸಲಾಗುವುದು.

ಈ ಒಪ್ಪಂದದಲ್ಲಿ ಹಝ್ರತ್ ಖಾಲಿದ್ ಬಿನ್ ವಲೀದ್(ರ), ಹಝ್ರತ್ ಅಮ್ರ್ ಬಿನ್ ಆಸ್(ರ), ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಮತ್ತು ಹಝ್ರತ್ ಮುಆವಿಯ ಬಿನ್ ಅಬುಸುಫ್‌ಯಾನರ ಸಹಿಗಳು ಇದ್ದುವು. (ತಾರೀಖ್ ಅತ್ತಿಬರಿ, ಸಂಪುಟ–2, ಪುಟ–449, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012)

ತಾರೀಖ್ ಇಬ್ನು ಖಲ್‌ದೂನಿನಲ್ಲಿ ಹೀಗೆ ಬರೆಯಲಾಗಿದೆ: ಈ ಒಪ್ಪಂದದಿಂದ ಕೆಲವು ಸಂಗತಿಗಳು ಸಾಬೀತಾಗುತ್ತವೆ. ಒಂದು, ಮುಸ್ಲಿಮರು ತಮ್ಮ ಧರ್ಮವನ್ನು ಖಡ್ಗಬಲದಿಂದ ಹರಡಿರಲಿಲ್ಲ, ಎರಡು, ಅವರ ಅಧಿಕಾರದ ಕಾಲದಲ್ಲಿ ಇತರ ಧರ್ಮದವರಿಗೆ ಬಹಳ ಹೆಚ್ಚಿನ ಧಾರ್ಮಿಕ ಸ್ವಾತಂತ್ರ್ಯವಿತ್ತು, ಮೂರು, ಅನ್ಯ ಸಮುದಾಯದವರಿಂದ ಒತ್ತಾಯಪೂರ್ವಕವಾಗಿ ಜಿಝ್ಯಿಯ ಪಡೆಯಲಾಗುತ್ತಿರಲಿಲ್ಲ, ಅಲ್ಲಿ ನೆಲೆಸದೇ ಅಲ್ಲಿಂದ ಹೊರಡಲು ಅಥವಾ ಜಿಝ್ಯಿಯ ನೀಡಲು, ಎರಡು ಸಂಗತಿಗಳಲ್ಲಿ ಒಂದನ್ನು ಆಯ್ಕೆಮಾಡಲು ಅವರಿಗೆ ಹಕ್ಕಿತ್ತು. ಎರಡೂ ಸ್ಥಿತಿಗಳಲ್ಲೂ ಅವರಿಗೆ ಅಭಯ ನೀಡಲಾಗುತ್ತಿತ್ತು. (ತಾರೀಖ್ ಇಬ್ನೆ ಖಲ್‌ದೂನ್, ಸಂಪುಟ–3, ಭಾಗ–1, ಪುಟ–208, ದಾರುಲ್ ಇಶಾಅತ್ ಕರಾಚಿ 2009)

ಈ ಸಂಧಾನದ ಸುದ್ದಿ ರಮ್‌ಲ ನಿವಾಸಿಗಳಿಗೆ ತಲುಪಿದಾಗ ಅವರು ಸಹ ಅಮೀರಲ್‌ಮೂಮಿನೀನ್‌ರೊಂದಿಗೆ ಇದೇ ರೀತಿಯ ಒಪ್ಪಂದವನ್ನು ಮಾಡಲು ಹಾತೊರೆಯುತ್ತಿದ್ದರು. ಪೆಲಸ್ತೀನಿನ ಇತರ ಜನರ ಸ್ಥಿತಿಯೂ ಇದೇ ಆಗಿತ್ತು. ಲದ್ದೂ ನಿವಾಸಿಗಳಿಗೆ ಹಝ್ರತ್ ಉಮರರ ಕಡೆಯಿಂದ ಒಂದು ಪತ್ರವನ್ನು ಬರೆಯಲಾಯಿತು. ಅನಂತರ ಮುಸ್ಲಿಮರಿಗೆ ವಿಧೇಯರಾದ ಇತರ ಪಟ್ಟಣಗಳ ನಿವಾಸಿಗಳ ಮೇಲೂ ಆ ಪತ್ರದಲ್ಲಿ ಬರೆಯಲಾದ ಸಂಗತಿಗಳನ್ನು ಜಾರಿಗೊಳಿಸಲಾಯಿತು. ಈ ಪತ್ರದಲ್ಲಿ ಹಝ್ರತ್ ಉಮರ್(ರ) ಲದ್ದೂ ನಿವಾಸಿಗಳ ಜೀವ, ಸಂಪತ್ತು, ಆರಾಧನಾಲಯಗಳು, ಶಿಲುಬೆಗಳಿಗೆ ಹಾಗೂ ಆರೋಗ್ಯವಂತರು, ರೋಗಿಗಳು ಮತ್ತು ಎಲ್ಲ ಧರ್ಮಾವಲಂಬಿಗಳಿಗೆ ಅಭಯ ನೀಡಿದ್ದಾಗಿ ಬರೆಯಲಾಗಿತ್ತು. ಅವರು ಸಿರಿಯದ ಪಟ್ಟಣನಿವಾಸಿಗಳ ಹಾಗೆ ಜಿಝ್ಯಿಯ ನೀಡಿದರೆ, ಅವರ ಧರ್ಮದ ಮೇಲೆ ಯಾವುದೇ ಬಲಪ್ರಯೋಗ ನಡೆಸಲಾಗುವುದಿಲ್ಲ. ಭಿನ್ನ ವಿಶ್ವಾಸಗಳ ಕಾರಣದಿಂದ ಅವರಿಗೆ ನಷ್ಟವುಂಟುಮಾಡಲಾರದು. ಈ ಎಲ್ಲ ಕೆಲಸಗಳನ್ನು ಮುಗಿಸಿದ ನಂತರ ಹಝ್ರತ್ ಉಮರ್(ರ) ಫೆಲಸ್ತೀನಿಗೆ ಎರಡು ಅಧಿಕಾರಿಗಳನ್ನು ನಿಶ್ಚಯಿಸಿದರು. ದೇಶದ ಅರ್ಧಾರ್ಧ ಭಾಗಗಳನ್ನು ಇಬ್ಬರಿಗೂ ಭಾಗಿಸಿ ನೀಡಲಾಯಿತು. ಹೀಗೆ ಅಲ್‌ಕಮ ಬಿನ್ ಹಕೀಮರ ಆಡಳಿತ ಕೇಂದ್ರ ರಮ್ಲ ಮತ್ತು ಅಲ್‌ಕಮ ಬಿನ್ ಮಜ್‌ಜ್ಝ್ಹ್‌ರ ಆಡಳಿತ ಕೇಂದ್ರ ಏಲಿಯ ಆಗಿತ್ತು.

ಹಝ್ರತ್ ಉಮರ್(ರ) ಬೈತುಲ್‌ಮಖ್‌ದಸ್‌ಗೆ ಹೋದರು.

ಇದರ ಬಗ್ಗೆ ಹೀಗೆ ಬರೆಯಲಾಗಿದೆ: ಹಝ್ರತ್ ಉಮರ್(ರ) ಏಲಿಯದ ಜನರಿಗೆ ಅಭಯವನ್ನು ಕೊಟ್ಟು, ಅಲ್ಲಿ ಸೈನ್ಯವನ್ನು ನಿಲ್ಲಿಸಿದ ನಂತರ ಜಾಬಿಯದಿಂದ ಬೈತುಲ್‌ಮಖ್‌ದಸಿಗೆ ಹೊರಟರು. ಅವರು ಕುದುರೆಯ ಮೇಲೆ ಸವಾರರಾದಾಗ, ಕುದುರೆಯ ಕಾಲಿನಲ್ಲಿ ನೋವು ಇರುವ ಕಾರಣದಿಂದ ಅದು ಸರಿಯಾಗಿ ಹೋಗುತ್ತಿಲ್ಲವೆಂದು ಹಝ್ರತ್ ಉಮರ್(ರ) ಕಂಡರು. ಹಝ್ರತ್ ಉಮರ್‌ರಿಗಾಗಿ ತುರ್ಕಿ ಕುದುರೆಯನ್ನು ತರಲಾಯಿತು. ಅವರು ಅದರ ಮೇಲೆ ಸವಾರರಾದಾಗ, ಅದು ಹಠಮಾಡಲು ಶುರುಮಾಡಿತು. ಅವರು ಅದರಿಂದ ಇಳಿದರು. ಕೆಲವು ದಿನಗಳ ನಂತರ ಕಾಲಿನಲ್ಲಿ ನೋವಿದ್ದ ಅವರ ಕುದುರೆಯನ್ನೇ ಅವರು ತರಿಸಿದರು. ಅದರ ಚಿಕಿತ್ಸೆ ಮಾಡಲಾಗಿತ್ತು. ಅವರು ಅದರ ಮೇಲೆ ಸವಾರರಾಗಿ ಬೈತುಲ್‌ಮಖ್‌ದಸಿಗೆ ಹೊರಟರು. (ತಾರೀಖ್ ಅತ್ತಿಬರಿ ಅನುವಾದಕ, ಸಯದ ಮುಹಮ್ಮದ್ ಇಬ್ರಾಹೀಮ್ ನದವಿ, ಸಂಪುಟ–2, ಭಾಗ–2, ಪುಟ–809, ದಾರುಲ್ ಇಶಾಅತ್ 2003)

ಬೈತುಲ್ ಮಖ್‌ದಸ್‌ನ ಸಮೀಪಕ್ಕೆ ತಲುಪಿದಾಗ ಹಝ್ರತ್ ಅಬೂಉಬೈದ(ರ) ಮತ್ತು ಸೇನಾನಾಯಕರು ಅವರನ್ನು ಸ್ವಾಗತಿಸಲು ಬಂದರು. ಹಝ್ರತ್ ಉಮರರ ಬಟ್ಟೆ ಮತ್ತು ಸಾಮಾನುಗಳು ಬಹಳ ಸರಳವಾಗಿದ್ದವು. ಕ್ರೈಸ್ತರು ಏನು ಹೇಳುವರು ಎಂದು ಭಾವಿಸಿಕೊಂಡು ಮುಸ್ಲಿಮರು ಅವರಿಗೆ ಬೆಲೆಬಾಳುವ ವಸ್ತ್ರಗಳನ್ನು ಕೊಟ್ಟರು. ಆದರೆ ಹಝ್ರತ್ ಉಮರ್(ರ) ಹೇಳಿದರು: ಅಲ್ಲಾಹನು ನಮಗೆ ಕೊಟ್ಟ ಗೌರವ ಇಸ್ಲಾಂ ಎಂಬ ಗೌರವವಾಗಿದೆ. ನಮಗೆ ಅದೇ ಸಾಕು.

ಕ್ರೈಸ್ತರ ಪಾದರಿಗಳು ಸ್ವತಃ ಪಟ್ಟಣದ ಕೀಲಿಗೈಗಳನ್ನು ಹಝ್ರತ್ ಉಮರ್‌ರಿಗೆ ಒಪ್ಪಿಸಿದರು. ಹಝ್ರತ್ ಉಮರ್(ರ) ಮೊತ್ತಮೊದಲು ಮಸ್ಜಿದ್ ಅಖ್ಸಗೆ ಹೋದರು. ಅನಂತರ ಕ್ರೈಸ್ತರ ದೇವಾಲಯಕ್ಕೆ ಹೋದರು. ಅದನ್ನು ನೋಡುತ್ತಾ ಹೋದರು. ಹಝ್ರತ್ ಉಮರ್(ರ) ಕ್ರೈಸ್ತರ ಚರ್ಚಿನಲ್ಲಿ ಸುತ್ತಿದರು. ನಮಾಝಿನ ಸಮಯವಾದಾಗ, ಕ್ರೈಸ್ತರು ಚರ್ಚಿನಲ್ಲಿ ನಮಾಝ್ ಮಾಡಲು ಅನುಮತಿ ಕೊಟ್ಟರು. ಆದರೆ ಮುಂದಿನ ಪೀಳಿಗೆಯವರು ಇದರ ಆಧಾರದಲ್ಲಿ ಕ್ರೈಸ್ತರ ಆರಾಧನಾಲಯಗಳನ್ನು ವಶಪಡಿಸದಿರಲಿ ಎಂಬ ಯೋಚನೆಯಿಂದ ಅವರು ಹೊರಗೆ ಬಂದು ನಮಾಝ್ ನಿರ್ವಹಿಸಿದರು.

ಏಲಿಯದಲ್ಲಿ ಹಝ್ರತ್ ಉಮರ್(ರ) ತಂಗಿದ ವೇಳೆ, ಮುಸ್ಲಿಂ ಸೈನ್ಯದ ಸರದಾರರು ಹಝ್ರತ್ ಉಮರ್‌ರನ್ನು ಊಟಕ್ಕೆ ಆಮಂತ್ರಿಸಲು ಶುರುಮಾಡಿದರು. ಅವರು ಆಹಾರವನ್ನು ತಯಾರುಮಾಡಿ ಅವರ ಡೇರೆಗೆ

ಬರಲು ಹಝ್ರತ್ ಉಮರ್‌ರೊಡನೆ(ರ) ವಿನಂತಿಸುತ್ತಿದ್ದರು. ಹಝ್ರತ್ ಉಮರ್(ರ) ಅದನ್ನು ಗೌರವಿಸುತ್ತಾ ಅವರ ಆಮಂತ್ರಣವನ್ನು ಸ್ವೀಕರಿಸುತ್ತಿದ್ದರು. ಆದರೆ ಹಝ್ರತ್ ಅಬೂಉಬೈದ(ರ) ಹಝ್ರತ್ ಉಮರ್‌ರನ್ನು(ರ) ಊಟಕ್ಕಾಗಿ ಆಮಂತ್ರಿಸಲಿಲ್ಲ. ಹಝ್ರತ್ ಉಮರ್(ರ) ಹೇಳಿದರು: ನಿನ್ನ ಸೈನ್ಯದಲ್ಲಿ ನೀನಲ್ಲದೇ ಬೇರೆ ಯಾವ ಸರದಾರನೂ ನನ್ನನ್ನು ಊಟಕ್ಕೆ ಆಮಂತ್ರಿಸದೇ ಇರಲಿಲ್ಲ. ಅದೇಕೆ? ಹಝ್ರತ್ ಅಬೂಉಬೈದ(ರ) ಹೇಳಿದರು: ಯಾ ಅಮೀರಲ್‌ಮೂಮಿನೀನ್, ನಾನು ನಿಮ್ಮನ್ನು ಆಮಂತ್ರಿಸಿದರೆ, ನಿಮಗೆ ನಿಮ್ಮ ಕಣ್ಣೀರನ್ನು ಹತೋಟಿಯಲ್ಲಿಡಲು ಸಾಧ್ಯವಾಗದು ಎಂಬುದಾಗಿ ನಾನು ಭಯಪಡುತ್ತೇನೆ. ಹಝ್ರತ್ ಉಮರ್(ರ) ಅವರ ಡೇರೆಗೆ ಹೋದರು. ಅವರು ಅಲ್ಲಿ ನೋಡಿದ್ದಾದರೂ ಏನು? ಅಲ್ಲಿ ಕುದುರೆಯ ಮೇಲೆ ಹಾಕಲಾಗುವ ಬಟ್ಟೆಯಿತ್ತು. ಅದೇ ಅವರ ಹಾಸಿಗೆಯಾಗಿತ್ತು ಮತ್ತು ಕುದುರೆಯ ಮೇಲೆ ಕುಳಿತುಕೊಳ್ಳಲು ಇಡಲಾಗುವ ಜೀನು ಇತ್ತು. ಅದೇ ಅವರ ತಲೆದಿಂಬು ಆಗಿತ್ತು. ಡೇರೆಯ ಒಂದು ಮೂಲೆಯಲ್ಲಿ ಒಣರೋಟಿಯಿತ್ತು. ಹಝ್ರತ್ ಅಬೂಉಬೈದ(ರ) ಅದನ್ನು ತಂದರು. ಅದನ್ನು ನೆಲದಲ್ಲಿ ಹಝ್ರತ್ ಉಮರರ ಮುಂದೆ ಇರಿಸಿದರು. ಅನಂತರ ಅವರು ಉಪ್ಪು ಮತ್ತು ಮಣ್ಣಿನ ಬಟ್ಟಲನ್ನು ತಂದರು. ಅದರಲ್ಲಿ ನೀರಿತ್ತು. ಹಝ್ರತ್ ಉಮರ್(ರ) ಈ ದೃಶ್ಯವನ್ನು ಕಂಡು ಅತ್ತುಬಿಟ್ಟರು. ಅನಂತರ ಅಬೂಉಬೈದರನ್ನು(ರ) ಹಝ್ರತ್ ಉಮರ್(ರ) ಆಲಂಗಿಸಿದರು ಮತ್ತು ಹೀಗೆ ಹೇಳಿದರು: ನೀನು ನನ್ನ ಸಹೋದರನಾಗಿರುವೆ.

ಲೋಕದಿಂದ ಏನೂ ಪಡೆಯದ ಮತ್ತು ಲೋಕವು ಅವರಿಗೆ ಏನೂ ನೀಡದ ವ್ಯಕ್ತಿಯಾಗಿ ನನ್ನ ಸಂಗಡಿಗರಲ್ಲಿ ನೀನಲ್ಲದೆ ಬೇರೆ ಯಾರೂ ಇಲ್ಲ. ಆಗ ಹಝ್ರತ್ ಅಬೂಉಬೈದ(ರ) ಹೇಳಿದರು: ನಿಮಗೆ ನಿಮ್ಮ ಕಣ್ಣೀರನ್ನು ನಿಯಂತ್ರಿಸಲು ಸಾಧ್ಯವಾಗದು ಎಂಬ ಕಾರಣದಿಂದ ನಾನು ಮೊದಲು ನಿಮ್ಮನ್ನು ಆಮಂತ್ರಿಸಿರಲಿಲ್ಲ. ಅನಂತರ ಹಝ್ರತ್ ಉಮರ್(ರ) ಜನರ ಮಧ್ಯ ಎದ್ದುನಿಂತರು.

ಅನಂತರ ಹೊರಗೆ ಬಂದು ಅಲ್ಲಾಹನಿಗೆ ಸಲ್ಲಬೇಕಾದ ಸ್ತುತಿಯನ್ನು ಅರ್ಪಿಸಿದರು. ಹಝ್ರತ್ ಪೈಗಂಬರರ ಮೇಲೆ ದುರೂದ್ ಪ್ರಾರ್ಥನೆ ಮಾಡಿದ ನಂತರ ಹೀಗೆ ಹೇಳಿದರು: ಎಲೈ ಮುಸ್ಲಿಮರೇ, ಖಂಡಿತವಾಗಿಯೂ ಅಲ್ಲಾಹನು ನಿಮ್ಮೊಡನೆ ಮಾಡಿದ ವಾಗ್ದಾನವನ್ನು ಸತ್ಯಪಡಿಸಿ ತೋರಿಸಿದ್ದಾನೆ. ಅವನು ನಿಮಗೆ ಶತ್ರುಗಳ ವಿರುದ್ಧ ಸಹಾಯ ನೀಡಿದನು. ನಿಮ್ಮನ್ನು ಈ ದೇಶಗಳ ವಾರಸುದಾರರನ್ನಾಗಿ ಮಾಡಿದನು, ನಿಮಗೆ ಭೂಮಿಯಲ್ಲಿ ಸಮಾಧಾನವನ್ನು ಪ್ರದಾನ ಮಾಡಿದನು. ಆದ್ದರಿಂದ ನೀವು ನಿಮ್ಮ ಪ್ರಭುವಿನ ಅನುಗ್ರಹಗಳಿಗೆ ಕೃತಜ್ಞತೆ ಅರ್ಪಿಸಬೇಕು. ನೀವು ಅವಿಧೇಯತ್ವದ ಕೆಲಸಗಳಿಂದ ದೂರವಿರಿ, ಏಕೆಂದರೆ, ಅನುಸರಣೆಯಿಲ್ಲದವರ ಕೆಲಸ ಅನುಗ್ರಹಗಳಿಗೆ ಕೃತಘ್ನತೆ ತೋರಿಸುವವರಂತಾಗಿದೆ. ಅಲ್ಲಾಹನು ಯಾವುದಾದರೂ ಸಮುದಾಯಕ್ಕೆ ಅನುಗ್ರಹವನ್ನು ವರ್ಷಿಸಿದ ನಂತರ ಅವರು ಅದಕ್ಕೆ ಕೃತಜ್ಞತೆ ತೋರಿಸದೇ ಇದ್ದೂ, ಪಶ್ಚಾತ್ತಾಪ ಮಾಡದೇ ಇದ್ದು ಕೂಡ ಅವರ ಗೌರವವನ್ನು ಅಲ್ಲಾಹನು ಹಿಂತೆಗೆಯದೇ ಇರುವ ಸ್ಥಿತಿ ಉಂಟಾಗುವುದು ಬಹಳ ಕಡಿಮೆ. ಎಂದರೆ, ಕೃತಘ್ನತೆ ತೋರಿಸಿದ ನಂತರ ಪಶ್ಚಾತ್ತಾಪ ಮಾಡದಿದ್ದರೆ, ಅವರ ಗೌರವಗಳನ್ನು ಕಸಿದುಕೊಳ್ಳಲಾಗುತ್ತದೆ. ಅವು ಕೊನೆಗೊಳ್ಳುತ್ತವೆ. ಅವರಿಗೆ ಲಭಿಸಿದ ಅನುಗ್ರಹಗಳನ್ನು ಕಸಿದುಕೊಳ್ಳಲಾಗುತ್ತದೆ. ಅವರ ಮೇಲೆ ಅವರ ಶತ್ರುಗಳಿಗೆ ಮೇಲುಗೈ ನೀಡಲಾಗುತ್ತದೆ. ಏಲಿಯದಲ್ಲಿ ಹೆಚ್ಚಿನ ಅಧಿಕಾರಿಗಳು ಒಟ್ಟುಗೂಡಿದ್ದರು. ಆದ್ದರಿಂದ ಹಝ್ರತ್ ಉಮರ್(ರ) ಅನೇಕ ದಿನಗಳು ಅಲ್ಲಿ ತಂಗಿದರು ಮತ್ತು ಆವಶ್ಯಕ ಆದೇಶಗಳನ್ನು ಜಾರಿ ಮಾಡಿದರು.

ಒಂದು ದಿನ ಹಝ್ರತ್ ಬಿಲಾಲ್(ರ) ಬಂದು ಹೀಗೆ ದೂರು ಕೊಟ್ಟರು: ನಮ್ಮ ಅಧಿಕಾರಿಗಳು ಪಕ್ಷಿಗಳ ಮಾಂಸ ಮತ್ತು ಗೋಧಿಯ ನುಣುಪಾದ ಹಿಟ್ಟಿನ ರೊಟ್ಟಿಗಳನ್ನು ತಿನ್ನುತ್ತಾರೆ. ಆದರೆ ಸಾಮಾನ್ಯ ಜನರಿಗೆ ಸಾಧಾರಣ ಆಹಾರ ಕೂಡ ಸಿಗುವುದಿಲ್ಲ. ಅಧಿಕಾರಿಗಳೊಡನೆ ಇದರ ಕುರಿತು ಹಝ್ರತ್ ಉಮರ್(ರ) ಕೇಳಿದರು. ಅವರು ಹೇಳಿದರು: ಎಲ್ಲ ವಸ್ತುಗಳು ಇಲ್ಲಿ ಅಗ್ಗದರದಲ್ಲಿ ಲಭ್ಯವಿದೆ. ಅರೇಬಿಯದಲ್ಲಿ ರೋಟಿ ಮತ್ತು ಖರ್ಜೂರ ಸಿಗುವ ಬೆಲೆಗೆ ಇಲ್ಲಿ ಪಕ್ಷಿಗಳ ಮಾಂಸ ಮತ್ತು ಮೈದಾ ಸಿಗುತ್ತದೆ. ಹಝ್ರತ್ ಉಮರ್(ರ) ಅವರೊಡನೆ ಅದನ್ನು ತಿನ್ನಬಾರದು ಎಂದು ಹೇಳಲಿಲ್ಲ. ಬದಲಾಗಿ, ಯುದ್ಧ ಸಂಪತ್ತು ಮತ್ತು ಸಂಬಳದ ಅಲ್ಲದೆ ಪ್ರತಿ ಸಿಪಾಯಿಗಳಿಗೆ ಆಹಾರವನ್ನು ಸಹ ನಿಶ್ಚಯಿಸಬೇಕೆಂದು ಆದೇಶ ನೀಡಿದರು. ಇದರ ಹೆಚ್ಚಿನ ವಿವರಣೆ ಒಂದೆಡೆ ಹೀಗೆ ಬಂದಿದೆ. ಹಝ್ರತ್ ಯಝೀದ್ ಅಬುಸುಫ್‌ಯಾನ್ ಹೇಳುತ್ತಾರೆ: ನಮ್ಮ ಪಟ್ಟಣಗಳ ನರಖ್ ಅಗ್ಗವಾಗಿದೆ. ಹಝ್ರತ್ ಬಿಲಾಲ್ ಹೇಳುವ ವಸ್ತುಗಳು ಇಲ್ಲಿ ಬಹಳ ಅಗ್ಗವಾಗಿ ಲಭ್ಯವಿದೆ. ಆಗ ಹಝ್ರತ್ ಉಮರ್(ರ) ಹೇಳಿದರು: ಹಾಗಾದರೆ, ಖುಶಿಯಿಂದ ಹೊಟ್ಟೆತುಂಬ ತಿನ್ನಿರಿ. ವಸ್ತುಗಳ ಮತ್ತು ಅವುಗಳ ಬೆಲೆಗಳ ಪಟ್ಟಿಯನ್ನು ನನ್ನ ಮುಂದೆ ಇರಿಸುವ ತನಕ ನಾನು ಇಲ್ಲಿಂದ ಹೋಗುವುದಿಲ್ಲ. ಪಟ್ಟಣಗಳಲ್ಲಿ ಮತ್ತು ಗ್ರಾಮಗಳಲ್ಲಿ ವಾಸಿಸುವ ದುರ್ಬಲ ಮುಸ್ಲಿಮರಿಗಾಗಿ ನಾನು ಬಜೆಟ್ ಬರೆಸುತ್ತೇನೆ. ಅನಂತರ ಒಬ್ಬ ಮುಸ್ಲಿಮನಿಗೆ ಆವಶ್ಯವಿದ್ದಷ್ಟು ಗೋದಿ, ಜೇನುತುಪ್ಪ, ಝೈತೂನ್ ಎಣ್ಣೆ ಇತ್ಯಾದಿಗಳನ್ನು ಪ್ರತಿ ಮನೆಗೆ ಆ ಬಜೆಟಿನಿಂದ ಕೊಡಬೇಕು. ಅನಂತರ ಹಝ್ರತ್ ಉಮರ್(ರ) ಆ ದುರ್ಬಲ ಮತ್ತು ಬಡ ಮುಸ್ಲಿಮರನ್ನು ಸಂಬೋಧಿಸುತ್ತಾ ಹೇಳಿದರು: ನಾನು ನಿಮಗಾಗಿ ತಯಾರಿಸಿದ ಪಟ್ಟಿಯ ಪ್ರಕಾರ ನಿಮ್ಮ ಸರದಾರರು ನಿಮಗೆ ಇವೆಲ್ಲವನ್ನು ಕೊಡುವರು. ನಾನು ಬೈತುಲ್ ಮಾಲಿನಿಂದ ಕಳುಹಿಸುವ ವಸ್ತುಗಳಲ್ಲದೆ ನಿಮಗೆ ಸಿಗಬೇಕಾದ ವಸ್ತುಗಳಾಗಿವೆ ಇವೆಲ್ಲವೂ. ಸರದಾರರರಲ್ಲಿ ಯಾರಾದರೂ ನಿಮಗೆ ಈ ವಸ್ತುಗಳನ್ನು ಕೊಡದಿದ್ದರೆ ನನಗೆ ತಿಳಿಸಿರಿ. ಹಾಗಾದರೆ ನಾನು ಅವರನ್ನು ತಕ್ಷಣವೇ ವಜಾಗೊಳಿಸುವೆನು.

ಹಝ್ರತ್ ಉಮರ್(ರ) ಏಲಿಯದಲ್ಲಿ ತಂಗಿದ ಕಾಲದಲ್ಲಿ, ಒಂದು ಬಾರಿ ನಮಾಝಿನ ಸಮಯವಾದಾಗ, ಹಝ್ರತ್ ಬಿಲಾಲ್‌ರೊಡನೆ ಅಧಾನ್ ನೀಡಲು ಆಜ್ಞಾಪಿಸಲು ಹಝ್ರತ್ ಉಮರ್‌ರೊಡನೆ ಒತ್ತಾಯಪಡಿಸಿದರು. ಹಝ್ರತ್ ಬಿಲಾಲ್(ರ) ಹೇಳಿದರು: ಹಝ್ರತ್ ಪೈಗಂಬರರ(ಸ) ನಂತರ ಯಾರಿಗಾಗಿಯೂ ಅಧಾನ್ ನೀಡುವುದಿಲ್ಲವೆಂದು ನಾನು ದೃಢನಿರ್ಧಾರ ಮಾಡಿದ್ದೆ. ಆದರೆ ನಿಮ್ಮ ಆದೇಶವನ್ನು ಪಾಲಿಸುವೆನು. ಹೀಗೆ ಹಝ್ರತ್ ಉಮರರ ಆದೇಶ ಪ್ರಕಾರ ಹಝ್ರತ್ ಬಿಲಾಲ್(ರ) ಅಧಾನ್ ನೀಡಿದಾಗ ಎಲ್ಲ ಸಹಾಬರಿಗೆ ಹಝ್ರತ್ ಪೈಗಂಬರರ(ಸ) ಕಾಲದ ನೆನಪು ಬಂತು. ಅವರು ಎಷ್ಟು ಭಾವುಕರಾದರು ಎಂದರೆ, ಅವರು ಅತ್ತು ವ್ಯಾಕುಲಗೊಂಡರು. ಹಝ್ರತ್ ಉಮರ್(ರ) ಸಹ ಎಷ್ಟು ವ್ಯಾಕುಲಗೊಂಡರು ಎಂದರೆ, ಬಿಕ್ಕಿಬಿಕ್ಕಿ ಅಳುತ್ತಿದ್ದರು. ದೀರ್ಘ ಸಮಯ ಅದರ ಪ್ರಭಾವವಿತ್ತು. ಬೈತುಲ್‌ಮಖ್‌ದಸ್‌ನಿಂದ ಮರಳಿಹೋಗುವಾಗ ಹಝ್ರತ್ ಉಮರ್(ರ) ದೇಶ ಪೂರ್ತಿ ಪರ್ಯಟನೆ ಮಾಡಿದರು. ಗಡಿಪ್ರದೇಶಗಳನ್ನು ತಪಾಸಣೆ ನಡೆಸಿ ದೇಶದ ಸುರಕ್ಷೆಯ ವ್ಯವಸ್ಥೆಯನ್ನು ಮಾಡಿದರು. (ಅಲ್‌ಫಾರೂಖ್, ಶಿಬ್ಲಿ ನುಮಾನಿ ಪುಟ–125–126, ಇದಾರ ಇಸ್ಲಾಮಿಯಾ ಕರಾಚಿ 2004) (ಫತೂಹು ಶ್ಶಾಮ್ ಅನುವಾದಕ, ಸಂಪುಟ–2, ಪುಟ–224, ಲೈಬ್ರರಿ ಹಝ್ರತ್ ದರ್‌ಬಾರ್ ಮಾರ್ಕೆಟ್ ಲಾಹೋರ್, ಸೆಪ್ಟೆಂಬರ್ 2008) (ಖುಲಫಾ ಎ ರಾಶಿದೀನ್ ಪುಟ–126–127, ರಹ್ಮಾನಿಯ ಲೈಬ್ರರಿ ಲಾಹೋರ್) (ಅಲ್ ಇಕ್ತಿಫಾ ಬಿಮಾ ತಝ್‌ಮನ...., ಸಂಪುಟ–2, ಭಾಗ–1, ಪುಟ–295–296, ಆಲಿಮುಲ್ ಕುತುಬ್ ಬೈರೂತ್ 1997)

ಬೈತುಲ್‌ಮಖ್‌ದಸ್ ಹೋದ ಕಾರಣದಿಂದ ಹಝ್ರತ್ ಉಮರರ ಉದ್ದೇಶ ಈಡೇರಿತು. ಅವರು ಯಾವ ಮಾರ್ಗದಿಂದ ಅವರು ಬಂದಿದ್ದರೋ ಅದೇ ಮಾರ್ಗದಿಂದ ಅವರು ಮದೀನಕ್ಕೆ ಮರಳಿದರು. ಜಾಬಿಯಗೆ ತಲುಪಿದ ನಂತರ ಹಝ್ರತ್ ಉಮರ್(ರ) ಕೆಲವು ದಿನಗಳು ಅಲ್ಲಿ ತಂಗಿದರು. ಅನಂತರ ತನ್ನ ಕುದುರೆಯಲ್ಲಿ ರವಾನೆಯಾದರು. ಅಮೀರುಲ್‌ಮೂಮಿನೀನ್ ಪೆಲಸ್ತೀನಿನಲ್ಲಿ ಮಾಡಿದ ಕೆಲಸಗಳ ಬಗ್ಗೆ ಹಝ್ರತ್ ಅಲಿಗೆ ಮತ್ತು ಇತರ ಮುಸ್ಲಿಮರಿಗೆ ಮಾಹಿತಿ ಲಭಿಸಿತ್ತು. ಹೀಗೆ ಅವರು ಮದೀನದ ಹೊರಗೆ ಅವರನ್ನು ವೈಭವಪೂರ್ವಕವಾಗಿ ಸ್ವಾಗತಿಸಿದರು. (ಹಝ್ರತ್ ಉಮರ್ ಫಾರೂಖ್ ಆಝಮ್, ಮಯಹಮ್ಮದ್ ಹಯಸೈನ್ ಹೇಕಲ್ ಅನುವಾದಕ, ಪುಟ–382, ಇಸ್ಲಾಮಿ ಕುತುಬ್ ಖಾನ ಲಾಹೋರ್)

ಹಝ್ರತ್ ಉಮರ್(ರ); ಮಸ್ಜಿದ್ ನಬವಿಗೆ ತಲುಪಿದರು. ಮಿಂಬರ್ ಸಮೀಪ ಎರಡು ರಕಅತ್ ನಮಾಝ್ ನಿರ್ವಹಿಸಿದರು. ಅನಂತರ ಮಿಂಬರ್ ಹತ್ತಿದರು. ಜನರು ಅವರ ಸುತ್ತ ಒಟ್ಟುಗೂಡಿದರು. ಹಝ್ರತ್ ಉಮರ್(ರ) ನಿಂತುಕೊಂಡು ಅಲ್ಲಾಹನ ಸ್ತುತಿ ಮಾಡಿದರು. ಹಝ್ರತ್ ಪೈಗಂಬರರ(ಸ) ಮೇಲೆ ದುರೂದ್ ಪ್ರಾರ್ಥನೆ ಮಾಡಿದ ನಂತರ ಹೀಗೆ ಹೇಳಿದರು: ಎಲೈ ಜನರೇ, ನೀವು ಅವನನ್ನು ಸ್ತುತಿಸಲು ಮತ್ತು ಅವನಿಗೆ ಕೃತಜ್ಞತೆ ಅರ್ಪಿಸಲಿಕ್ಕಾಗಿ ಖಂಡಿತವಾಗಿಯೂ ಅಲ್ಲಾಹನು ಈ ಸಮುದಾಯದ ಮೇಲೆ ಔದಾರ್ಯವನ್ನು ವರ್ಷಿಸಿದ್ದಾನೆ. ಅಲ್ಲಾಹನು ಈ ಸಮುದಾಯದ ಸಂದೇಶಕ್ಕೆ ಗೌರವ ನೀಡಿದ್ದಾನೆ. ನಿಮ್ಮಲ್ಲಿ ಒಗ್ಗಟು ಉಂಟುಮಾಡಿದ್ದಾನೆ. ಅವರ ವಿಜಯವನ್ನು ನೀಡಿದ್ದಾನೆ. ಶತ್ರುಗಳ ವಿರುದ್ಧ ನಿಮಗೆ ಸಹಾಯವನ್ನು ನೀಡಿದ್ದಾನೆ. ಈ ಸಮುದಾಯಕ್ಕೆ ಗೌರವವನ್ನು ನೀಡಿದ್ದಾನೆ. ನಿಮಗೆ ಭೂಮಿಯಲ್ಲಿ ಸಮಾಧಾನವನ್ನು ನೀಡಿದ್ದಾನೆ. ಈ ನಿಮ್ಮನ್ನು ಮುಶ್ರಿಕರ ಪ್ರದೇಶಗಳ, ಮನೆಗಳ ಮತ್ತು ಅವರ ಸಂಪತ್ತಿನ ವಾರಸುದಾರನ್ನಾಗಿ ಮಾಡಿದ್ದಾನೆ. ಆದ್ದರಿಂದ ಯಾವಾಗಲೂ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಿರಿ. ಅವನು ನಿಮಗೆ ಇನ್ನೂ ಹೆಚ್ಚು ನೀಡುವನು. ಅವನು ವರ್ಷಿಸಿದ ಈ ಅನುಗ್ರಹಗಳಿಗೆ ಅಲ್ಲಾಹನನ್ನು ಸ್ತುತಿಸಿರಿ. ಅವನು ಸದಾ

ಈ ಅನುಗ್ರಹಗಳನ್ನು ನಿಮ್ಮಲ್ಲಿ ನೆಲೆನಿಲ್ಲಿಸುವನು. ಅಲ್ಲಾಹನು ನಮ್ಮನ್ನು ಮತ್ತು ನಿಮ್ಮನ್ನು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುವವರನ್ನಾಗಿ ಮಾಡಲಿ. ಅನಂತರ ಹಝ್ರತ್ ಉಮರ್(ರ) ಪ್ರವಚನ ಪೀಠದಿಂದ ಕೆಳಗೆ ಇಳಿದರು. (ಅಲ್ಇಕ್ತಿಫಾ ಬಿಮಾ ತಝ್‌ಮನ......, ಸಂಪುಟ-2, ಭಾಗ-1, ಪುಟ-305-306, ಆಲಿಮುಲ್ ಕುತುಬ್ ಬೈರೂತ್ 1997)

ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಹೇಳುತ್ತಾರೆ; ಜರುಸಲೇಮನ್ನು ಸುತ್ತುವರೆಯಲಾದಾಗ, ನಿಮ್ಮ ಖಲೀಫರು ಬಂದರೆ, ನಾವು ಅವರನ್ನು ಪ್ರವೇಶಿಸಲು ಬಿಡುವೆವು ಎಂದು ಪಾದ್ರಿಗಳು ಹೇಳಿದರು. ಹಝ್ರತ್ ಉಮರ್(ರ) ಅದೇ ಸರಳತೆಯೊಂದಿಗೆ ರವಾನೆಯಾದರು. ತನ್ನ ಗುಲಾಮನೊಂದಿಗೆ ಸರದಿ ಪ್ರಕಾರ ಒಂಟೆಯ ಮೇಲೆ ಸವಾರಿ ಮಾಡುತ್ತಾ ಹೋದರು. ಅಬೂಉಬೈದ(ರ) ಹೇಳಿದರು: ನೀವು ಬಟ್ಟೆಯನ್ನು ಬದಲಾಯಿಸಿರಿ, ಕುದುರೆಯ ಮೇಲೆ ಸವಾರರಾಗಿರಿ. ಹಝ್ರತ್ ಉಮರ್(ರ) ಈ ವಿನಂತಿಯನ್ನು ಅಂಗೀಕರಿಸಿದರು. ಆದರೆ ಸ್ವಲ್ಪ ದೂರಕ್ಕೆ ಹೋದ ನಂತರ ಕುದುರೆಯಿಂದ ಇಳಿದರು. ಅದೇ ಸರಳ ವಸ್ತ್ರ ಮತ್ತು ಒಂಟೆಯನ್ನು ತರಲು ಹೇಳಿದರು. ಅವರು ಹೋದಾಗ ಪಾದ್ರಿಗಳು ಭಯದಿಂದ ಕೀಲಿಗೈಗಳನ್ನು ಎಸೆದರು. ಈ ಸೇನಾಧಿಪತಿಯನ್ನು ನಮ್ಮಿಂದ ಎದುರಿಸಲು ಸಾಧ್ಯವಿಲ್ಲವೆಂದು ಹೇಳಿದರು. (ಹಖಾಇಖುಲ್ ಫುರ್‌ಖಾನ್, ಸಂಪುಟ-2, ಪುಟ-174)

ಹಝ್ರತ್ ಮುಸ್ಲಿಹ್ ಮೌಊದ್(ರ) ಇದರ ಬಗ್ಗೆ ಹೇಳುತ್ತಾರೆ: ಜರುಸಲೇಮ್‌ನಲ್ಲಿ ಒಂದು ಮಸೀದಿಯಿದೆ. ನಮಗೆ ಕಅ್‌ಬ ಮಂದಿರದ ಹಾಗೆಯೇ ಆ ಸ್ಥಳವು ಅವರಿಗೆ ಪರಿಶುದ್ಧ ಸ್ಥಳವಾಗಿದೆ. ಮುಸ್ಲಿಮರ ಕಾಲದಲ್ಲಿ ಜರುಸಲೇಂ ಮೇಲೆ ವಿಜಯ ಸಾಧಿಸಲಾದಾಗ ಹಝ್ರತ್ ಉಮರ್(ರ) ಆ ಸ್ಥಳದೊಳಗೆ ಹೋಗಿ ನಮಾಝ್ ಮಾಡಬೇಕೆಂದು ಕ್ರೈಸ್ತರು ಬಯಸಿದರು. ಆದರೆ ಹಝ್ರತ್ ಉಮರ್(ರ) ಹೇಳಿದರು: ನಾನು ಇದರೊಳಗೆ ನಮಾಝ್ ನಿರ್ವಹಿಸಿದರೆ ಮುಸ್ಲಿಮರು ಈ ಜಾಗವನ್ನು ತಮ್ಮ ಆರಾಧನಾಲಯವನ್ನಾಗಿ ಮಾಡಬಹುದು ಎಂದು ನಾನು ಭಯಪಡುತ್ತೇನೆ. ಹೀಗೆ ಅವರು ಹೊರಗೆ ನಮಾಝ್ ನಿರ್ವಹಿಸಿದರು. (ಖುತ್‌ಬಾತೆ ಮಹ್ಮೂದ್, ಸಂಪುಟ-11, ಪುಟ-437, ಖುತ್‌ಬ ಜುಮುಅ 27-07-1928)

ಮತ್ತೆ ಹಝ್ರತ್ ಮುಸ್ಲಿಹ್ ಮೌಊದ್(ರ) ಮುಂದೆ ಹೇಳುತ್ತಾರೆ: "ಹಝ್ರತ್ ಉಮರ್(ರ)ರವರ ಕಾಲದಲ್ಲಿ ಪ್ಯಾಲಸ್ತೈನ್ ವಿಜಯಿಸಲಾಯಿತು ಅವರು ಯುರೊಶಲಮ್‌ಗೆ ಹೋದಾಗ ಅಲ್ಲಿನ ಕ್ರೈಸ್ತರ ಪಾದರಿಗಳು ಸ್ವತಃ ಪಟ್ಟಣದ ಕೀಲಿಗೈಗಳನ್ನು ಹಝ್ರತ್ ಉಮರ್‌ರಿಗೆ ಒಪ್ಪಿಸಿದರು. ಹಝ್ರತ್ ಉಮರ್(ರ) ಮೊತ್ತಮೊದಲು ಮಸ್ಜಿದ್ ಅಖ್ಸಗೆ ಹೋದರು. ಅನಂತರ ಕ್ರೈಸ್ತರ ದೇವಾಲಯಕ್ಕೆ ಹೋದರು. ಅದನ್ನು ನೋಡುತ್ತಾ ಹೋದರು. ಹಝ್ರತ್ ಉಮರ್(ರ) ಕ್ರೈಸ್ತರ ಚರ್ಚಿನಲ್ಲಿ ಸುತ್ತಿದರು. ನಮಾಝಿನ ಸಮಯವಾದಾಗ, ಕ್ರೈಸ್ತರು ಚರ್ಚಿನಲ್ಲಿ ನಮಾಝ್ ಮಾಡಲು ಅನುಮತಿ ಕೊಟ್ಟರು. ಆದರೆ ಮುಂದಿನ ಪೀಳಿಗೆಯವರು ಇದರ ಆಧಾರದಲ್ಲಿ ಕ್ರೈಸ್ತರ ಆರಾಧನಾಲಯಗಳನ್ನು ವಶಪಡಿಸದಿರಲಿ ಎಂಬ ಯೋಚನೆಯಿಂದ ಅವರು ಹೊರಗೆ ಬಂದು ನಮಾಝ್ ನಿರ್ವಹಿಸಿದರು. (ತಫ್ಸೀರೆ ಕಬೀರ್, ಸಂಪುಟ-5, ಪುಟ-573)

ಹಿಜರೀ 17ರಲ್ಲಿ ರೋಮನರು ತಮ್ಮ ಕಡೆಯಿಂದ ಕೊನೆಯ ಪ್ರಯತ್ನವನ್ನು ಮಾಡಿದರು. ಯಝ್‌ದಜರ್ದ್ 'ರೇ'ಗೆ ಪರಾರಿಯಾದ ನಂತರ ದ್ವೀಪವಾಸಿಗಳು ಅವರ ಬಗ್ಗೆ ಪೂರ್ಣವಾಗಿ ಬೇಸರಗೊಂಡಿದ್ದರು. ಹಿರ್ಖಲ್ ಸಮುದ್ರ ಮಾರ್ಗವಾಗಿ ಬಂದರೆ, ಅವರು ಅವನಿಗೆ ನೆರವು ನೀಡುವರು ಎಂದು ಅವರು ಹಿರ್ಖಲನಿಗೆ ಬರೆದರು. ಹಿರ್ಖಲ್ ಈ ವಿಷಯದಲ್ಲಿ ಆಲೋಚನೆ ಮಾಡಿದರು. ಅಲೆಕ್ಸಾಂಡ್ರಿಯದಿಂದ ಅಂತಾಕಿಯಗೆ ತಲುಪಲು ಸಮುದ್ರ ಹಡಗುಗಳಿಗೆ ಅವರು ಆದೇಶ ನೀಡಿದರು. ಹಝ್ರತ್ ಅಬುಉಬೈದರಿಗೆ ಅವರ ಕಾರ್ಯಚರಣೆಯ ಬಗ್ಗೆ ಗೊತ್ತಾದಾಗ, ಅವರು ಹಝ್ರತ್ ಖಾಲಿದ್‌ರನ್ನು ಸಮಾಲೋಚನೆಗಾಗಿ ಕರೆದರು. ಹಿರ್ಖಲಿನ ಹಡಗು ಅಂತಾಕಿಯ ತಲುಪಿದಾಗ ಪಟ್ಟಣದ ಬಾಗಿಲುಗಳು ಅವರಿಗಾಗಿ ತೆರೆಯಲ್ಪಟ್ಟಿತು. ಉತ್ತರ ಸಿರಿಯದಲ್ಲಿ ಪ್ರಜೆಗಳು ದಂಗೆಯೇಳುತ್ತಿರುವುದನ್ನು ಕಂಡಾಗ, ಅವರು ಹಮಸಿನಲ್ಲಿ ಸುತ್ತುವರೆಯಲ್ಪಟ್ಟಿದ್ದಾರೆ ಎಂದು ಅಬುಉಬೈದರಿಗೆ ಅಂದಾಜಾಯಿತು. ಸ್ಥಿತಿಗತಿಗಳ ಕುರಿತು ಅಬುಉಬೈದ(ರ) ಹಝ್ರತ್ ಉಮರ್‌ರಿಗೆ ತಿಳಿಸಿದರು ಹಝ್ರತ್ ಉಮರ್(ರ) ಆರಂಭದಿಂದಲೇ ಈ ಅಪಾಯವನ್ನು ಮುಂದಿಟ್ಟು ಮುಂದಾಲೋಚನೆಯಿಂದ ಕೂಫ ಮತ್ತು ಬಸ್ರದಲ್ಲಿ ಸೈನ್ಯ ಠಾಣೆಗಳನ್ನು ಸ್ಥಾಪಿಸಿದ್ದರು. ಹಝ್ರತ್ ಉಮರ್‌ರಿಗೆ ಹಝ್ರತ್ ಅಬೂಉಬೈದರ ಈ ಅರ್ಜಿ ಲಭಿಸಿದಾಗ, ಮುಸ್ಲಿಮರ ಈ ಮಹಾ ಸೇನಾಧಿಪತಿಯು ಬಹಳ ದೊಡ್ಡ ಅಪಾಯದಲ್ಲಿ ಸಿಲುಕಿರುವರು ಎಂದು ಅವರಿಗೆ ಅನಿಸುತ್ತಿತ್ತು. ಹೀಗೆ ಖಅ್‌ಖಾಅ್‌ರನ್ನು ಹಮಸಿಗೆ ಕಳುಹಿಸಲು ಹಝ್ರತ್ ಸಅದ್‌ರಿಗೆ(ರ) ಹಝ್ರತ್ ಉಮರ್(ರ) ಪತ್ರ ಬರೆದರು. ಅದೇ ರೀತಿಯಲ್ಲಿ ರೋಮನರ ವಿರುದ್ಧ ಹೋರಾಡುತ್ತಿದ್ದ ಇತರ ಸೇನಾಧಿಪತಿಗಳಿಗೆ ಹೀಗೆ ಬರೆದರು: ಹಿರ್ಖಲಿನ ಸಹಾಯಕ್ಕಾಗಿ ಯಾವ ಯಾವ ಪ್ರದೇಶಗಳಿಂದ ಸೈನಿಕರು ಒಟ್ಟುಗೂಡಿರುವರೋ ಅಲ್ಲಿ ನಿಮ್ಮ ಸೈನಿಕರ ಸಂಘವನ್ನು ಕಳುಹಿಸಿರಿ. ಈ ಯುಕ್ತಿಪೂರ್ಣವಾದ ಕಾರ್ಯವೈಖರಿಯ ಕಾರಣದಿಂದ ಹಿರ್ಖಲಿನ ಸಹಾಯಕ್ಕಾಗಿ ಬಂದ ಸೈನಿಕರು ತಮ್ಮ ಪ್ರದೇಶಗಳಿಗೆ ಮರಳಿ ಹೋದರು. ದ್ವೀಪಗಳಿಂದ ಬಂದ ಸೈನಿಕರು ಮರಳಿಹೋದರು ಎಂಬ ಮಾಹಿತಿ ಲಭಿಸಿದಾಗ, ರೋಮನರ ವಿರುದ್ಧ ಹೋರಾಡಲಿಕ್ಕಾಗಿ ಯುದ್ಧ ಮೈದಾನಕ್ಕೆ ಇಳಿಯಲು ತೀರ್ಮಾನಿಸಲಾಯಿತು. ಹಝ್ರತ್ ಅಬೂಉಬೈದ(ರ) ಮುಸ್ಲಿಂ ಸೈನ್ಯವನ್ನು ಸಂಬೋಧಿಸಿ ಬಹಳ ಪ್ರಭಾವಶಾಲಿ ಭಾಷಣ ಮಾಡಿದರು. ಅಲ್ಲಾಹನು ಮುಸ್ಲಿಮರಿಗೆ ವಿಜಯವನ್ನು ಪ್ರದಾನ ಮಾಡಿದನು. ಹಝ್ರತ್ ಉಮರ್(ರ) ಸಿರಿಯ ಮಾರ್ಗವಾಗಿ ಜಾಬಿಯಗೆ ತಲುಪುವಷ್ಟರಲ್ಲಿ ವಿಜಯದ ಸುದ್ದಿ ಲಭಿಸಿತು. ಹೀಗೆ ಅವರು ಮದೀನಕ್ಕೆ ಮರಳಿಹೋದರು. ಯುದ್ಧಸಂಪತ್ತಿನಲ್ಲಿ ಕೂಫದ ಜನರನ್ನು ಸಹ ಭಾಗಿಯನ್ನಾಗಿ ಮಾಡಬೇಕೆಂದು ಅವರು ಆದೇಶ ನೀಡಿದರು. ಈ ವಿಜಯದ ಮೂರು ವರ್ಷಗಳ ನಂತರ ಹಿಜರಿ 20ರಲ್ಲಿ ಹಿರ್ಖಲ್ ಸಾವನ್ನಪ್ಪಿದನು. (ಸಯ್ಯದನಾ ಹಝ್ರತ್ ಉಮರ್ ಫಾರೂಖ್ ಅಝ್ ಹೇಕಲ್, ಅನುವಾದಕ ಹಬೀಬ್ ಅಶ್‌ಅರ್ ಪುಟ-384-390, 590 ಇಸ್ಲಾಮಿ ಕುತುಬ್ ಖಾನ ಉರ್ದು ಬಾಝಾರ್ ಲಾಹೋರ್) (ಸೀರತ್ ಅಮೀರುಲ್ ಮುಮಿನೀನ್ ಉಮರ್ ಬಿನ್ ಖತ್ತಾಬ್, ಅಸ್ಸಲಾಬಿ ಪುಟ-750-752, ಅಲ್‌ಫುರ್‌ಖಾನ್ ಟ್ರಸ್ಟ್ ಖಾನ್ ಅಲೀಗಡ್, ಮುಝಫರ್‌ಗಡ್ ಜಿಲ್ಲೆ ಪಾಕಿಸ್ತಾನ) (ಅಲ್‌ಫಾರೂಖ್, ಶಿಬ್ಲಿ ನುಮಾನಿ, ಪುಟ-134-136, ದಾರುಲ್ ಇಶಾಅತ್ ಕರಾಚಿ 1991)

ಹೇಗಿದ್ದರೂ ಈ ಪ್ರಸ್ತಾಪ ಮುಂದುವರೆಯುವುದು. ಈಗ ನಾನು ಕೆಲವು ದಿವಂಗತರ ಬಗ್ಗೆ ಪ್ರಸ್ತಾಪಿಸುವೆನು. ಅದರಲ್ಲಿ ಮೊದಲ ಪ್ರಸ್ತಾಪ ನಿವೃತ್ತ ಸ್ಟೇಶನ್ ಮಾಸ್ಟರ್ ಸನ್ಮಾನ್ಯ ಚೌಧರಿ ಸಈದ್ ಅಹ್ಮದ್ ಲಕ್ಕನ್ ಸಾಹಿಬ್‌ರದ್ದಾಗಿದೆ. 86ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.**

ಅವರು ಹಝ್ರತ್ ಮಸೀಹ್ ಮೌಊದ್‌ರ ಸಹಾಬಿಯಾದ ಹಝ್ರತ್ ಚೌಧರಿ ಸಿಕಂದರ್ ಅಲಿ ಸಾಹಿಬ್ ಮತ್ತು ಹಝ್ರತ್ ಗುಜರ್ ಬೀಬಿ ಸಾಹಿಬ್‌ರ ಮೊಮ್ಮಗನಾಗಿದ್ದರು. ಹಝ್ರತ್ ಸಿಕಂದರ್ ಅಲಿ ಸಾಹಿಬ್‌ರು(ರ) 1902, ಮಾರ್ಚ್ 30ರಂದು ಹಝ್ರತ್ ಮಸೀಹ್ ಮೌಊದ್‌ರ ಕೈಯಲ್ಲಿ ಬೈಅತ್ ಮಾಡಿದ್ದರು. 1904ರಿಂದ 1928ರ ವರೆಗೆ ಮದ್ರಸ ತಾಲೀಮುಲ್ ಇಸ್ಲಾಮಿನಲ್ಲಿ ಅಧ್ಯಾಪಕರಾಗಿ ಸೇವೆ ಮಾಡಲು ಸೌಭಾಗ್ಯ ಪಡೆದರು. ಹಝ್ರತ್ ಮಸೀಹ್ ಮೌಊದ್(ಅ) ತನ್ನ ಜೀವಿತದಲ್ಲಿ ತಾಲೀಮುಲ್ ಇಸ್ಲಾಂ ಮದ್ರಸಕ್ಕಾಗಿ ನೇಮಿಸಿದ ಆರಂಭ ಕಾಲದ ಉಸ್ತಾದ್‌ರಲ್ಲಿ ಚೌಧರಿ ಸಾಹಿಬ್‌ರು ಸೇರುತ್ತಾರೆ. ಅವರ ಮೊಮ್ಮಗನಾದ ಚೌಧರಿ ಸಈದ್ ಸಾಹಿಬ್‌ರಿಗೆ ಸಹ ಅಲ್ಲಾಹನ ಅನುಗ್ರಹದಿಂದ ಧಾರ್ಮಿಕ ಸೇವೆಗಳನ್ನು ಮಾಡುವ ಸೌಭಾಗ್ಯ ಲಭಿಸಿತ್ತು. ಅಲ್ಲಾಹನ ಅನುಗ್ರಹದಿಂದ ಅವರು ವಸಿಯ್ಯತ್ ಸಹ ಮಾಡಿದ್ದರು. ದಿವಂಗತರು ಪತ್ನಿಯನ್ನಲ್ಲದೆ ಆರು ಪುತ್ರರು ಮತ್ತು ಮೂವರು ಪುತ್ರಿಯರನ್ನು ಅಗಲಿರುವರು. ಅವರ ಉತ್ತಮ ತರ್‌ಬಿಯತ್ ಕಾರಣದಿಂದ ಎಲ್ಲ ಮಕ್ಕಳು ಯಾವುದಾದರೂ ರೀತಿಯಲ್ಲಿ ಜಮಾಅತಿನ ಸೇವೆ ಮಾಡುವ ಸೌಭಾಗ್ಯ ಪಡೆಯುತ್ತಿದ್ದಾರೆ. ಅವರ ಒಬ್ಬ ಮಗನಾದ ಫಹೀಂ ಅಹ್ಮದ್ ಸಾಹಿಬ್‌ರು ಮುಬಲ್ಲಿಗ್‌ರಾಗಿ ಕೀನ್ಯದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಕರ್ಮಮೈದಾನದಲ್ಲಿ ಇರುವ ಕಾರಣದಿಂದ ತನ್ನ ತಂದೆಯ ಜನಾಝದಲ್ಲಿ ಶಾಮಿಲಾಗಲು ಅವರಿಗೆ ಸಾಧ್ಯವಾಗಲಿಲ್ಲ. ಅಲ್ಲಾಹನು ಅವರಿಗೆ ಸಹನೆ ಮತ್ತು ಧೈರ್ಯವನ್ನು ನೀಡಲಿ. ದಿವಂಗತರೊಂದಿಗೆ ಅಲ್ಲಾಹನು ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ.

ದಿವಂಗತರು ಬಹಳ ಹೆಚ್ಚು ಧಾರ್ಮಿಕ ಅಭಿಮಾನವಿದ್ದ ವ್ಯಕ್ತಿಯಾಗಿದ್ದರು. ವಿದ್ಯಾರ್ಥಿಯಾಗಿದ್ದಾಗ 1953ರಲ್ಲಿ ಸುಮುಂದಿರಿ ಪಟ್ಟಣದ ಹೈಸ್ಕೂಲಿನಲ್ಲಿ ನಡೆಯುತ್ತಿದ್ದ ಮಜ್ಲಿಸೇ ಅಹ್‌ರಾರರ ಸಭೆಗಳಲ್ಲಿ ಇತರ ಅಹ್ಮದಿಯೇತರ ವಿದ್ಯಾರ್ಥಿಗಳೊಂದಿಗೆ ಅವರು ಸಹ ಇದ್ದರು. ಸಭೆಯಲ್ಲಿ ಅತಾಉಲ್ಲಾಹ್ ಶಾಹ್ ಬುಖಾರಿಯು ಹಝ್ರತ್ ಮಸೀಹ್ ಮೌಊದ್‌ರ(ಅ) ಬಗ್ಗೆ ಅನಾವಶ್ಯಕ ಆರೋಪಗಳನ್ನು ಹೊರಿಸಿ ಕೆಟ್ಟ ಪದಗಳನ್ನು ಬಳಸಿದಾಗ ಸಈದ್ ಸಾಹಿಬ್‌ರು ಬೇಗನೇ ನಿಂತುಕೊಂಡು ಆ ಮೌಲವಿಯನ್ನು ಚಾಲೆಂಜ್ ಮಾಡಿದರು ಮತ್ತು ನೀವು ಕೇವಲ

ಸುಳ್ಳು ಹೇಳುತ್ತಿದ್ದೀರಿ ಎಂದು ಅವರು ಭಾಷಣ ಮಾಡುತ್ತಿರುವಾಗಲೇ ಹೇಳಿಕೊಂಡು ಅವರನ್ನು ಸುಮ್ಮನಾಗಿಸಿದರು. ಈ ಮೀರ್ಜಾಯಿಯನ್ನು ಹಿಡಿದು ಹೊಡೆಯಿರಿ ಎಂದು ಆಗ ಆ ಮೌಲವಿಯು ಹೇಳಿದನು. ಅವರ ಮೇಲೆ ಕಠಿಣವಾಗಿ ವರ್ತಿಸಲಾಯಿತು. ಹೇಗಿದ್ದರೂ ಸಭೆಯು ಅಲ್ಲೋಲಕಲ್ಲೋಲವಾಗಿ ಜನರನ್ನು ಚದುರಿಹೋದರು. ಅಹ್ಮದಿಯ್ಯತ್ತಿನ ವಿಷಯದಲ್ಲಿ ಎಂದಿಗೂ ಯಾರನ್ನೂ ಹೆದರಬೇಕಾಗಿಲ್ಲವೆಂದು ಅವರು ಮಕ್ಕಳೊಡನೆ ಹೇಳುತ್ತಿದ್ದರು.

ಮುಂದಿನ ಜನಾಝ಼ು ಬಾಂಗ್ಲದೇಶದ ನೇಶನಲ್ ನಾಇಬ್ ಅಮೀರ್ ಆದ ಸನ್ಮಾನ್ಯ ಮುಹಮ್ಮದ್ ಶಹಾಬುದ್ದೀನ್ ಸಾಹಿಬ್‌ರದ್ದಾಗಿದೆ. ಜೂಲಾಯಿ 12ರಂದು ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. 18ನೇ ವಯಸ್ಸಿನಲ್ಲಿ 1964ರಲ್ಲಿ ಒಂದು ಕನಸಿನ ಆಧಾರದಲ್ಲಿ ಅವರು ಅಹ್ಮದಿಯ್ಯತ್ ಸ್ವೀಕರಿಸಿದ್ದರು. ದಿವಂಗತರು ವಸಿಯ್ಯತ್ ಮಾಡಿದ್ದರು. ಜಮಾಅತಿನ ಹಳೆಯ ಸೇವಕರಲ್ಲಿ ಒಬ್ಬರಾಗಿದ್ದರು. ಅನೇಕ ಗುಣವೈಶಿಷ್ಟ್ಯಗಳನ್ನು ಹೊಂದಿದ್ದರು. ಖಿಲಾಫತಿನ ಪ್ರೇಮಿ, ಪ್ರಾಮಾಣಿಕ, ವಿಶ್ವಸ್ತ, ಮೌನಿಸ್ವಭಾವದ ಮತ್ತು ಜಮಾಅತಿನ ಆವಶ್ಯಗಳನ್ನು ಸರಿಯಾಗಿ ತಿಳಿದವರಾಗಿದ್ದರು. ತನ್ನ ನಿಧನಕ್ಕೆ ಮುಂಚೆ ವಸಿಯ್ಯತಿನ ಚಂದದ ಲೆಕ್ಕಗಳನ್ನು ಕ್ಲಿಯರ್ ಮಾಡಿದ್ದರು. ಅವರ ಹಿರಿಯ ಮಗನಾದ ಶಮ್ಸುದ್ದೀನ್ ಅಹ್ಮದ್ ಮಾಸೂಂ ಮುರಬ್ಬಿಯಾಗಿರುವರು. ಅವರು ನಾಲ್ವರು ಪುತ್ರರನ್ನು ಮತ್ತು ಮೂವರು ಪುತ್ರಿಯರನ್ನು ಅಗಲಿರುವರು. ಅವರು ತನ್ನ ಚಿಕ್ಕಪ್ಪರ ತಬ್ಲೀಗಿನಿಂದ ಪ್ರಭಾವಿತರಾಗಿ ಅಹ್ಮದಿಯಾಗಿದ್ದರು. ತನ್ನ ಮನೆಯರಿಂದ ಕಠಿಣ ವಿರೋಧವನ್ನು ಸಹ ಎದುರಿಸಬೇಕಾಯಿತು. 1963ರಲ್ಲಿ ಕೆಲವು ತಿಂಗಳುಗಳು ಈ ಎಲ್ಲ ವಿರೋಧವನ್ನು ಸಹಿಸಿದರು. ಅನಂತರ ಮನೆಯನ್ನೆಲ್ಲ ಬಿಟ್ಟುಕೊಂಡು ಮೊದಲು ಬ್ರಹ್ಮನ್ ಬುಡಿಯದಲ್ಲಿ ಅನಂತರ ಢಾಕದಲ್ಲಿ ಬಂದು ನೆಲೆಸಿದರು. ಅನಂತರ ಅವರ ವಿವಾಹ ಹಳೆಯ ಅಹ್ಮದಿ ಕುಟುಂಬದಲ್ಲಿ ನಡೆಯಿತು. ಅವರ ಒಂದು ವೈಶಿಷ್ಟ್ಯ ಇದ್ದುದ್ದರಲ್ಲಿ ತೃಪ್ತರಾಗುವ ಸ್ವಭಾವವಾಗಿತ್ತು. ಸಹನೆ ಮತ್ತು ಕೃತಜ್ಞತೆಯಿಂದ ಜೀವನ ಸಾಗಿಸುವುದನ್ನು ಅರಿತಿದ್ದರು. ಅವರ ಪ್ರಾಮಾಣಿಕತೆಯ ಕಾರಣದಿಂದ ಅಹ್ಮದಿಯೇತರ ವ್ಯಾಪಾರಸ್ಥರು ಸಹ ಅವರನ್ನು ಗೌರವಿಸುತ್ತಿದ್ದರು. ಎಲ್ಲರೂ ಈ ಕಾರಣದಿಂದ ಬಹಳ ಸಜ್ಜನ ಮತ್ತು ಸರಿಯಾಗಿ ವ್ಯಾಪಾರಮಾಡುವವರು ಎಂದು ಅರಿತಿದ್ದರು. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ.

ಮುಂದಿನ ಜನಾಝ಼ು ಅರ್ಜಂಟೈನಿನ ಸನ್ಮಾನ್ಯ ರಾಉಲ್ ಅಬ್ದುಲ್ಲಾಹ್ ಸಾಹಿಬ್‌ರದ್ದಾಗಿದೆ. ಡಿಸೆಂಬರ್ 6ರಂದು ನಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರು ಅಲ್ಲಿಯ ಮುರಬ್ಬಿ ಬರೆಯುತ್ತಾರೆ: ಅರ್ಜಂಟೈನಿನ ಆರಂಭಿಕ ಅಹ್ಮದಿಯರಲ್ಲಿ ಒಬ್ಬರಾಗಿದ್ದರು. ಅರ್ಜಂಟೈನ್ ಜಮಾಅತ್ ಬಹಳ ಹೊಸ ಜಮಾಅತ್ ಆಗಿದೆ. ಕೆಲವು ವರ್ಷಗಳ ಹಿಂದೆ ಸ್ಥಾಪಿತವಾಗಿತ್ತು. 2018ರಲ್ಲಿ ಒಂದು ಬುಕ್‌ಫೇರಿನಲ್ಲಿ ಅವರಿಗೆ ಮೊತ್ತಮೊದಲು ಅಹ್ಮದಿಯಾ ಜಮಾಅತಿನ ಬಗ್ಗೆ ಪರಿಚಯವಾಯಿತು. ಅವರ ಸಂಪರ್ಕ ಅಹ್ಮದಿಯ ಜಮಾಅತಿನೊಂದಿಗೆ ಆದಾಗ ಅವರ ಅಹ್ಮದಿಯೇತರ ಮುಸ್ಲಿಂ ಸಹೋದರರು ಅವರನ್ನು ಜಮಾಅತಿನಂದ ದೂರವಿರಿಸಲು ಬಯುಸಿದರು. ಆದಾಗ್ಯೂ ಅವರು ಜಮಾಅತಿನ ಪ್ರೋಗ್ರಾಮುಗಳಲ್ಲಿ ನಿಯತವಾಗಿ ಭಾಗವಹಿಸುತ್ತಿದ್ದರು. ಹೇಗಿದ್ದರೂ ಅವರ ಸ್ನೇಹಿತರ ಪ್ರಭಾವದಿಂದ ಕೆಲವು ಸಂಶಯಗಳನ್ನು ಸಹ ಹೊಂದಿದ್ದರು. ಅದನ್ನು ದೂರಮಾಡಲು ಅವರು ಜಲ್ಸ ಸಾಲಾನ ಯು.ಕೆ.ಯಲ್ಲಿ ಭಾಗವಹಿಸಿದರು. ತನ್ನ ಸ್ವಂತ ಖರ್ಚಿನಲ್ಲಿ ಇಲ್ಲಿಗೆ ಬಂದರು. ಇಲ್ಲಿ ನನ್ನನ್ನು ಸಹ ಭೇಟಿಯಾಗಿದ್ದರು. ಈ ಭೇಟಿಯ ನಂತರ ಅವರ ಸಂಶಯಗಳು ದೂರವಾಯಿತು. ಅನಂತರ ಬೈಅತ್ ಸಹ ಮಾಡಿದರು. ವಾಸ್ತವದಲ್ಲಿ ಅಹ್ಮದಿಯಾಗಿದ್ದರು. ಜನರಿಗೆ ಅಹ್ಮದಿಯ್ಯತಿನ ತಬ್ಲೀಗ್ ಮಾಡುತ್ತಿದ್ದರು. ಆದರೆ ಸರಿಯಾಗಿ ಬೈಅತನ್ನು ಲಂಡನಗೆ ಬಂದು ಮಾಡಿದರು. ತನ್ನ ಕುಟುಂಬದಲ್ಲಿ ಏಕ ಮುಸ್ಲಿಮರಾಗಿದ್ದರು. ಅವರ ಸ್ನೇಹಿತರ ಕೊನೆಯ ತನಕ ಅವರನ್ನು ಅಹ್ಮದಿಯ್ಯತ್ತಿನಿಂದ ದೂರವಿರಿಸಲು ಪ್ರಯತ್ನಿಸಿದ್ದರು. ಆದರೆ ಅವರು ಸ್ಥಿರಚಿತ್ತತೆಯಿಂದ ಅಹ್ಮದಿಯ್ಯತ್ತಿನಲ್ಲಿ ನಂತರು. ಜಮಾಅತಿಗಾಗಿ ಬಹಳ ಅಭಿಮಾನ ಹೊಂದಿದ್ದರು. ಸದಾ ಸ್ವಂತ ಮತ್ತು ಪರರೊಂದಿಗೆ ಬಹಳ ಅಭಿಮಾನದಿಂದ ಅಹ್ಮದಿಯಾಗಿರುವೆನು ಎಂಬುದಾಗಿ ಹೇಳಿ ಪರಿಚಯಿಸುತ್ತಿದ್ದರು. ಜಮಾಅತಿನ ಕೆಲಸಗಳಲ್ಲಿ ಬಹಳ ನಿಷ್ಠೆ ಮತ್ತು ಬಹಳ ಆವೇಶದಿಂದ ಭಾಗವಹಿಸುತ್ತಿದ್ದರು. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದೊಂದಿಗೆ ವರ್ತಿಸಲಿ ಹಾಗೂ ಅವರ ಸಂಬಂಧಿಕರಿಗೂ ಮತ್ತು ಸ್ನೇಹಿತರಿಗೂ ಅಹ್ಮದಿಯ್ಯತ್ ಸ್ವೀಕರಿಸಲು ಸೌಭಾಗ್ಯ ನೀಡಲಿ. ಜುಮಾ ನಮಾಝಿ಼ನ ನಂತರ ಅವರೆಲ್ಲರ ಜನಾಝ಼ು ಗ಼ಾಇಬ್ ನಿರ್ವಹಿಸುವೆನು.

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಇದರ ವ್ಯಾಖ್ಯಾನ ಮಾಡುತ್ತಾ ಹೇಳುತ್ತಾರೆ. ಹಶ್ರ್‌ನ ಅರ್ಥ ಒಟ್ಟು ಸೇರಿಸುವುದು ಎಂದಾಗಿದೆ. ಅದು ಮರಣ ನಂತರದ ಅವಸ್ಥೆಗಾಗಿ ಬಳಸಲಾಗುತ್ತದೆ. ಏಕೆಂದರೆ ಆ ದಿನ ಎಲ್ಲಾ ಹಿಂದಿನ ಮುಂದಿನ ಜನರನ್ನು ಒಟ್ಟು ಸೇರಿಸಲಾಗುವುದು. ಹಶ್ರ್ ಪ್ರವಾದಿಗಳ ಮೂಲಕ ಈ ಲೋಕದಲ್ಲಿ ಒಟ್ಟು ಸೇರಿಸುವ ಸಮೂಹವನ್ನು ಸಹ ಹೇಳಲಾಗುತ್ತದೆ. ಅಂದರೆ ಒಂದು ಸಮುದಾಯವನ್ನು ಭಿನ್ನತೆಯ ವಾದ ವಿವಾದಗಳಿಂದ ತೆರೆದು ಏಕತ್ವದ ಹಾದಿಗೆ ತರುತ್ತಾರೆ. ಜನರನ್ನು ಒಟ್ಟು ಸೇರಿಸಲು ಬಾರದಂತಹ ಯಾವ ಪ್ರವಾದಿಯೂ ಇಲ್ಲ. ಹಝ಼ುರತ್ ರಸೂಲುಲ್ಲಾಹ್(ಸ) ರವರ ಕಾಲಘಟ್ಟವನ್ನೇ ನೋಡಿ ಎಂತಹ ಹಶ್ರ್ ಉಂಟಾಯಿತು. ವಿವಿಧ ವಿಶ್ವಾಸ ಉಳ್ಳವರನ್ನು ಒಂದು “ಕಲಿಮ”ದ ಮೇಲೆ ಒಟ್ಟುಗೂಡಿದರು ಮತ್ತು ಅದು ಲೋಕದಾದ್ಯಂತ ಹರಡಿತು. ಈ ವಚನದಲ್ಲಿ ಈ ಎರಡೂ ಹಶ್ರ್‌ಗಳತ್ತ ಬೊಟ್ಟು ಮಾಡಲಾಗಿದೆ. ಲೌಕಿಕ ಹಶ್ರ್ ಅಂದರೆ ಇಂದು ನಿನ್ನ ಸಮುದಾಯ ನಿನ್ನ ವಿರುದ್ಧವಿದೆ. ಅದಾಗ್ಯೂ ಒಂದು ದಿನ ಇವರೆಲ್ಲರನ್ನು ನಿನ್ನ ಕೈಯ ಮೇಲೆ ಒಟ್ಟುಗೂಡಿಸಲಾಗುವುದು. ಹಕೀಮ್ (ವಿವೇಕಶಾಲಿ) ಅಲೀಮ್ (ಸರ್ವಜ್ಞನು) ಗುಣಗಳ ಮೂಲಕ ಇಲ್ಲಿ ತೋರಿಸಲಾದುದೇನೆಂದರೆ, ತಕ್ಷಣದಿಂದ ಒಟ್ಟು ಸೇರಿಸದಿರಲು ಕಾರಣವೇನೆಂದರೆ ಅದು ವಿವೇಕಕ್ಕೆ ವಿರುದ್ಧವಾಗಿದೆ. ಅವರ ಹೃದಯಗಳನ್ನು ಬಲವಂತವಾಗಿ ಪರಿವರ್ತಿಸಿ ಮುಸ್ಲಿಮನನ್ನಾಗಿಸಬಹುದಿತ್ತು. ಆದರೆ ಅವರು ಯಾವ ಅನುಗ್ರಹಕ್ಕೂ ಅರ್ಹರಾಗುತ್ತಿರಲಿಲ್ಲ. ಎರಡನೆಯದಾಗಿ ವಿಶೇಷ ರೀತಿಯ ಆಧ್ಯಾತ್ಮಿಕ ಶಕ್ತಿ ಹೊಂದಿದ ಜನರು ಪ್ರಾರಂಭ ಕಾಲದಲ್ಲಿಯೇ ಪ್ರವಾದಿಗಳನ್ನು ಗುರುತಿಸಿಕೊಳ್ಳುತ್ತಾರೆ. ಇಲ್ಲವಾದರೆ ಅವರಲ್ಲಿ ಮತ್ತು ದುರ್ಬಲರಲ್ಲಿ ಯಾವ ವ್ಯತ್ಯಾಸವಿರುತ್ತಿರಲಿಲ್ಲ. ಹೀಗಾದರೆ ಅಬೂಬಕರ್ ಮತ್ತು ಅಬುಜಹಲ್‌ನಲ್ಲಿ ಏನು ವ್ಯತ್ಯಾಸವಿರುತಿತ್ತು. ಎಲ್ಲರೂ ಏಕಕಾಲಕ್ಕೆ ಮುಸ್ಲಿಮರಾಗುತ್ತಿದ್ದರು ಲೋಕವು ಅಬೂಬಕರ್ ಮತ್ತು ಅಬುಜಹಲ್‌ನಲ್ಲಿರುವ ಅರ್ಹತೆಗಳನ್ನು ತಿಳಿಯುತ್ತಿರಲಿಲ್ಲ. ಅಂದಹಾಗೆ ಹೀಗೆ ಮಾಡುವುದು ವಿವೇಕಕ್ಕೆ ವಿರುದ್ಧವಾಗಿತ್ತು. ಅದಕ್ಕಾಗಿಯೇ ಅಲ್ಲಾಹನು ಬಲಾತ್ಕಾರದ ಹಾದಿ ಹಿಡಿಯಲಿಲ್ಲ. ಅದರ ಪರಿಣಾಮವೇನಾಯಿತೆಂದರೆ ಶ್ರೇಷ್ಠರ, ದುರ್ಬಲರ ಮತ್ತು ನಿಕೃಷ್ಟರ ಸ್ಥಿತಿ ಲೋಕವು ತಿಳಿದಂತಾಯಿತು. ಅದರ ಫಲವಾಗಿ ಲೋಕವು ಹಝ್ರತ್ ಅಬೂಬಕರ್, ಹಝ್ರತ್ ಉಮರ್ ಮತ್ತು ಹಝ್ರತ್ ಉಸ್ಮಾನ್ ಮತ್ತು ಹಝ್ರತ್ ಅಲಿ(ರ) ತಮ್ಮ ತಮ್ಮ ಸಮಯದಲ್ಲಿ ಅವರಿಂದ ಲಾಭಾನ್ವಿತರಾದರು. ಎಲ್ಲರೂ ಮೊದಲ ದಿನವೇ ಮುಸಲ್ಮಾನನಾಗುತ್ತಿದ್ದರೆ ಮೊದಲ ಮುಂದಾಳತ್ವದ ಕಾರಣದಿಂದ ಜನರು ಅಬೂಬಕರ್ ಜೈಲಿಗೆ, ಅಬುಜಹಲ್ ಅಥವಾ ಅವರಲ್ಲೆ ಒಬ್ಬನನ್ನು ತನ್ನ ಸರದಾರನನ್ನಾಗಿ ಮಾಡಿಕೊಳ್ಳುತ್ತಿದ್ದರು ಮತ್ತು ಅಬೂಬಕರ್‌ರಂತಹ ಉತ್ಸಹಿ ವಿಶ್ವಾಸಿಗಳಿಂದ ಪಡೆಯುವಂತಹ ಅನುಗ್ರಹಗಳಿಂದ ವಂಚಿತರಾಗುತ್ತಿದ್ದರು. ಅಲ್ಲಾಹನು ತನ್ನ ಅಲೀಮ್ (ಸರ್ವಜ್ಞನು) ಗುಣದ ಮೂಲಕ ಅದನ್ನು ತೋರಿಸಿಕೊಟ್ಟನು. ಅದಾಗ್ಯೂ ವಿವೇಕದ ಕಾರಣ ತಡವಾದರೂ ಖಿನ್ನತೆ ವಹಿಸುವುದು ಬೇಡ, ವಿವೇಕಶಾಲಿಯಾದ ಅಲ್ಲಾಹನು ಅವರಿಗೆ ಹೇಳುವನು. ಮುಂದೆ ಎಲ್ಲಾ ಅರಬರು ಈ ಧರ್ಮದ ತತ್ವಗಳನ್ನು ಒಪ್ಪಿಕೊಳ್ಳುವರು. ಪರಲೋಕದ ದೃಷ್ಟಿಯಿಂದ ಹೇಳಿದ್ದೇನೆಂದರೆ, ಒಂದು ದಿನ ಎಲ್ಲಾ ಜನರನ್ನು ಅಲ್ಲಾಹನ ಮುಂದೆ ಹಾಜರುಪಡಿಸಳಾಗುವುದು ಆಗ ಎಲ್ಲರೂ ತಮ್ಮ ತಮ್ಮ ಕರ್ಮಗಳ ಫಲವನ್ನು ಪಡೆಯುವರು. ಅಂದ ಹಾಗೆ ಪ್ರಾರಂಭದಲ್ಲಿ ಕಷ್ಟಪಟ್ಟು ಮುಸಲ್ಮಾನರ ಬಗ್ಗೆ ವ್ಯಥೆಪಡಬೇಡಿರಿ. ಈ ಅಲ್ಲಾಹನ ಮತ್ತು ಶೈತಾನನ ಮಧ್ಯದ ಯುದ್ಧಗಳಲ್ಲಿ ವಿಜಯದ ಮುಂಚೆ ಹತರಾದವರ ಬಗ್ಗೆಯೂ ವ್ಯಥೆಪಡಬೇಡಿ. ಏಕೆಂದರೆ ನಿಜವಾದ ಪ್ರತಿಫಲ ಪಡೆಯುವ ದಿನ ಮರಣದ ನಂತರ ಬರುವುದಾಗಿದೆ. ಅಲ್ಲಾಹನು ವಿವೇಕ ಮತ್ತು ಜ್ಞಾನದಿಂದಾಗಿ ಈ ಲೋಕವನ್ನು ಪ್ರತಿಫಲ ಪಡೆಯುವ ಸ್ಥಾನವನ್ನಾಗಿ ಮಾಡಲಿಲ್ಲ.

**(ತಫ್ಸೀರ್ ಕಬೀರ್ ಸಂಪುಟ–4, ಪುಟ–50)**

**ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್**

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:**

"ಎಲ್ಲ ಪ್ರವಾದಿಗಳಲ್ಲಿ ಅತ್ಯಂತ ಪರಿಪೂರ್ಣ ಉಪದೇಶಗಳನ್ನು ನೀಡಿದವರು, ಅತ್ಯುನ್ನತ ಮಟ್ಟದ ಪರಿಶುದ್ಧತೆ ಹಾಗು ಜಾಣ್ಮೆಯಿಂದ ಕೂಡಿದ ಉಪದೇಶ ನೀಡಿದವರು ಮತ್ತು ಅತ್ಯುತ್ತಮ ಮಾನವೀಯ ಗುಣಗಳನ್ನು ತನ್ನ ಜೀವಿತದಲ್ಲಿ ಅಳವಡಿಸಿ ಲೋಕಕ್ಕೆ ಅತ್ಯುತ್ತಮ ಮಾದರಿಯಾಗಿ ತೋರಿಸಿಕೊಟ್ಟವರು ನಮ್ಮ ನಾಯಕರೂ ನಮ್ಮ ಮಾಲಿಕರೂ ಆದ ಹಝ್ರತ್ ಮುಹಮ್ಮದ್(ಸ) ಆಗಿರುವರು ಎಂದು ನನಗೆ ಮನವರಿಕೆ ಮಾಡಿಕೊಡಲಾಗಿದೆ." ***(ಅರ್‌ಬಈನ್ ನಂಪುಟ–1 ರೂಹಾನಿ ಖ಼ಝಾ಼ಇನ್ ಸಂಪುಟ 17, ಪುಟ 345)***

*(ಪುಟ ಸಂಖ್ಯೆ 11ರ ಉಳಿದ ಭಾಗ)*

ಸಂಬಂಧಿಕರೊಡನೆಯ ಪರದೆಯ ರಿಯಾಯಿತಿಯ ರೂಪ ಭಿನ್ನವಾಗಿದೆ. ಅಂದ ಹಾಗೆ ಪತಿಯೊಂದಿಗೆ ಪರದೆಯಿಂದ ರಿಯಾಯಿತಿಯ ವಿಷಯ ಅದೇ ವಚನದಲ್ಲಿದ್ದರೂ ತಾಯಿ, ಮಕ್ಕಳು ಮತ್ತು ಸಹೋದರರು ಮುಂತಾದವರೆದುರಿಗಿನ ಪರದೆಯ ರಿಯಾಯಿತಿಯ ವಿಷಯ ಭಿನ್ನವಾಗಿದೆ.

ಆದುದರಿಂದ ಯಾವ ರೀತಿ ಈ ವಚನದಲ್ಲಿ ವಿವರಿಸಲಾದ ಪರದೆಯಲ್ಲಿ ವಿಭಿನ್ನ ರೀತಿಗಳಿವೆ. ಅದೇ ರೀತಿ ಇತರ ನಿಷೇಧಿತ ಸಂಬಂಧಿಕರ ಕುರಿತು ರಿಯಾಯಿತಿಗಳಲ್ಲಿ ಭಿನ್ನತೆಯಿದೆ. ಅದೇ ವಿಷಯ ಹಝ್ರತ್ ಖಲೀಫತುಲ್ ಮಸೀ ಚತುರ್ಥರು ತಮ್ಮ ಅಧ್ಯಾಪನೆಯಲ್ಲಿ ತಿಳಿಸಿರುವರು. ಕಾಕ ಮತ್ತು ಮಾಮ ಒಂದೇ ಕುಟುಂಬದಲ್ಲಿರುವ ಸದಸ್ಯರಲ್ಲ. ಬದಲು ಬೇರೆ ಕಡೆ ಇರುವ ಸದಸ್ಯರಾಗಿರುತ್ತಾರೆ. ಅದಾಗ್ಯೂ ಅವರ ಪರಿಗಣನೆ ನಿಷೇಧಿತ ಸಂಭಂಧಿಕರಲ್ಲಿ ಬರುತ್ತದೆ. ಆದರೆ ಅವರು ಮನೆಗೆ ಬಂದಾಗ ಮಹಿಳೆಯರು ಯಾವ ರೀತಿ ಅದೇ ಮನೆಯಲ್ಲಿರುವ ಪುರುಷರಾದ ಪತಿ, ತಂದೆ, ಪುತ್ರರು ಇತ್ಯಾದಿಯವರ ವಿಷಯದಲ್ಲಿ ರಿಯಾಯಿತಿ ಪಡೆದಿರುತ್ತಾರೆ. ಹೊರಗಿನ ನಿಷೇಧಿತ/ಪುರುಷರಿಗಿಂತ ಅವರ ಪೈಕಿ ಹೆಚ್ಚು ಜಾಗೃತೆ ವಹಿಸಬೇಕಾಗುತ್ತದೆ. ಅದಾಗ್ಯೂ ಅವರ ಮುಂದೆ ಮುಖ ಮುಚ್ಚಿಕೊಳ್ಳುವುದಿಲ್ಲ. ಆದರೆ ಶಿರ ಮತ್ತು ಎದೆಯನ್ನು ಮುಚ್ಚಿಕೊಂಡು ತನ್ನನ್ನು ತಾನು ಸುಧಾರಿಸಿಕೊಂಡು ಕುಳಿತುಕೊಳ್ಳುವ ಆಜ್ಞೆಯಿದೆ. ಅಂದ ಹಾಗೆ ಅದೇ ವಿಷಯವನ್ನು ಹುಝೂರ್ (ರಹ) ವಿವರಿಸುತ್ತಾರೆ, ಹೊರತು ಕಾಕ ಮತ್ತು ಮಾಮ ಅವರಿಂದ ಪರದೆ ವಹಿಸುವ ಆಜ್ಞೆ ನೀಡುತ್ತಿಲ್ಲ.

**(ಸಂಗ್ರಹ : ಝುಹೀರ ಅಹ್ಮದ್ ಖಾನ್, ಪ್ರೈವೇಟ್ ಸೆಕ್ರೇಟರಿ ಕಚ್ಚೇರಿ ಲಂಡನ್‌ನ ರೆಕಾರ್ಡ್ ಭಾಗ) (ಅಖ್ಬಾರೆ ಅಲ್‌ಫಝುಲ್ ಇಂಟರ್‌ನ್ಯಾಶ್ನಲ್ 27-10-2020)**

**ಆಡಂಬರ ಮತ್ತು ತೋರ್ಪಡಿಕೆಗೊಸ್ಕರ ಹಕ್ಕ್ ಮಹರನ್ನು ನಿಶ್ಚಯಿಸುವುದು ತಪ್ಪು ಸಂಪ್ರದಾಯವಾಗಿರುತ್ತದೆ.**

ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ:

ವಧು ಹಾಗೂ ವರನ ಕಡೆಯವರು ಇಬ್ಬರು ಸೇರಿ ರಾಜಿಯಾಗಿ ಹಕ್ಕ್ ಮಹರ್ ನಿಶ್ಚಯಿಸಿ ಕೊಳ್ಳುತ್ತಾರೆ ಇದಕ್ಕೆ ಯಾವುದೇ ಆಕ್ಷೇಪವಿಲ್ಲ. ಆದರೆ ಶರೀಅತ್ತಿನಲ್ಲಿ ಹಕ್ಕ್ ಮಹರ್ ಇಷ್ಟೇ ನೀಡಬೇಕೆಂಬ ನಿಯಮ ಅಧಿಕೃತವಾಗಿ ಹದೀಸುಗಳಲ್ಲಿ ಯಾವುದೇ ಉಲ್ಲೇಖವಿಲ್ಲ. ಆದರೆ ಆ ಸಂದರ್ಭಕನ್ನುಸಾರ ಹಕ್ಕ್ ಮಹರ್ ನಿಶ್ಚಯಿಸಿಕೊಳ್ಳಬಹುದು. ಅಂದರೆ ಪ್ರಸಕ್ತ ಸಮಯದಲ್ಲಿನ ಜನರ ಜೀವನ ಮಟ್ಟವೇ ಆಧಾರವಾಗಿರುತ್ತದೆ.

ನಮ್ಮ ಪ್ರಾಂತ್ಯದಲ್ಲಿರುವ ಒಂದು ಕೆಟ್ಟ ಸಂಪ್ರದಾಯವೆಂದರೆ ಕೇವಲ ಹೊರ ಜಗತ್ತಿನ ತೋರಿಕೆಗಾಗಿ ಹಾಗೂ ಆಡಂಬರಕ್ಕಾಗಿ ಲಕ್ಷಾಂತರ ಹಕ್ಕ್ ಮಹರ್ ಅನ್ನು ನಿಶ್ಚಿಸಿಕೊಳ್ಳುತ್ತಾರೆ. ಆದರೆ ಅವರ ಉದ್ದೇಶ ಬೇರೆಯೇ ಅಗಿರುತ್ತದೆ. ಅದೇ ರೀತಿ ವಧುವಿನ ಕಡೆಯವರು ವರನನ್ನು ತನ್ನ ಹಿಡಿತದಲ್ಲಿ ಇರಿಸಿಕೊಳ್ಳಲು ಈ ರೀತಿಯ ಹಕ್ಕ್ ಮಹರ್‌ಅನ್ನು ನಿಶ್ಚಯಿಸಿಕೊಳ್ಳುತ್ತಾರೆ. ಆದರೆ ಇದರಿಂದ ಬೇರೆ ಅನೇಕ ಸಮಸ್ಯೆಗಳು ಉದ್ಭವವಾಗುತ್ತದೆ. **(ಮಲ್‌ಫೂಝಾತ್, ಸಂಪುಟ-3, ಪುಟ-284)**

**(ರಿಶ್ತನಾತ ವಿಭಾಗ, ನಝಾರತ್ ಇಸ್ಲಾಹ್ ವ ಇರ್ಷಾದ್, ಖಾದಿಯಾನ್)**

## ಪವಿತ್ರ ಖುರ್‌ಆನ್

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

ಪವಿತ್ರ ಖುರ್‌ಆನ್ ವಜ್ರವೈಢೂರ್ಯಗಳ ಒಂದು ನಿಧಿಯಾಗಿದೆ.ಆದರೆ ಜನರು ಅದನ್ನು ಅರಿತಿಲ್ಲ. ***(ಮಲ್‌ಫೂಝಾತ್ ಸಂಪುಟ-2, ಪುಟ-344)***

ಪವಿತ್ರ ಖುರ್‌ಆನಿನ ಮಹಿಮೆ ಎಷ್ಟು ಉನ್ನತವಾಗಿದೆಯೆಂದರೆ ಅದು ಎಲ್ಲ ಮಹಿಮೆಗಳಿಗಿಂತ ಶ್ರೇಷ್ಠವಾಗಿದೆ. ಅದು **"ಹಕಮ್"** ಆಗಿದೆ ಎಂದರೆ ಅಂತಿಮವಾಗಿ ತೀರ್ಮಾನ ಮಾಡುವುದು; ಅದು **"ಮುಹೈಮಿನ್"** ಎಂದರೆ ಅದು ಎಲ್ಲ ಮಾರ್ಗದರ್ಶನಗಳ ಸಂಗ್ರಹವಾಗಿದೆ. ಅದು ಎಲ್ಲ ಸಾಕ್ಷ್ಯಾಧಾರಗಳನ್ನು ತನ್ನಲ್ಲಿ ಜಮಾಯಿಸಿದೆ ಮತ್ತು ಶತ್ರು ಸಮೂಹವನ್ನು ಚೆಲ್ಲಾಪಿಲ್ಲಿಯಾಗಿ ಮಾಡಿದೆ. ಅದರಲ್ಲಿ ಎಲ್ಲ ಸಂಗತಿಗಳ ವಿವರಣೆಗಳಿವೆ. ಅದರಲ್ಲಿ ನಡೆಯಲಿರುವ ಮತ್ತು ನಡೆದ ಸಂಭವಗಳ ಸಮಾಚಾರಗಳಿವೆ. ಅಸತ್ಯವು ಅದರ ಹಿಂದಿನಿಂದಾಗಲೀ ಮುಂದಿನಿಂದಾಗಲೀ ನುಸುಳಲಾರದು. ಅದು ಸರ್ವ ಶಕ್ತನಾದ ದೇವನ ಪ್ರಕಾಶವಾಗಿದೆ. ***(ಖುತ್‌ಬ ಇಲ್‌ಹಾಮಿಯಾ; ರೂಹಾನೀ ಖಝಾಇನ್ ಸಂಪುಟ-16, ಪುಟ-103)***

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಪುಟ-137) ಮಾಡಲಿ, ನಾವು ಈ ಬೇಡಿಕೆಗೆ ತಕ್ಕುದಾದ ವ್ಯವಹಾರ ಮಾಡದಿದ್ದರೆ ನಿಸ್ಸಂಶಯವಾಗಿಯೂ ನಾವು ಸುಳ್ಳುಗಾರರು ಮತ್ತು ಬುರುಡೆ ಬಿಡುವವರಾಗುತ್ತೇವೆ. ನಮ್ಮ ಎಲ್ಲಾ ವ್ಯವಹಾರ ಭರವಸೆಗೆ ಯೋಗ್ಯವಾಗಿರುವುದಿಲ್ಲ. (ಅದೇ ಪುಟ 139).

**ಅರಬಿ ಉಮ್ಮುಲ್ ಅಲ್‌ಸಿನಾ ಆಗಿರುವ ಕುರಿತು ಐದು ಸಾವಿರ ರೂಪಾಯಿಗಳ ವೈಭವಯುತ ಪಂಥ್ವಾನದ ಬಹುಮಾನ**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಅರಬಿ ಭಾಷೆ ಉಮ್ಮುಲ್ ಸಿನಾ ಆಗಿರುವ ಕುರಿತು ಐದು ಸಾವಿರ ರೂಪಾಯಿಗಳ ವೈಭವಯುತ ಪಂಥ್ವಾಹ್ವಾನದ ಬಹುಮಾನ ಪ್ರಸ್ತಾಪಿಸುತ್ತಾ ನುಡಿಯುತ್ತಾರೆ.

ನಾವು ಈ ವಾದದಲ್ಲಿ ಸುಳ್ಳುಗಾರರಾದರೆ ಅರಬಿ ಭಾಷೆಯಲ್ಲಿ ಐದು ಶ್ರೇಷ್ಠ ವೈಶಿಷ್ಟ್ಯಗಳಿವೆ. ಅದನ್ನು ನಾವು ಬರೆದಾಗಿದೆ. ಯಾರಾದರು ಸಂಸ್ಕೃತ ಅಥವಾ ಇನ್ನಿತರ ಭಾಷೆಯಲ್ಲಿಯೂ ಅರಬಿ ಭಾಷೆಗೆ ಸಮಾನವಾದ ಶ್ರೇಷ್ಠತೆಗಳಿವೆ ಅಥವಾ ಅದರ ಮೇಲೆ ವಿಜಯ ಸಾಧಿಸುವಂತಿದೆ ಎಂದು ಸಾಬೀತುಪಡಿಸುವುದಾದರೆ, ನಾವು ತಡಮಾಡದೆ ಐದು ಸಾವಿರ ರೂಪಾಯಿಗಳ ನಿಶ್ಚಿತವಾದ ವಾಗ್ದಾನ ಮಾಡುತ್ತೇವೆ. ನೆನಪಿರಲಿ ಈ ಬಹುಮಾನದ ವಾಗ್ದಾನ ಆ ನಿಷ್ಪ್ರಯೋಜಕ ಸಾಧಾರಣ ಜನರ ಪತ್ರಿಕೆಗಳಂತಲ್ಲ. ಅವರು ಭಾವಿಸುವಂತೆ ಇವು ಕೇವಲ ಬುರುಡೆ ಮಾತುಗಳಲ್ಲ. ಅದರಿಂದ ಪಡೆಯುವುದು ಬಿಡುವುದು ಏನಿಲ್ಲ. ಬದಲಾಗಿ ನಾವು ಘೋಷಣೆ ಮಾಡಿ ಹೇಳುತ್ತೇವೆ. ಅಂತಹ ವ್ಯಕ್ತಿಯೊಬ್ಬನು ತನಗೆ ಬೇಕಾದ ರೀತಿಯಲ್ಲಿ ದೃಢಪಡಿಸಿಕೊಳ್ಳಲಿ ಮತ್ತು ಬೇಕಾದರೆ ಆ ರೂಪಾಯಿಗಳನ್ನು ಸರಕಾರಿ ಬ್ಯಾಂಕಿನಲ್ಲಿ ಇಟ್ಟುಕೊಳ್ಳಲಿ. ಇಲ್ಲ ಯಾವುದೇ ಆರ್ಯ ಜನರ ಬಳಿ ಈ ರೂಪಾಯಿಗಳನ್ನು ಜಮೆ ಮಾಡಿಸಿಕೊಳ್ಳಲಿ.

**ಅರಬಿ ಭಾಷೆಯನ್ನು ಉಮ್ಮುಲ್ ಅಲ್‌ಸಿನಾ ಎಂದು ಸಂಕೇತಿಸುವ ವಚನಗಳು**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ **"ಖಲಖಲ್ ಇನ್ಸಾನ, ಅಲ್ಲಮಹುಲ್ ಬಯಾನ್."** ಅದರ ಅರ್ಥ ಅಲ್ಲಾಹನು ಮನುಷ್ಯನನ್ನು ಸೃಷ್ಟಿಸಿ ಅವನಿಗೆ ಮಾತನಾಡಲು ಕಲಿಸಿದನು ಎಂದು. ಬೇರೆ ವಚನವು ಅದರೆಡೆ ಸಂಕೇತಿಸುತ್ತದೆ. **"ಅರಬಿಯುಂ ಮಬೀನ್"** ಅಂದ ಹಾಗೆ ಅಲ್ಲಾಹನು ಮುಬೀನ್ ಪದವನ್ನು ಒಂದು ವಿಶಿಷ್ಠ ಗುಣವನ್ನು ಸೂಚಿಸಲು ನೀಡಿದ್ದಾನೆ ಮತ್ತು ಈ ಬಯಾನ್ ಎಂಬ ಪದ ಅರಬಿಯ ಗುಣಗಳ ವೈಶಿಷ್ಟ್ಯವಾಗಿದೆ. ಮತ್ತ್ಯಾವ ಬೇರೆ ಭಾಷೆಯೂ ಈ ಗುಣವನ್ನು ಹೊಂದಿರುವುದಿಲ್ಲ.

ಈ ವಚನದ ಬಗ್ಗೆ ನೋಡಿರಿ ಅರ್‌ರಹ್ಮಾನ್, ಅಲ್ಲಮಲ್ ಖುರ್‌ಆನ್, ಈ ವಚನದಲ್ಲಿ ಎರಡು ಪದಗಳು ವಿಶೇಷವಾಗಿವೆ. ಇದರಲ್ಲಿ ಖುರ್‌ಆನ್‌ನ ಶ್ರೇಷ್ಠತೆಯ ವಿವರವಿದೆ. ಅದನ್ನು ಪಠಿಸದೆ ಅದರ ಬಗ್ಗೆ ಯೋಚಿಸಿ ಗಮನಹರಿಸದೇ ಈ ಉದ್ದೇಶ ಈಡೇರುವುದಿಲ್ಲ. ಅರಬಿ ಭಾಷೆಯನ್ನು ಕಲಿಯಿರಿ ಮತ್ತು ಅದರಲ್ಲಿ ಪರಿಣಿತಿ ಸಾಧಿಸಿರಿ. ಹಾಗೆ ಅದೇ ಗುರಿ ಇಟ್ಟುಕೊಂಡು ಅಲ್ಲಾಹನು, ವಚನ ಅಲ್ಲಮಲ್ ಖುರ್‌ಆನ್‌ಗೆ ಆಧ್ಯತೆ ನೀಡಿದ್ದಾನೆ. ಅದಾದ ನಂತರ ವಚನ ಅಲ್ಲಮಹುಲ್ ಬಯಾನ್ ಅನ್ನು ತಂದಿದೆ. ಅಂದರೆ ಅವರು ಹೀಗೆ ಹೇಳಿದರು. ಇಲ್ಲಿ ಉಪಕಾರ ಎಡು ರೀತಿಯದ್ದಾಗಿದೆ. 1) ಖುರ್‌ಆನ್‌ನ್ನು ಅವತರಿಸಿದ್ದು ಮತ್ತು ಅರಬಿ ಭಾಷೆಯನ್ನು ವ್ಯಾಖ್ಯಾತುರ್ಯಕ್ಕೆ ವಿಶಿಷ್ಠಗೊಳಿಸಿ ಆ ಧರ್ಮಕ್ಕೆ ಅರಬಿಯ ಶಿಕ್ಷಣ ನೀಡಿದೆ. ಮಾನವ ಕುಲ ಅದರ ಉಪಯೋಗ ಪಡೆಯಬೇಕು. ಏಕೆಂದರೆ ಅರಬಿ ಭಾಷೆಯು ಉನ್ನತ ಶಿಕ್ಷಣಗಳ ನಿಧಿಯಾಗಿದೆ. ಅದರಲ್ಲಿ ಅಲ್ಲಾಹನ ಕಡೆಯಿಂದ ಬಂದ ಶಾಶ್ವತವಾದ ಮಾರ್ಗದರ್ಶನಗಳಿವೆ. ಅದು ವಿವೇಕವಂತರಿಂದ ಗೌಪ್ಯವೇನಲ್ಲ. (ಅದೇ ಪುಟ 188)

**ತೌರಾತಿನಿಂದ ಅರಬಿ ಉಮ್ಮುಲ್ ಅಲ್‌ಸಿನಾ ಆಗಿರುವುದಕ್ಕೆ ಸಾಕ್ಷ್ಯ**

ತೌರಾತಿನ ಮೂಭೂತ ಶಿಕ್ಷಣದಿಂದ ಸಾಬೀತಾಗುವುದೇನೆಂದರೆ ಪ್ರಾರಂಭದಲ್ಲಿ ಭಾಷೆ ಒಂದೇ ಆಗಿತ್ತು. ಮತ್ತೆ ಅಲ್ಲಾಹನು ಬಾಬೂಲ್ ಸ್ಥಳದಲ್ಲಿ ಅವರಲ್ಲಿ ಭಿನ್ನತೆ ಉಂಟು ಮಾಡಿದನು. (ಪೈದಾಯಿರ್ ಬಾಬ್ 11) ಈ ವಿಷಯ ಎಲ್ಲಾ ಪಕ್ಷದವರಿಗೆ ಸಮ್ಮತಿಯಾಗಿದೆ. ಇದೀಗ ಕರ್ಬಲಾ ಇದ್ದ ಜಾಗದಲ್ಲಿಯೇ ಆಗ ಬಾಬುಲ್ ನಗರವಾಗಿತ್ತು. ತೌರಾತಿನ ಈ ವಿವರಣೆಯಿಂದ ಅರಬಿ ಭಾಷೆಯು ಉಮ್ಮುಲ್ ಅಲ್‌ಸಿನಾ ಅಂದರೆ ಎಲ್ಲಾ ಭಾಷೆಗಳಿಗೆ ಮೂಲವಾಗಿತ್ತು ಎಂದು ಸಾಬೀತಾಗುತ್ತದೆ. (ಅದೇ ಪುಟ 135)

**ಸ್ವರ್ಗದಲ್ಲಿ ಆದಮ್‌ರ ಭಾಷೆ ಅರಬಿಯಾಗಿತ್ತು**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿದರು.

ಇಬ್ನು ಅಸಾಕರ್ ಸುಪ್ರಸಿದ್ಧ ಇತಿಹಾಸಕಾರರಾಗಿದ್ದಾರೆ. ಅವರು ತನ್ನ ಇತಿಹಾಸದಿಂದ ವಿವರಿಸುತ್ತಾರೆ. ಸಂಶೋಧನೆಗಳಿಂದ ತಿಳಿದುಬಂದಿದೆ. ಸ್ವರ್ಗದಲ್ಲಿ ಆದಮರ ಭಾಷೆ ಅರಬಿಯೇ ಆಗಿತ್ತು. ಅದೇ ರೀತಿ ಅಬ್ದುಲ್ ಮಲಿಕ್ ಹಝ್ರತ್ ರಸೂಲುಲ್ಲಾಹ್(ಸ) ರಿಂದ ಒಂದು ಹದೀಸ್ ವರದಿ

ಮಾಡುತ್ತಾರೆ. ಇವರ ವಿದ್ವಾಂಸರು ಸಹ ಒಂದು ಹದೀಸ್ ವರದಿ ಮಾಡುತ್ತಾರೆ. ಇತರ ವಿದ್ವಾಂಸರು ಸಹ ಇತರ ವರದಿಗಳಿಂದ ವಿವರಣೆ ನೀಡುತ್ತಾರೆ. ಅವರು ಹೇಳಿದರು. ಅಲ್ಲಾಹನಿಂದ ಅವತರಿಸಿದ ಅರಬಿ ಭಾಷೆಯೇ ಪ್ರಥಮ ಭಾಷೆಯಾಗಿದೆ. ಅದು ಆದಮರ ಜೊತೆಯಲ್ಲಿ ಸ್ವರ್ಗದಿಂದ ಅವತರಿಸಿದೆ. ಮತ್ತೆ ಒಂದು ಕಾಲಘಟ್ಟದ ನಂತರ ಬದಲಾವಣೆಗಳು ಬಂದವು. ಅದರಿಂದ ಬೇರೆ ಭಾಷೆಗಳು ಸೃಷ್ಟಿಯಾದವು. ಬದಲಾವಣೆ ಹೊಂದಿದ್ದ ನಂತರ ಮೊದಲ ಭಾಷೆ ಸೃಷ್ಟಿಯಾಗಿದ್ದು ಸೀಯಾನಿ ಭಾಷೆಯಾಗಿತ್ತು (ಅದೇ ಪುಟ 214)

**ಖುರ್‌ಆನ್ ಎಲ್ಲಾ ದೈವಿಕ ಧರ್ಮ ಗ್ರಂಥಗಳ ಮೂಲ, ಮಕ್ಕ ಎಲ್ಲಾ ಲೋಕದ ಮೂಲ, ಅರಬಿ ಎಲ್ಲಾ ಭಾಷೆಗಳ ಮೂಲ**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿದರು.

ಅಲ್ಲಾಹನ ಆ ನುಡಿಯ ಬಗ್ಗೆ ಚಿಂತಿಸು. (**ವ ಕಝಾಲಿಕ ಔಹೈನ ಇಲೈಕ ಖುರ್‌ಆನನ್ ಅರಬೀಯಲ್ಲಿತುನ್‌ಝಿರ ಉಮ್ಮಲ್ ಖುರ ವಮನ್ ಹೌಲಹ** (ಶೂರಅ-8) ಇದೇ ರೀತಿ, ಅರಬಿ ಭಾಷೆಯಲ್ಲಿರುವ ಖುರ್‌ಆನ್ ನಾವು ನಿನಗೆ ಅವತೀರ್ಣಗೊಳಿಸಿದ್ದೇವೆ. ಮಾತ್ರ ನಗರ (ಮಕ್ಕ) ಮತ್ತು ಅದರ ಸುತ್ತಮುತ್ತಲಿನಲ್ಲಿರುವವರಿಗೆ ನೀನು ಮುನ್ನೆಚ್ಚರಿಕೆ ನೀಡಲಿಕ್ಕೋಸರ) ಖುರ್‌ಆನ್ ಅರಬಿಯಾಗಿದೆ, ಮಕ್ಕ ಎಲ್ಲಾ ನಿವಾಸಗಳ ಮೂಲವಾಗಿದೆ, ಎಚ್ಚರಿಸು ಮತ್ತು ಅದರಲ್ಲಿ ಆ ವ್ಯಕ್ತಿಗೆ ದೃಷ್ಟಾಂತವಿದೆ. ಯಾರು ಅಲ್ಲಾಹನ ಭಯಪಡುವನೋ ಮತ್ತು ಸತ್ಯವನ್ನು ಶೋಧಿಸುವನೋ ಆತನು ನಿರಾಕರಿಸಲಾರನು. ನೀನು ಬಲ್ಲವನಾಗಿದ್ದೆ. ನಮ್ಮ ಪ್ರವಾದಿ ಖಾತಮಲ್ ಅಂಬಿಯಾ(ಸ) ಸರ್ವಲೋಕಗಳಿಗೆ ಎಚ್ಚರಿಕೆ ನೀಡುವವನಾಗಿದ್ದಾರೆ ಮತ್ತು (ನಝೀರ್) ಎಂದೇ ಅಲ್ಲಾಹನು ಅವರ ಹೆಸರಿಟ್ಟಿರುವವನು. ಅವನು ಸತ್ಯವಂತರಲ್ಲಿ ಸತ್ಯ ಪ್ರಭೂ ಆಗಿದ್ದಾನೆ. ಅಂದ ಹಾಗೆ ಅದರಿಂದ ಸಾಬೀತಾಯಿತು. ಮಕ್ಕ ಇಡೀ ಪ್ರಪಂಚಕ್ಕೆ ಮೂಲಸ್ಥಾನವಾಗಿದೆ. ಎಲ್ಲಿ ಅಲ್ಪ ಬಹುಸಂಖ್ಯಾತರ ಜನ್ಮಸ್ಥಾನವಾಗಿದೆ. ಅದರೊಂದಿಗೆಯೇ ಸಾಬೀತಾಯಿತು. ಖುರ್‌ಆನ್ ಎಲ್ಲಾ ದೈವಿಕ ಗ್ರಂಥಗಳ ಮೂಲವಾಗಿದೆ ಮತ್ತು ಅದೇ ಪರಿಪೂರ್ಣ ಅರಬಿ ಭಾಷೆಯಲ್ಲಿ ಅವತರಿಸಿದೆ. ಅದು ಎಲ್ಲದರಲ್ಲೂ ಆವರಿಸಿದೆ. ಅದು ದೈವಿಕ ಇಚ್ಛೆಯ ನಿರ್ಣಯವಾಗಿತ್ತು. ಅದು ಪರಿಪೂರ್ಣ ಗ್ರಂಥ ಖಾತಮುಲ್ ಕುತುಬ್ (ಅಂತ್ಯ ಗ್ರಂಥ) ವಾಗಿದೆ. ಅದೇ ಭಾಷೆಯಲ್ಲಿ ಅವತರಿಸಿತು, ಅದು ಭಾಷೆಗಳ ಬೇರಾಗಿದೆ. ಮತ್ತು ಎಲ್ಲಾ ಸೃಷ್ಟಿಗಳ ಭಾಷೆಯ ಮೂಲವಾಗಿದೆ. ಅದು ಅರಬಿಯಾಗಿದೆ. (ಅದೇ ಪುಟ-209)

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ.

ನನ್ನ ಮೇಲೆ ಬಹಿರಂಗೊಳಿಸಲಾಗಿದೆ. ಮೊದಲ ಎಲ್ಲಾ ಗ್ರಂಥಗಳ ಮೂಲ ಖುರ್‌ಆನ್ ಆಗಿದೆ. ಅಂತೆಯೇ ಅರಬಿ ಎಲ್ಲಾ ಭಾಷೆಗಳಿಗೆ ಮೂಲವಾಗಿದೆ ಮತ್ತು ಅಲ್ಲಾಹನ ಕಡೆಯಿಂದಾಗಿದೆ. ಬೇರೆ ಭಾಷೆಗಳು ಅದರ ಪುತ್ರ ಪುತ್ರಿಯ ರೀತಿಯಲ್ಲಿವೆ. ನಿಸ್ಸಂಶಯವಾಗಿಯೂ ಆ ಎಲ್ಲಾ ಭಾಷೆಗಳು ಅದರ ಸಂತಾನಗಳ ಅಥವಾ ಸಂಬಂಧಿತ ಸೇವಕರಂತಿವೆ. ಪ್ರತಿಯೊಬ್ಬರು ಅದೇ ಪಾತ್ರದಿಂದ ಮತ್ತು ಅದೇ ಔತಣಕೂಟದಿಂದ ಸೇವನೆ ಮಾಡುತ್ತಿದ್ದಾರೆ ಮತ್ತು ಪ್ರತಿಯೊಬ್ಬನೂ ಅದೇ ಫಲದ ರುಚಿ ಅನುಭವಿಸುತ್ತಿದ್ದಾರೆ. ಅದೇ ಊಟದಿಂದ ತನ್ನ ಹೊಟ್ಟೆ ತುಂಬಿಸುತ್ತಿದ್ದಾರೆ ಮತ್ತು ಅದೇ ನದಿಯಿಂದ ನೀರು ಕುಡಿಯುತ್ತಿದ್ದಾರೆ ಮತ್ತು ಅದೇ ವಸ್ತ್ರದಿಂದ ಅವರು ತಮ್ಮ ಧರಿಸುವ ಬಟ್ಟೆ ತಯಾರಿಸಿದ್ದಾರೆ (ಅದೇ ಪುಟ 184)

**ಏಕದೇವತ್ವದ ವಿಶ್ವಾಸವು ಅಲ್ಲಾಹನು ಕಲಿಸಿದ ಭಾಷೆಯ ಹೊರತಾಗಿ ಪೂರ್ಣಗೊಳ್ಳಲು ಸಾಧ್ಯವಿಲ್ಲ**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ. ಭಾಷೆಯು ಮಾನವ ಜನ್ಮದ ಪೀಠಿಕೆಯಾಗಿದೆ ಮತ್ತು ಮಾನವ ಆತ್ಮದ ವಾಸ್ತವವಾಗಿದೆ. ಮತ್ತು ಅಲ್ಲಾಹನ ಒಂದು ದೊಡ್ಡ ಅನುಗ್ರಹವಾಗಿದೆ. ಏಕದೇವತ್ವದ ವಿಶ್ವಾಸವು ಅದರ ಹೊರತಾಗಿ ಪೂರ್ಣಗೊಳ್ಳಲು ಸಾಧ್ಯವಿಲ್ಲ. ಒಬ್ಬ ಏಕದೇವ ವಿಶ್ವಾಸಿಯು ಅಲ್ಲಾಹನ ಯಾವುದೇ ಕಾರ್ಯದಲ್ಲಿ ನ್ಯೂನತೆ ಕಲ್ಪಿಸಲು ಸಾಧ್ಯವೇ. ಅಥವ ಬಹುದೇವಾರಾಧಕರ ವಿಶ್ವಾಸ ರೀತಿಯಲ್ಲಿ ಸಹಭಾಗಿತ್ವ ಹೊಂದುವನೆ, ಯಾರು ಅಲ್ಲಾಹನ ಹಕ್ಕನ್ನು ಬಲ್ಲವರಾಗಿರುವರು. ಎಲ್ಲಾ ಒಳಿತುಗಳ ಉಗಮ ಅವನಾಗಿದ್ದಾನೆ. ಮತ್ತು ಎಲ್ಲಾ ಸೃಷ್ಟಿಗಳ ಸೃಷ್ಟಿಕರ್ತ ಅವನಾಗಿದ್ದಾನೆ. ನಮ್ಮ ಪ್ರಭೂ ಎಲ್ಲಾ ಹಂತದಿಂದಲೂ ಪರಿಪೂರ್ಣವಾಗಿದ್ದಾನೆ. ಯಾವುದೇ ನ್ಯೂನತೆ ಅವನ ಅಸ್ತಿತ್ವದಲ್ಲಿ ಮತ್ತು ಗುಣಗಳಲ್ಲಿ ಬೆಟ್ಟು ಮಾಡಲು ಸಾಧ್ಯವಿಲ್ಲ. ಅವನು ಸ್ತುತಿಸಲ್ಪಟ್ಟವನಾಗಿದ್ದಾನೆ. ಯಾವ ಪಾಪವು ಅವನಿಂದ ಎಸಗಲು ಸಾಧ್ಯವಿಲ್ಲ, ಅವನು ಅತ್ಯಂತ ಪರಿಶುದ್ಧನು ಯಾವ ಕಲೆ ಅವನಲ್ಲಿರಲು ಸಾಧ್ಯವಿಲ್ಲ, ಅದೇ ಮಾರ್ಗದರ್ಶನ ಪಡೆಯುವ ದಾರಿಯಾಗಿದೆ. ಅಂದ ಹಾಗೆ ಅಲ್ಲಾಹನಾಣೆ ಅವನು ಪ್ರತಾಪಶಾಲಿ ಹಾಗೂ ದಯವಂತನಾಗಿರುವನು, ಮನುಷ್ಯನು ಎಲ್ಲಾ ಗುಣಗಳನ್ನು ಅವನ ಅನುಗ್ರಹದಿಂದಲೇ ಪಡೆದವನಾಗಿದ್ದಾನೆ. ಅವನು ಉತ್ತಮ ಅನುಗ್ರಹದಾಯಕನಾಗಿದ್ದಾನೆ. ಹಾಗಿರುವಾಗ ಮಾತನಾಡುವ ಅನುಗ್ರಹ ಅಲ್ಲಾಹನು ಮನುಷ್ಯನಿಗೆ ದಯಪಾಲಿಸಲಿಲ್ಲ, ಮನುಷ್ಯನನ್ನು ಸೃಷ್ಟಿಸಿ ಈ ಅನುಗ್ರಹ ನೀಡಲಿಲ್ಲ ಎಂದು ಜನರು ಹೇಗೆ ಹೇಳಲು ಸಾಧ್ಯ? ಅಂದ ಹಾಗೆ ಇದು ಅಪ್ಪಟ ಸುಳ್ಳು ಹಾಗೂ ದೌರ್ಜನ್ಯವಾದೀತು (ಅದೇ ಪುಟ 196)

**ಒಂದು ಆಕ್ಷೇಪ-ಭಾಷೆ ಶಿಕ್ಷಣದಿಂದ ಬರುತ್ತದೆ ಎಂದು ಮತ್ತು ಅದರ ಉತ್ತರ**

ಸಯ್ಯದ್‌ನಾ ಹಝ್ರತ್ ಮಸೀಹ್ ಮೂಊದ್(ಅ) ಹೇಳುತ್ತಾರೆ. ನಿನ್ನ ಮನಸ್ಸು ಸಂಶಯಪಡದಿರಲಿ. ಮನುಷ್ಯನು ಮಾತನಾಡುತ್ತ ಜನ್ಮ ತಾಳುವುದಿಲ್ಲ. ಬದಲು ಈ ಕಲೆಯನ್ನು ಶಿಕ್ಷಣದಿಂದ ಪಡೆಯುತ್ತಾನೆ. ನಾವು ದಿಟವಾಗಿ ಪರೀಕ್ಷಿಸುತ್ತಿದ್ದೇವೆ. ಈ ಆಕ್ಷೇಪ ನಿಜ ಅರ್ಥದಲ್ಲಿ ನಿನ್ನ ಮೇಲಿದೆಯೇ ಹೊರತು ನಿನಗಾಗಿ ಅಲ್ಲ. ಅಂದ ಹಾಗೆ ನಿನ್ನನ್ನು ಸುಧಾರಿಸಿಕೋ, ನಿನ್ನ ಹೃದಯವನ್ನು ಮಲಗಿರುವ ಜನರ ಹಾಗೆ ಆಲಸ್ಯ ಪಡಬೇಡ. ಏಕೆಂದರೆ ನೀನು ಸ್ವೀಕರಿಸಿರುವವನು. ಮಾತನಾಡುವುದು ಕೇವಲ ಶಿಕ್ಷಣದಿಂದ ಪಡೆಯಲಾಗುತ್ತದೆ ಎಂದು, ಅಂತೂ ಈ ಮಾತು ಸ್ವೀಕರಿಸುವುದು ಸಹ ನಿನಗೆ ಅನಿವಾರ್ಯವಾಯಿತು. ಮೊದಲ ಮನುಷ್ಯನು ಸಹ ಹೇಳಿಕೊಡದೇ ಸ್ವಯಂ ಕಲಿಯಲಿಲ್ಲ ಎಂದು. ಅಂದ ಹಾಗೆ ಈ ಬಗ್ಗೆ ನೀನು ಮೊದಲು ನಿರಾಕರಿಸಿದ ಮಾತನ್ನು ಸ್ವೀಕರಿಸಿದ ಹಾಗಾಯಿತು. ಅದೇ ಸರಿಯಾಗಿರುತ್ತದೆ. ನೀನು ಯೋಚಿಸುವವನಾದರೆ, ಚಿಂತಿಸುವವನಾದರೆ, ಈ ಮಾತು ನಿಚ್ಚಳಗೊಂಡಿದೆ. ಜನರು ಪರೀಕ್ಷಿಸಿ ಆಗಿದೆ. ಪರೀಕ್ಷೆ ಮತ್ತು ಭಾವನೆ ಒಮ್ಮತದಿಂದ ಈ ಸಾಕ್ಷ್ಯ ನೀಡಿದೆ. ಜನ್ಮ ತಾಳುವ ಮಗುವಿಗೆ ಶಿಕ್ಷಣ ನೀಡದೆ ಬಿಟ್ಟು ಬಿಟ್ಟರೆ ಮತ್ತು ಯಾರಾದರು ಕಲಿಸುವವನು, ಅವನ ಭಾಷೆ ಅವನಿಗೆ ಕಲಿಸದಿದ್ದರೆ, ಅವನು ಸ್ವಯಂ ತಂತಾನೆ ಮಾತನಾಡಲು ಶಕ್ತನಾಗುವುದಿಲ್ಲ. ಕರೆಯುವವರಿಗೆ ಉತ್ತರವು ನೀಡಲಾಗುವುದಿಲ್ಲ. ಬದಲು ಮೂಕನ ಹಾಗೆ ಮೌನವಾಗಿರಬೇಕಾಗುತ್ತದೆ. (ಅದೇ ಪುಟ 200)

**ಜೀವನ ಹಗೂ ಜೀವನಕ್ಕಾಗಿ ಮಾತು ಅಲ್ಲಾಹನಿಂದ ಆಗಿದೆ.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ.

ಅಲ್ಲಾಹನು ಎಲ್ಲಾ ಜೀವಿಗಳಲ್ಲಿ ಮಾತನಾಡುವುದನ್ನು ಮನುಷ್ಯನಿಗೆ ಮಾತ್ರ ವಿಶಿಷ್ಟಗೊಳಿಸಿದ್ದಾನೆ. ಹೇಗೆ ಮನುಷ್ಯನು ಜೀವನವನ್ನು ಕೇವಲ ಅಲ್ಲಾಹನಿಂದ ಪಡೆದಿರುವನೋ ಅದೇ ರೀತಿ ಮಾತನಾಡುವ ಶಕ್ತಿ ಸಹ ಕೇವಲ ಆ ಕಾರುಣ್ಯಮಯಿ ಭಗವಂತನಿಂದ ಮಾತ್ರ ಪಡೆದಿರುತ್ತಾನೆ. ಅದೇ ಮಾತು ಸತ್ಯವಾಗಿದೆ. ನೀನು ಸಂಶಯ ಪಡೆಯುವ ಜನರಲ್ಲಿ ಸೇರಿರುವನೇ, ನೀನು ನನಗೆ ನಿನ್ನ ತಾಯಿ ಮಾತನಾಡುವುದನ್ನು ಕಲಿಸಿದ್ದಾಳೆ ಎಂಬ ಗುಮಾನಿ ಇದೆಯೇ, ಹಾಗಾದರೆ ನಿನಗಿಂತ ಮೊದಲು ತಾಯಿಗೆ ಕಲಿಸಿದವರು ಯಾರು, ಯಾರು ಅವರನ್ನು ವಾಕ್ಚಾತುರ್ಯದ ಪಾಠ ನೀಡಿರುವರು. ಅಂದ ಹಾಗೆ ಅಜ್ಞಾನಿಗಳಲ್ಲಿ ಸೇರಬೇಡ. (ಅದೇ ಪುಟ 206)

**ಅಲ್ಲಾಹನು ಮನುಷ್ಯನಿಗೆ "ಸಮೀಅ್" ಆಲಿಸುವ ಶಕ್ತಿಯನ್ನು ನೀಡಿದ್ದಾನೆ.**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: ಅಲ್ಲಾಹನು ಮನುಷ್ಯನ ಹೆಸರು ಸಮೀಅ ಎಂದು ಹೆಸರಿಸಿದ್ದಾನೆ. ಅಂದರೆ ಶ್ರವಣಶಕ್ತಿ ಹೊಂದಿದವನು. ಅಂದ ಹಾಗೆ ಸಮೀಅ ಪದದಿಂದ, ಪ್ರಾರಂಭಿಕ ಕಾಲದಲ್ಲಿ ಅಲ್ಲಾಹನೇ ಅವನಿಗೆ ಕೇಳುವ ಶಕ್ತಿ ನೀಡಿರುವನು. ಅವನಿಗೆ ಅವನ ಸ್ಥಿತಿಯಲ್ಲಿ ಬಿಡಲಿಲ್ಲ. (ಅದೇ ಪುಟ 211)

**ವರ್ಣ ಮತ್ತು ಭಾಷೆ ಒಂದೇ ಆಗಿತ್ತು.**

**ವ ಮಿನ್ ಆಯಾತಿಹಿ ಖಲ್‌ಖುಸ್ಸಮಾವಾತಿ ವಲ್ ಅರ್‌ಝಿ ವಖ್ತಿಲಾಫು ಅಲ್‌ಸಿನತುಕುಮ್ ವಲ್‌ವಾನುಕುಮ್. ಇನ್ನ ಫೀ ಝಾಲಿಕ ಲಆಯಾತಿಲ್ಲಿಲ್ ಆಲಮೀನ್.** (ಅರ್ರೂಮ್-23) ಅನುವಾದ: ಆಕಾಶಗಳ ಮತ್ತು ಭೂಮಿಯ ಸೃಷ್ಟಿ ಹಾಗೂ ನಿಮ್ಮ ಭಾಷೆ ಮತ್ತು ವರ್ಣಗಳ ವೈವಿಧ್ಯ. ಇದು ಸಹ ಅವನ ದೃಷ್ಟಾಂತಗಳಲ್ಲಿ ಸೇರಿದೆ. ಜ್ಞಾನಿಗಳಿಗೆ ಅದರಲ್ಲಿ ನಿಜವಾಗಿಯೂ ದೃಷ್ಟಾಂತಗಳಿವೆ.

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ. ಖುರ್‌ಆನ್‌ನಲ್ಲಿ ಭಾಷೆ ಮತ್ತು ವರ್ಣಗಳ ಭಿನ್ನತೆಯ ಕುರಿತು ಒಂದೇ ಸ್ಥಳದಲ್ಲಿ ವಿವರವಿದೆ. ಅಂದ ಹಾಗೆ ಅಲ್ಲಾಹನು ಈ ಎರಡರ ಕುರಿತು ಒಂದೆ ಸ್ಥಳದಲ್ಲಿ ವಿವರ ನೀಡಿದ ತಾತ್ಪರ್ಯವು. ಒಂದು ಕಾಲದಲ್ಲಿ ಭಾಷೆಯು ಒಂದೇ ಆಗಿತ್ತು. ಹಾಗೂ ವರ್ಣ ಸಹ ಒಂದು ಕಾಲದಲ್ಲಿ ಒಂದೇ ಆಗಿತ್ತು. ಮತ್ತೆ ಬರಬರುತ್ತಾ ಒಂದು ಕಾಲದ ನಂತರ ಎರಡರಲ್ಲೂ ಭಿನ್ನತೆ ಉಂಟಾಯಿತು. (ಅದೇ ಪುಟ 215)

ಮುಂದಿನ ಸಂಚಿಕೆಯಲ್ಲಿ ಇನ್‌ಶಾಅಲ್ಲಾಹ್ ನಾವು ಉಮ್ಮುಲ್ ಅಲ್‌ಸಿನಾ ಮತ್ತು ದಿವ್ಯವಾಣಿಯ ಭಾಷೆ ಆಗಿರುವ ಕುರಿತು ಸಯ್ಯದನಾ ಹಜ್‌ರತ್ ಮಸೀಹ್ ಮೌಊದ್(ಅ) ರವರ ಕೆಲ ಅಧ್ಯಾಪನೆಗಳು ಪ್ರಸ್ತುತಪಡಿಸುವೆವು. **(ಮನ್ಸೂರ್ ಅಹ್ಮದ್ ಮಸ್ರೂರ್)**

**ಸೂಚನೆ**

ಓದುಗರಲ್ಲಿ ವಿನಂತಿಸಿಕೊಳ್ಳುವುದೇನಂದರೆ ಈ ಪತ್ರಿಕೆಯ ಬಗ್ಗೆ ತಮ್ಮ ಅಭಿಪ್ರಾಯಗಳು ಹಾಗೂ ಸಲಹೆ ಸೂಚನೆಗಳಿದ್ದಲ್ಲಿ ನಮ್ಮನ್ನು ನೇರವಾಗಿ ಸಂಪರ್ಕಿಸಿ.

**email: www.kannadabadar@gmail.com**
**Mob or whatsapp: 8050330779**

**ಹುಝೂರ್(ಸ) ನುಡಿದರು:** ***ಉರೀತುನ್ನಾರ ಫಇಝಾ ಅಕ್ಸರು ಅಹ್ಲಿಹನ್ನಿಸಾಉ ಯಕ್ಫುರೂನ್***
**ಅಂದರೆ ನನಗೆ ನರಕದಲ್ಲಿ ತನ್ನ ಕರ್ಮಗಳಿಂದಾಗಿ ಮಹಿಳೆಯರೇ ಹೆಚ್ಚಾಗಿ ಕಂಡರು. ಅವರು ತನ್ನ ಪತಿಗೆ ಅವಿಧೇಯತೆ, ಕೃತಘ್ನತೆ ತೋರುವವರಾಗಿದ್ದರು.**

## ಸಯ್ಯದ್‌ನಾ ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್ (ಅಬಿಅ) ರೊಡನೆ ಕೇಳಲಾದ ಪ್ರಮುಖ ಪ್ರಶ್ನೆಗಳ ವಿವೇಕಪೂರ್ಣ ಉತ್ತರಗಳು

**ಸೂಚನೆ:–** ಸಯ್ಯದ್‌ನಾ ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅಬಿಅ) ವಿವಿಧ ಸಂದರ್ಭಗಳಲ್ಲಿ ತನ್ನ ಪತ್ರಗಳಲ್ಲಿ ಮತ್ತು MTA ಯ ವಿವಿಧ ಕಾರ್ಯಕ್ರಮಗಳಲ್ಲಿ ಪ್ರಮುಕ ಸಮಸ್ಯೆಗಳ ಕುರಿತು ನೀಡಲಾದ ನಿರ್ದೇಶನಗಳು. ಅವುಗಳಲ್ಲಿ ಕೆಲವು ಓದುಗರ ಹಿತದೃಷ್ಟಿಯಿಂದ ಅಲ್–ಫಝ್ಲ್ International ನ ಕೃಪೆಯಿಂದ ಪ್ರಕಟಿಸಲಾಗುತ್ತದೆ.

***(ಬದರ್ ಸಂಚಿಕೆ–36ರ ಉಳಿದ ಭಾಗ ಮುಂದುವರಿಸಲಾಗಿದೆ)***

ಆದುದರಿಂದ ಈ ಹದೀಸಿನ ತಾತ್ಪರ್ಯ ನರಕದಲ್ಲಿ ಪುರುಷರಿಗಿಂತ ಮಹಿಳೆಯರು ಹೆಚ್ಚಾಗಿರುವರು ಎಂಬುದು ಖಂಡಿತ ಅಲ್ಲ. ಎರಡನೆಯದಾಗಿ ಇಲ್ಲಿ ಮಹಿಳೆಯರಿಗೆ ನರಕಕ್ಕೆ ಹೋಗಲು ಕಾರಣ ಸಹ ತಿಳಿಸಲಾಗಿದೆ. ಅವರು ಸಣ್ಣ ಸಣ್ಣ ವಿಷಯದಲ್ಲಿ ಅಲ್ಲಾಹನ ಅನುಗ್ರಹಗಳನ್ನು ಉಪೇಕ್ಷಿಸಿ ಕೃತಘ್ನತೆ ತೋರಿಸುವರು. ಅದು ಅವರ ಪತಿಯರ ಮೂಲಕ ಅಲ್ಲಾಹನು ಅವರ ಮೇಲೆ ದಯಪಾಲಿಸಿರುತ್ತಾನೆ.

ಮತ್ತೆ ಅದಕ್ಕೆ ವಿರುದ್ಧವಾಗಿ ಹದೀಸುಗಳಲ್ಲಿ ಸತ್ಕರ್ಮಿಗಳಾದ ಹಾಗೂ ಸಜ್ಜನರಾದ ಮಹಿಳೆಯರ ಪಾದದಡಿಯಲ್ಲಿ ಸ್ವರ್ಗವಿರುವ ಸುವಾರ್ತೆಯು ನೀಡಿದೆ. ಅದು ಯಾವ ಪುರುಷರ ಕುರಿತು ಇಲ್ಲ.

ಅದಲ್ಲದೇ ಇಸ್ಲಾಂ ಧರ್ಮವು ಪುರುಷರ ಮತ್ತು ಸ್ತ್ರೀಯರ ಕೆಲ ಹಕ್ಕುಗಳ ಹಾಗೂ ಕರ್ತವ್ಯಗಳ ಕುರಿತು ಅವರ ಪ್ರಕೃತಿಗನುಗುಣವಾಗಿ ಬೇರೆ ಬೇರೆ ನಿಗದಿಪಡಿಸಿದೆ. ಪುರುಷನಿಗೆ ಶ್ರಮವಹಿಸಿ ಕುಟುಂಬದ ಎಲ್ಲಾ ಅಗತ್ಯಗಳನ್ನು ಪೂರ್ಯಸಬೇಕೆಂದು ಕಡ್ಡಾಯಗೊಳಿಸಾಯಿತು ಮತ್ತು ಮಹಿಳೆಯರಿಗೆ ಕುಟುಂಬ ಮತ್ತು ಮಕ್ಕಳ ರಕ್ಷಣೆ ಹಾಗೂ ತರಬೇತಿಯ ಹೊಣೆ ನೀಡಲಾಯಿತು. ಅಂದರೆ ಹೊರಗಿನ ಓಡಾಟ ಶ್ರಮ ಪುರುಷನ ಸಾಮರ್ಥ್ಯಕೆ ತಕ್ಕಂತೆ ಇದ್ದುದ್ದನ್ನು ಕಂಡು ಅದಕ್ಕಾಗಿ ಆಯ್ದುಕೊಂಡನು. ಮತ್ತು ಹೆಣ್ಣಿನ ಪ್ರಕೃತಿಗನುಗುಣವಾಗಿ ಅವಳ ಗೌರವ ದೃಷ್ಟಿಯಿಂದ ಕೌಟುಂಬಿಕ ಉಸ್ತುವಾರಿಯ ಹೊಣೆ ನೀಡಿದನು.

ಹಝ್ರತ್ ರಸೂಲುಲ್ಲಾಹ್(ಸ) ರವರ ಉಪದೇಶವಿದೆ. ಸ್ತ್ರೀಯರಲ್ಲಿ ಧರ್ಮ ಮತ್ತು ಬುದ್ಧಿಯಲ್ಲಿ ಒಂದು ರೀತಿಯ ಕೊರತೆಯಿದೆ ಅದರಲ್ಲಿ ಯಾವ ಸಂಶಯವೂ ಇಲ್ಲ. ಏಕೆಂದರೆ ಇದು ಸಹ ಹೆಣ್ಣಿನ ಪ್ರಕೃತಿಗೆ ಅನುಗುಣವಾಗಿ ಈ ಮಾತನ್ನು ಹೇಳಲಾಗಿದೆ. ಧರ್ಮದ ಕೊರತೆ ಅಂತೂ ಹಝ್ರತ್ ರಸೂಲುಲ್ಲಾಹ್(ಸ) ಸ್ವಯಂ ವಿವರಿಸಿಕೊಟ್ಟಿದ್ದಾರೆ. ಹೆಣ್ಣಿನ ವಯಸ್ಸಿನ ಒಂದು ದೀರ್ಘ ಅವಧಿಯವರೆಗೆ ಪ್ರತಿ ತಿಂಗಳ ಕೆಲ ದಿನಗಳು ಎಲ್ಲ ಪ್ರಕಾರದ ಆರಾಧನೆಗಳಿಂದ ಬಿಡುವಿರುವ ದಿನವೂ ಇರುತ್ತದೆ. ಹಾಗೆ ನೋಡಿದರೆ ಇದು ಸಹ ಒಂದು ರೀತಿಯಲ್ಲಿ ಅಲ್ಲಾಹನ ಉಪಕಾರವಾಗಿದೆ. ಅದಾಗ್ಯೂ ಬುದ್ಧಿ ಕಡಿಮೆ ಎಂಬ ಮಾತು ಮಹಿಳೆಯನ್ನು ಅಪಹಾಸ್ಯಕ್ಕಾಗಿ ಹೇಳಲಾಗಲಿಲ್ಲ, ಬದಲು ಅದರ ತಾತ್ಪರ್ಯ ಮಹಿಳೆಯ ಸರಳತೆ ಆಗಿದೆ. ಅದರ ಸಾಕ್ಷಿ ಇಂದು ಮಹಿಳೆ ಸ್ವಯಂ ಪ್ರದರ್ಶಿಸಿದೆ. ಏಕೆಂದರೆ ಪಾಶ್ಚಿಮಾತ್ಯ ಲೋಕದ ಪುರುಷರು ಸ್ವಾತಂತ್ರ್ಯದ ಹೆಸರಿನಲ್ಲಿ ತನ್ನ ಪ್ರಯೋಜನಕ್ಕಾಗಿ ಯಾವ ರೀತಿ ಹೆಣ್ಣುಗಳನ್ನು ಬಳಸಿಕೊಳ್ಳುತ್ತಿದ್ದಾರೆ. ಅದು ಎಲ್ಲರ ಮುಂದಿದೆ. ಹಾಗೆ ಸತ್ಯಸಂಧರಾದ ಹಝ್ರತ್ ಮುಹಮ್ಮದ್ ಮುಸ್ತಫಾ(ಸ) ರವರ ಆ ಹೇಳಿಕೆ ಸ್ಪಷ್ಟ ಸಾಕ್ಷ್ಯವಾಗಿದೆ.

ಪುರುಷನು ತನ್ನ ದಾಹ ತೀರಿಸಿಕೊಳ್ಳಲು ಅವಳಿಗೆ ಮನೆಯ ನಾಲ್ಕು ಗೋಡೆಗಳಿಂದ ಹೊರ ತಂದು ಪೇಟೆಯಲ್ಲಿ ತಂದಿಟ್ಟಿದ್ದಾನೆ. ಇಸ್ಲಾಂ ಧರ್ಮವು ದಿನೋಪಚಾರದ ಹೊಣೆ ಪುರುಷರಿಗೆ ಹೊತ್ತಿಸಿ, ಮಹಿಳೆಯರ ಸರಳತೆಯ ಉಪಯೋಗ ಪಡೆಯಲು ಹೊಣೆಗಾರಿಕೆಯನ್ನು ವಿಂಗಡಿಸಿದ್ದನು. ಪುರುಷನು ಅದರಲ್ಲಿಯೂ ಹಸ್ತಕ್ಷೇಪ ನಡೆಸಿ ಮಹಿಳೆಯರನ್ನು ದುರುಪಯೋಗಪಡಿಸಿಕೊಂಡರು. ಪುರುಷರಂತೆ ವಿವಿಧ ವಿಭಾಗಗಳಲ್ಲಿ ಬಳಸಿಕೊಂಡರೂ ತಾನೇ ಅವಳ ಮೇಲೆ ತನ್ನ ದಾಹ ತೀರಿಸಿಕೊಳ್ಳಲು ಕೆಟ್ಟ ದೃಷ್ಟಿ ಹಾಗೂ ಕೆಟ್ಟ ಪ್ರಯತ್ನಗಳಿಗೆ ಮುಂದಾಗುತ್ತಾರೆ.

ಸರಿಯಾಗಿ ಯೋಚಿಸಿ ನೋಡುವುದಾದರೆ ಪಶ್ಚಿಮ ಲೋಕದ ಸ್ತ್ರೀ ಪುರುಷರು ಸಮಾನರು ಎಂಬ ಘೋಷಣೆಯು ಕೇವಲ ಒಂದು ಟೊಳ್ಳು ಘೋಷಣೆಯಾಗಿದೆ. ಅದೇ ಪಶ್ಚಿಮ ಲೋಕದಲ್ಲಿ ಪುರುಷರ ಸಮಾನ ಸ್ತ್ರೀಯರು ಆಡಳಿತ ನಡೆಸುವಂತಹ ಯಾವ ಒಂದು ದೇಶವು ಇಲ್ಲ. ಅದೇ ಪಶ್ಚಿಮ ದೇಶಗಳಲ್ಲಿ ಹಲವು ಸ್ಥಳಗಳಲ್ಲಿ ಯಾವ ರೀತಿ Package ಒಬ್ಬ ಪುರುಷನಿಗೆ ನೀಡಲಾಗುತ್ತದೋ ಸಾಮಾನ್ಯವಾಗಿ ಅದೇ ಹುದ್ದೆ ಸ್ತ್ರೀಗೆ ನೀಡಲಾಗುವುದಿಲ್ಲ. ಇಸ್ಲಾಂ ಮಾತುಗಳು ಮಹಿಳೆಯ ಸರಳತೆಗೆ ಹಿಡಿದ ಕನ್ನಡಿಯಾಗಿದೆ.

ಎಲ್ಲಿಯವರೆಗೆ ಪವಿತ್ರ ಖುರ್‌ಆನ್‌ನಲ್ಲಿ ಪುರುಷರಿಗೆ ಮೇಲುಸ್ತುವಾರಿಕೆ ನೀಡಿದ ವಿಷಯವಿದೆಯೋ ಸ್ವಯಂ ಪವಿತ್ರ ಖುರ್‌ಆನ್ ಅದರ ಕಾರಣಗಳನ್ನು ವಿವರಿಸಿಕೊಟ್ಟಿದೆ. ಒಂದು ಕಾರಣ ಹೀಗೆ ಹೇಳಲಾಗಿದೆ. ಅಲ್ಲಾಹನು ಅವರ ಪೈಕಿ ಕೆಲವರಿಗೆ ಬೇರೆ, ಕೆಲವರಿಗಿಂತ (ಪುರುಷರಿಗೆ ಸ್ತ್ರೀಯರಿಗಿಂತ) ಕೆಲವು ಮೇಲ್ಮೈಯನ್ನು ಕೊಟ್ಟಿರುವುದರಿಂದಲೂ ಅವರು ತಮ್ಮ ಧನವನ್ನು ಖರ್ಚು ಮಾಡುತ್ತಾರೆ.

ಒಬ್ಬರ ಪೈಕಿ ಇನ್ನೊಬ್ಬರಿಗೆ ನೀಡಲಾದ ಮೇಲ್ಮೈ ಮಾನವ ಪ್ರಕೃತಿಗೆ ಅನುಗುಣವಾಗಿದೆ. ಏಕೆಂದರೆ ನಾವು ಲೋಕದ ವ್ಯವಸ್ಥೆಯಲ್ಲಿ ಕಾಣುತ್ತೇವೆ. ಎಲ್ಲಾ ಕಡೆ ಒಬ್ಬರ ಪೈಕಿ ಇನ್ನೊಬ್ಬನು ಕೆಳದರ್ಜೆಯಲ್ಲಿರುತ್ತಾನೆ. ಒಂದು ವೇಳೆ ಲೋಕದಲ್ಲಿ ಎಲ್ಲ ಜನರು ಸಮಾನರೆಂದು ಆಗುತ್ತಿದ್ದರೆ, ಅಥವಾ ಹೀಗೆ ಹೇಳಬಹುದು. ಎಲ್ಲ ಜನರು ಬಾದಶಾಹರಾದರೆ (ಅರಸರಾದರೆ) ಈ ಲೋಕವು ಒಂದು ದಿನವು ನಡೆಯುವುದಿಲ್ಲ. ಆದುದರಿಂದ ಅಲ್ಲಾಹನು ಕೆಲ ಜನರಿಗೆ ದೊಡ್ಡವರು ಮತ್ತು ಕೆಲವರಿಗೆ ಸಣ್ಣವರು, ಕೆಲವರಿಗೆ ಶ್ರೀಮಂತರು ಮತ್ತು ಕೆಲವರಿಗೆ ಬಡವರನ್ನಾಗಿ ಮಾಡಿದನು. ನಾವು ನೋಡಬಹುದಾಗಿದೆ. ಎಲ್ಲಾ ದೇಶಗಳಲ್ಲಿ ಎಲ್ಲಾ ಜನರಿಗೆ ಸಂಪುಟದ ಭಾಗವನ್ನಾಗಿ ಮಾಡಿಕೊಂಡರೆ ಆ ದೇಶ ನಡೆಯಲು ಸಾಧ್ಯವಾಗುವುದಿಲ್ಲ. ಅದೇ ರೀತಿ ಕೌಟುಂಬಿಕ ವ್ಯವಸ್ಥೆಯನ್ನು ನಡೆಸಲು ಪುರುಷನಿಗೆ ಸ್ತ್ರೀಯರ ಪೈಕಿ ಹೆಚ್ಚು ಅಧಿಕಾರವನ್ನು ನೀಡಲಾಗಿದೆ. ಆದರೆ ಯಾವ ರೀತಿ ಒಬ್ಬ ಸರಕಾರ ಪ್ರಧಾನ ದೇಶದ ಸಂಪುಟದ ಪೈಕಿ ಹೆಚ್ಚು ಅಧಿಕಾರಗಳನ್ನು ಹೊಂದಿರುತ್ತಾನೆ. ಅದರ ಜೊತೆಯಲ್ಲಿ ಹೆಚ್ಚು ಕರ್ತವ್ಯಗಳ್ನು ಸಹ ಹೊಂದಿರುತ್ತಾನೆ. ಅದೇ ರೀತಿ ಇಸ್ಲಾಂ ಧರ್ಮ ಸ್ತ್ರೀಯರ ಪೈಕಿ ಪುರುಷರಿಗೆ ಹೆಚ್ಚು ಹೊಣೆಗಾರಿಕೆಗಳನ್ನು ನೀಡಲಾಗಿದೆ.

ಅಂದ ಹಾಗೆ ಹಕ್ಕುಗಳ ಮತ್ತು ಕರ್ತವ್ಯಗಳ ನೆಲೆಯಲ್ಲಿ ಇಸ್ಲಾಮಿನ ವ್ಯವಸ್ಥೆ ಪ್ರಕೃತಿಗೆ ಅನುಗುಣವಾಗಿದೆ. ಅದರಲ್ಲಿ ಯಾವ ತಾರತಮ್ಯವೂ ಇಲ್ಲ.

**ಪ್ರಶ್ನೆ:** ಮಹಿಳೆಯೊಬ್ಬಳು ಹಝ್ರತ್ ಖಲೀಫತುಲ್ ಮಸೀಹ್ ಚತುರ್ಥರು (ರಾಬಿ) ಅವರ ಚಿಂತನ ಸಭೆಯಲ್ಲಿ ಹೇಳಲಾದ ಒಂದು ಅಧ್ಯಾಪನೆಯ ಮೇರೆಗೆ ಚಿಕ್ಕಪ್ಪ (ಚಚಾ) ಮತ್ತು ಮಾವ ಅವರಿಂದ ಪರದೆ ಮಾಡುವ ವಿಷಯದಲ್ಲಿ ಹುಝೂರ್(ಅಬಿಅ) ಅವರಿಂದ ಮಾರ್ಗದರ್ಶನ ಬಯಸಿದಳು. ಆಗ ಹುಝೂರ್ ಅನ್ವರ್ ಒಂದನೇ ಜೂನ್ 2020 ರ ತನ್ನ ಪತ್ರದಲ್ಲಿ ಈ ಕೆಳಗಿನ ರೀತಿಯಲ್ಲಿ ಉತ್ತರಿಸಿದರು.

**ಉತ್ತರ:** ತಾವು ತಮ್ಮ ಪತ್ರದಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಚತುರ್ಥರು (ರಹ) ರವರ ಯಾವ ಅಧ್ಯಾಪನೆ ಕಡೆ ಬೊಟ್ಟು ಮಾಡಿದ್ದೀರಿ. ಅದು ಸೂರ: ಅನ್ನೂರ್ ವಚನ ಸಂಖ್ಯೆ 32 ಆಗಿದೆ. ಅದು ಸಭೆಯಲ್ಲಿ ಒಂದು ಪ್ರಶ್ನೆಯ ಉತ್ತರವಾಗಿ ಹೇಳಲಾಗಿದೆ.

ಈ ಮಾತು ಸರಿಯಾಗಿದೆ. ಈ ವಚನದಲ್ಲಿ ಪರದೆ ಮಾಡದಂತೆ ನಿರ್ದೇಶಿಸುವ ಸಂಬಂಧಗಳಲ್ಲಿ ಕಾಕ ಮತ್ತು ಮಾಮಾ ಸೇರಿಲ್ಲ. ಆದರೆ ಈ ಎರಡು ಸಂಬಂಧಿಕರ ಪರಿಗಣನೆ ಉತ್ತರಾಧಿಕಾರಿಗಳಲ್ಲಿಯೇ ಬರುತ್ತದೆ. ಹುಝೂರ್ ಅವರ ಸಹ ಅದೇ ಮಾತನ್ನೇ ಹೇಳಿರುತ್ತಾರೆ. ಸೂರಃ ಅನ್ನಿಸಾಅನಲ್ಲಿ ವಿವರಿಸಲಾದ ಖುರ್‌ಆನ್‌ನ ಆಜ್ಞೆಗಳಿಂದಲೂ ಈ ಮಾತು ಸಾಬೀತಾಗಿದೆ. ಏಕೆಂದರೆ ಇವರಿಬ್ಬರಿಂದಲೂ ವಿವಾಹ ನಿಷಿದ್ಧವಿದೆ.

ಅಲ್ಲದೇ ಹದೀಸುಗಳಲ್ಲಿ ಹಝ್ರತ್ ಆಯಿಶಾ(ರ) ವರದಿ ಮಾಡಿದ್ದಾರೆ. ಅವರು ಕೇಳಿದ ಪ್ರಯುಕ್ತ ಹುಝೂರ್(ಸ) ಅವರಿಗೆ ಕಾಕ ಅವರಿಂದ ಪರದೆ ಮಾಡದಂತೆ ಆಜ್ಞೆ ನೀಡಿದ್ದರು. ಆದರೆ ಅದರ ಜೊತೆಯಲ್ಲಿಯೆ ಪರದೆ ವಿಷಯದಲ್ಲಿ ಈ ಮಾತನ್ನು ದೃಷ್ಟಿಯಲ್ಲಿರಿಸಿಕೊಳ್ಳಬೇಕಾಗಿದೆ. ಇಸ್ಲಾಮಿ ಶಿಕ್ಷಣದನ್ವಯ ನಿಷೇಧಿತ ಸಂಬಂಧಿಕರಲ್ಲಿಯೂ ಎಲ್ಲಾ ದರ್ಜೆಯ ಸಂಬಂಧಿಕರ ಪರದೆಯ ಬಿಡುವಿನ ವಿಷಯ ಒಂದು ಪ್ರತ್ಯೇಕ ಭಾವನೆ ಹೊಂದಿರುತ್ತದೆ. ಅಂದ ಹಾಗೆ ಸೂರ ಅನ್ನೂರ್‌ನಲ್ಲಿ ಯಾವ ನಿಷೇಧಿತ ಸಂಬಂಧಿಕರೊಡನೆ ಪರದೆ ಮಾಡದಿರಲು ನಿರ್ದೇಶಿಸಲಾಗಿದೆ. ಅವರಲ್ಲಿಯೂ ಪ್ರತಿ ಸಂಬಂಧಿಕನ ಇನ್ನಿತರ

***(ಪುಟ ಸಂಖ್ಯೆ–09 ರಲ್ಲಿ ಮುಂದುವರಿಸಲಾಗಿದೆ)***

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly **BADAR** Qadian
Distt: Gurdaspur (Pb.) INDIA Qadian - 143516
Postal Reg. No: 3000039689/2020-22 Vol No.02, Thursday, 28 October 2021, Issue No. 43

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.575/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 32ರ ವರದಿಯ ಉಳಿದ ಭಾಗ)**

* ಮಿತ್ರರೊಬ್ಬರು ಸಗೀರ್ ಸಾಹಿಬ್ ಹೇಳಿದರು. ಇದು ನಾನು ಭಾಗವಹಿಸುತ್ತಿರುವ ಎರಡನೆಯ ಜಲ್ಸವಾಗಿದೆ. ಈ ಜಲ್ಸ ನನಗೆ ತುಂಬಾ ಪ್ರಾಮುಖ್ಯತೆ ಹೊಂದಿದ್ದಾಗಿದೆ. ಏಕೆಂದರೆ ಈ ಜಲ್ಸದಲ್ಲಿ ನನಗೆ ಬೈಅತ್ ಮಾಡಿ ಅಹ್ಮದಿಅತ್ ಸೇರುವ ಭಾಗ್ಯ ದೊರೆತಿದೆ. ನನ್ನ ಯಾವ ಪ್ರಶ್ನೆಯು ಇಲ್ಲ. ನಾನು ಕೇವಲ ಹುಝೂರ್ ಅನ್ವರ್‌ಗೋಸ್ಕರ ದುಆ ಮಾಡುತ್ತೇನೆ. ಅಲ್ಲಾಹನು ಹುಝೂರ್‌ರಿಗೆ ಆರೋಗ್ಯ ದಯಪಾಲಿಸಲಿ, ದೀರ್ಘಾಯುಷ್ಯ ನೀಡಲಿ. ಆಮೀನ್.

* Aldina ಎಂಬ ಮಹಿಳೆಯೋರ್ವಳು ಹೇಳಿದರು. ಇಲ್ಲಿ ಬರುವುದಕ್ಕಿಂತ ಮುಂಚೆ ಇಸ್ಲಾಂ ಧರ್ಮದ ಬಗ್ಗೆ ಏನೂ ಜ್ಞಾನವಿರಲಿಲ್ಲ. ಜಲ್ಸದಲ್ಲಿ ಭಾಗವಹಿಸಿ ಖಲೀಪತುಲ್ ಮಸೀಹ್ ಅವರ ಭಾಷಣಗಳನ್ನು ಕೇಳಿ ಇಸ್ಲಾಮಿನ ನಿಜವಾದ ಶಿಕ್ಷಣ ತಿಳಿಯುವಂತಾಯಿತು. ಇದಕ್ಕಿಂತ ಮುಂಚೆ ತಿಳಿಯದಂತಹ ವಿಷಯ ತಿಳಿಯುವಂತಾಯಿತು. ಜಲ್ಸದ ಎಲ್ಲಾ ಏರ್ಪಾಡುಗಳು ತುಂಬಾ ಚೆನ್ನಾಗಿದ್ದವು.

* Emina ಸಾಹಿಬಾ ಹೇಳಿದರು. ನಾನು ಅಲ್ಲಾಹನ ಅನುಗ್ರಹದಿಂದ ಅಹ್ಮದಿಯಾಗಿದ್ದೇನೆ. ನನ್ನ ಪುತ್ರ Balkan ನಲ್ಲಿ ಬಹುಶಃ ಪ್ರಥಮ ವಖ್ಫೆ ನೌ ಆಗಿದ್ದಾನೆ. ನನ್ನ ಬಹುಮುಖ್ಯ ಅಭಿಲಾಷೆ ಎಂದರೆ ನನ್ನ ಮಗ ಸಾತ್ವಿಕನು ಮತ್ತು ಧರ್ಮಸೇವಕನಾಗಲಿ ಎಂದು. ನನ್ನ ತಾಯಿ ಯುದ್ಧ ಪರಿಣಾಮವಾಗಿ ಮಾನಸಿಕ ರೋಗಿಯಾಗಿದ್ದಾಳೆ. ನನ್ನ ತಂದೆಯ ಹೃದಯದಲ್ಲಿ ಇಸ್ಲಾಮಿಗೋಸ್ಕರ ಯಾವ ಸ್ಥಾನವು ಇಲ್ಲ.

ಅವರು ಹೇಳಿದರು. ನಾನು ನನ್ನ ಕುಟುಂಬದಲ್ಲಿ ಪ್ರಥಮ ಅಹ್ಮದಿ ಮಹಿಳೆಯಾಗಿದ್ದೇನೆ. ಪರದೆ ಧರಿಸುವ ಕಾರಣ ತಮ್ಮವರಿಂದಲೇ ಕಷ್ಟಗಳನ್ನು ಎದುರಿಸಬೇಕಾಯಿತು. ಆದರೆ ಈ ಕಷ್ಟಗಳಿಂದ ನಾನು ಹೆದರುವವಳಲ್ಲ. ನನಗೆ ಇವೆಲ್ಲ ಯಾವ ಲೆಕ್ಕಕ್ಕೂ ಇಲ್ಲ. ಅವರು ತಮ್ಮ ಹೆತ್ತವರ ಮಾರ್ಗದರ್ಶನಕ್ಕಾಗಿ (ಹಿದಾಯತ್) ಪ್ರಾರ್ಥಿಸಲು ಕೇಳಿಕೊಂಡರು. ಅಲ್ಲಾಹನು ತನ್ನ ತಂದೆಯವರಿಗೆ ಅಹ್ಮದಿಅತ್ತಿನ ಸ್ವೀಕಾರಕ್ಕಾಗಿ ಅವರ ಮನಸನ್ನ ಮೃದುಗೊಳಿಸಲಿ.

ಆಗ ಹುಝೂರ್ ಹೇಳಿದರು. ಅಲ್ಲಾಹನು ಅನುಗ್ರಹಿಸುವಂತಾಗಲಿ ಮತ್ತು ಎಲ್ಲ ಕಷ್ಟಕಾರ್ಪಣ್ಯಗಳನ್ನು ದೂರ ಮಾಡಲಿ.

* ರೋಮನ್ ಸಮುದಾಯದ ಅಧ್ಯಕ್ಷರಾಗಿರುವ ಅತಿಥಿಯೊರ್ವರು ಹೇಳುತ್ತಾರೆ. ನಾನು ಎಲ್ಲದಕ್ಕಿಂತ ಹೆಚ್ಚು ಯುದ್ಧಗಳಿಂದ ಪ್ರಭಾವಿತ ಆದ ಒಂದು ಕ್ಷೇತ್ರದಿಂದ ಸಂಬಂಧಿಸಿದವನಾಗಿದ್ದೇನೆ. ಯುದ್ಧದ ನಡುವೆ ಅರಬರ ಮೆಲೆ ಆಕ್ರಮಣವಾಯಿತು. ನಾವು ರೋಮನ್ ಜನರು ಒಟ್ಟುಗೂಡಿ ಅದನ್ನು ಎದುರಿಸಿದೆವು. ಸ್ವಯಂ ನಾನು ತನ್ನ ಇಬ್ಬರು ಪುತ್ರರೊಂದಿಗೆ ಯುದ್ಧದಲ್ಲಿ ಭಾಗವಹಿಸಿದ್ದೆನು. ಒಬ್ಬ ಪುತ್ರ ಹುತತ್ಮನಾದನು. ನಾನು ಆ ಕಷ್ಟಕಾಲವನ್ನು ಎಂದೂ ಮರೆಯಲು ಸಾಧ್ಯವಿಲ್ಲ. ಇದೀಗ ನಾನು ರೋಮನ್ ಜನರ ಪ್ರಗತಿಗಾಗಿ ಪ್ರಯತ್ನಿಸುತ್ತಿದ್ದೇನೆ. ಒಂದು ಕಾರ್ಯಕ್ರಮದಲ್ಲಿ ಅಹ್ಮದಿಯಾ ಜಮಾಅತ್‌ನೊಂದಿಗೆ ಸಂಬಂಧ ಸ್ಥಾಪಿತವಾಯಿತು. ಇಂದು ಇಲ್ಲಿ ಹುಝೂರ್‌ರನ್ನು ನೋಡಿ ತುಂಬ ಸಂತೋಷವಾಗುತ್ತಿದೆ.

ಹುಝೂರ್ ಅವರಿಗೆ ಸಂಬೋಧಿಸಿ ಹೇಳಿದರು. ಅಲ್ಲಾಹನು ನಿಮ್ಮ ಪ್ರಯತ್ನಗಳನ್ನು ಫಲಪ್ರದರನ್ನಾಗಿ ಮಾಡಲಿ, ನೀವು ನಿಮ್ಮ ಮಕ್ಕಳನ್ನು ಮತ್ತು ಯುವಕರನ್ನು ಶಿಕ್ಷಿತರನ್ನಾಗಿ ಮಾಡಿ. ಶಿಕ್ಷಣ ಹೊರತು ಪ್ರಗತಿ ಅಸಾಧ್ಯ. ಪ್ರಗತಿಗೋಸ್ಕರ ಶಿಕ್ಷಣ ಅನಿವಾರ್ಯವಾಗಿದೆ. ಈ ಕಡೆ ಗಮನಹರಿಸಿ.

* ಓರ್ವ ಸಜ್ಜನ ಅಹ್ಮದಿಯೇತರ ಮಿತ್ರರಾದ Bayro Beganovich ಹೇಳಿದರು. ನನ್ನ ವಯಸ್ಸು 77 ವರ್ಷವಾಗಿದೆ. ನನ್ನ ಜೀವನದಲ್ಲಿ ಅತಿ ಹೆಚ್ಚು ಆಸೆ ಹುಝೂರ್‌ರಿಗೆ ನೋಡುವುದಾಗಿತ್ತು. ಅದು ಇಂದು ಈಡೇರಿದೆ. ಅಲ್ಲಾಹನಾಣೆ! ಇಂದು ನನಗೆ ಮರಣ ಬಂದರೂ ಯಾವ ದೂರು ಇರಲಿಕ್ಕಿಲ್ಲ.

ಹುಝೂರ್ ಹೇಳಿದರು. ಅಲ್ಲಾಹನು ನಿಮ್ಮ ಆರೋಗ್ಯ ಮತ್ತು ವಯಸ್ಸಿನಲ್ಲಿ ಕಾರುಣ್ಯ ತೋರಲಿ. 77 ವರ್ಷ ವಯಸ್ಸೇನೂ ಬಹಳವಲ್ಲ. ಅಲ್ಲಾಹನು ನಿಮಗೆ ಇನ್ನೂ ಹೆಚ್ಚಿನ ವಯಸ್ಸು ಮತ್ತು ಆರೋಗ್ಯ ದಯಪಾಲಿಸಲಿ.

* ಮಿತ್ರರೊಬ್ಬರು ಹೇಳಿದರು. ನಾನು ಜಲ್ಸಕ್ಕೆ ಆಗಮಿಸಿ ತುಂಬ ಸಂತುಷ್ಟನಾಗಿದ್ದೇನೆ. ನನ್ನ ಹೃದಯಕ್ಕೆ ನೆಮ್ಮದಿ ದೊರೆತಿದೆ. ನಮಗೆ ಇಲ್ಲಿ ಮನಶಾಂತಿ ದೊರೆತಿದೆ. ಅತಿಥಿಯೊಬ್ಬರು ಹೇಳಿದರು. ನನ್ನದು ಒಂದೇ ಮಾತು ಇದೆ. ಅದೇನೆಂದರೆ ಜಲ್ಸಕ್ಕೆ ಬಂದು ಮನದಾಳದಿಂದ ತೃಪ್ತನಾಗಿದ್ದೇನೆ.

* ಓರ್ವ ಅಹ್ಮದಿ ಮಹಿಳೆ Salena ಸಾಹಿಬ ಹೇಳಿದರು. ಹುಝೂರ್ ತಮ್ಮ ಭಾಷಣಗಳಲ್ಲಿ ಯಾವ ಕರ್ತವ್ಯಗಳ ಬಗ್ಗೆ ಗಮನಸೆಳೆದಿದ್ದಾರೆ. ಅಲ್ಲಾಹನು ನಮಗೆ ಅ ಉಪದೇಶಗಳ ಮೇಲೆ ನಡೆದುಕೊಳ್ಳುವ ಭಾಗ್ಯ ದಯಪಾಲಿಸುವಂತಾಗಲಿ ಎಂದು ಹುಝೂರರಲ್ಲಿ ಪ್ರಾರ್ಥಿಸಲು ಬೇಡಿಕೊಳ್ಳುತ್ತೇನೆ.

* ಅಲ್ಲಿಯ ಮುಬಲ್ಲಿಗ್ ಸಾಹಿಬರು ಈ ಮಹಿಳೆಯ ಬಗ್ಗೆ ಹೇಳಿದರು. ಅವರು ಪ್ರಚಾರ ಕಾರ್ಯದಲ್ಲಿ ತುಂಬ ಸಕ್ರಿಯರಾಗಿದ್ದಾರೆ. ಧೈರ್ಯವಂತೆಯಾಗಿದ್ದಾರೆ. ವಹಾಬಿಯರ ಜೊತೆಯಲ್ಲಿ ಸಹ ತುಂಬಾ ಧೀರತೆಯಿಂದ ಮಾತನಾಡುತ್ತರೆ. ವಹಾಬಿಯರು ಪುಸ್ತಕಾಲಯಕ್ಕೆ ಬಂದು ಬೇಕಾಬಿಟ್ಟಿ ಮಾತನಾಡಿದರೆ ಅವರಿಗೆ ತುಂಬಾ ಧೈರ್ಯದಿಂದ ಉತ್ತರ ನೀಡುತ್ತಾರೆ.

ಆಗ ಹುಝೂರ್ ಹೇಳಿದರು. ತಮ್ಮ ರಕ್ಷಣೆಯತ್ತಲೂ ಗಮನಹರಿಸಿ.

* ಮಿತ್ರರೊಬ್ಬರು ಹೇಳಿದರು. ನಾನು ಹುಝೂರ್‌ರಿಗೆ ಕೃತಜ್ಞತೆಯನ್ನು ಅರ್ಪಿಸುತ್ತೇನೆ. ಜಲ್ಸದ ಎಲ್ಲಾ ಏರ್ಪಾಡುಗಳು ಅತ್ಯುತ್ತಮವಾಗಿದ್ದವು. ಇಂತಹ ಸುವ್ಯವಸ್ಥಿತ ಕಾರ್ಯಕ್ರಮ ನನ್ನ ಜೀವನದಲ್ಲಿ ಎಂದೂ ಮೊದಲು ನೋಡಿರಲಿಲ್ಲ. ನಾವು ಹುಝೂರ್‌ರ ಆಯುರ್ ಆರೋಗ್ಯಕ್ಕಾಗಿ ಪ್ರಾರ್ಥಿಸುತ್ತೇವೆ. ಹುಝೂರ್ ಅನುಗ್ರಹಗಳನ್ನು ಇನ್ನಷ್ಟು ಹಂಚುತಿರಲಿ.

* ಮಹಿಳೆಯೋರ್ವರು ಹೇಳಿದರು. ನಾನು ತುಂಬಾ ಸಂತುಷ್ಟನಾಗಿದ್ದೇನೆ. ಹಿಂದಿನ ಮೂರು ವರ್ಷಗಳಿಂದ ಜಲ್ಸಕ್ಕೆ ಬರುತ್ತಿದ್ದೇನೆ. ಇನ್ನು ಮರಳಿ ಬೋಸ್ನಿಯಾಕ್ಕೆ ಹೋಗಲು ಮನಸ್ಸು ಒಪ್ಪುತ್ತಿಲ್ಲ. ಜಲ್ಸ ತುಂಬಾ ಒಳ್ಳೆಯದಾಗಿತ್ತು. ಹುಝೂರ್‌ರ ಭಾಷಣಗಳು ಮನದ ಮೆಲೆ ತುಂಬಾ ಪ್ರಭಾವ ಬೀರಿವೆ. ಅಲ್ಲಾಹನು ಅದರಂತೆ ನಡೆದುಕೊಳ್ಳುವ ಭಾಗ್ಯ ದಯಪಾಲಿಸಲಿ.

**(ಮುಂದುವರಿಯುವುದು)**

## *126 ನೇ ಜಲ್ಸಾ ಸಾಲಾನ ಖಾದಿಯಾನ್*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 126ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 24, 25 ಮತ್ತು 26ನೇ ಡಿಸೆಂಬರ್ 2021 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್-ವ-ಇರ್‌ಶಾದ್ ಖಾದಿಯಾನ್)**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE**

**1800-103-2131**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.